ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 15 ಭಾನುವಾರ 2022

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ
Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 29 | ಪುಟಗಳು: 10

ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

₹4

ಮೈಸೂರು ಮಿತ್ರ ಭಾನುವಾರ 15 ಮೇ 2022

ರೋಗ-ರುಜಿನ ಹೆಚ್ಚಳ ಕಾರಣ ಸೂಕ್ತ ಸಮಯದಲ್ಲಿ ಆರೋಗ್ಯ ತಪಾಸಣೆ ಅಗತ್ಯ

- ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕ, ನಾಡೋಜ ಡಾ.ಶ್ರೀ ಭಾಷ್ಯಂ ಸ್ವಾಮೀಜಿ
- ನಯನ ಕುಮಾರ್ಸ್ ಆಸ್ಪತ್ರೆ, ದೇವಸ್ಥಾನದ ಜಂಟಿ ಆಶ್ರಯದಲ್ಲಿ ಉಚಿತ ಆರೋಗ್ಯ ತಪಾಸಣೆ



ಮೈಸೂರಿನ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ದೇವಸ್ಥಾನದ ಸಂಸ್ಥಾಪಕ ನಾಡೋಜ ಪ್ರಶಸ್ತಿ ಪುರಸ್ಕೃತ ಡಾ.ಶ್ರೀ ಭಾಷ್ಯಂ ಸ್ವಾಮೀಜಿ ಚಾಲನೆ ನೀಡಿದರು. ನಯನ ಕುಮಾರ್ಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಅಧ್ಯಕ್ಷ ಕೆ.ಬಿ. ಕುಮಾರ್ ಸೇರಿದಂತೆ ಮತ್ತಿತರರು ಚಿತ್ರದಲ್ಲಿದ್ದಾರೆ.

ಮೈಸೂರು, ಮೇ 14(ಪಿಎಂ)– ಮೈಸೂರಿನ ದಟ್ಟಗಳ್ಳಿಯ ನಯನ ಕುಮಾರ್ಸ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ವಿಜಯನಗರದ ಶ್ರೀಯೋಗಾನರಸಿಂಹಸ್ವಾಮಿ ದೇವಸ್ಥಾನದ ಜಂಟಿ ಆಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣೆ ಶಿಬಿರಕ್ಕೆ ದೇವಸ್ಥಾನದ ಸಂಸ್ಥಾಪಕ, ನಾಡೋಜ ಪ್ರಶಸ್ತಿ ಪುರಸ್ಕೃತ ಡಾ.ಶ್ರೀ ಭಾಷ್ಯಂ ಸ್ವಾಮೀಜಿ ಚಾಲನೆ ನೀಡಿದರು.

ಮೈಸೂರಿನ ವಿಜಯನಗರದ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಂಡಿದ್ದ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಶ್ರೀ ಭಾಷ್ಯಂ ಸ್ವಾಮೀಜಿ, ಆರೋಗ್ಯ ಕಾಪಾಡಿಕೊಳ್ಳುವುದು ಮನುಷ್ಯನಿಗೆ ಅತೀ ಮುಖ್ಯ. ನಾವು ಆಶೀರ್ವಾದ ಮಾಡುವಾಗ ಜೀವನ ಸುಖವಾಗಿರಲಿ ಎನ್ನುವ ಜೊತೆಗೆ ಆರೋಗ್ಯ ಚೆನ್ನಾಗಿರಲಿ ಎಂದೂ ಆಶೀರ್ವದಿಸುತ್ತೇವೆ. ಪ್ರಸ್ತುತ ರೋಗ-ರುಜಿನಗಳು ಹೆಚ್ಚಾಗುತ್ತಿವೆ. ಹೀಗಾಗಿ ಆರೋಗ್ಯ ತಪಾಸಣೆ ಅತ್ಯಂತ ಅಗತ್ಯವಾಗಿದೆ ಎಂದು ಹೇಳಿದರು.

ಮೈಸೂರಿನ ನಯನ ಕುಮಾರ್ಸ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯು ಜನತೆಗೆ ಉತ್ತಮ ವೈದ್ಯಕೀಯ ಸೇವೆ ನೀಡುತ್ತಿದ್ದು, ಇದು ಸಂತಸದ ಸಂಗತಿ. ಆಸ್ಪತ್ರೆ ಅಧ್ಯಕ್ಷ ಕೆ.ಬಿ. ಕುಮಾರ್ ಅವರು ವಿಶೇಷ ಆಸಕ್ತಿ ವಹಿಸಿ, ಸಮಾಜ ಸೇವೆ ಮಾಡಬೇಕೆಂಬ ಸಂಕಲ್ಪ ಮಾಡಿದ್ದಾರೆ. ಈ ನಿಟ್ಟಿನಲ್ಲಿ ಅವರೊಂದಿಗೆ ನಾವು ಕೈಜೊಡಿಸಿ, ದೇವಾಲಯದ ಆವರಣದಲ್ಲಿ ಯೋಗ ಎಲ್ಲರಿಗೂ ಲಭಿಸಲಿ ಎಂಬ ಆಶಯದೊಂದಿಗೆ ಈ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಂಡಿದ್ದೇವೆ. ಈ ರೀತಿಯ ತಪಾಸಣೆ ಶಿಬಿರವನ್ನು ಪ್ರತಿ ವಾರವೂ ನಡೆಸಬೇಕೆಂಬ ಹಂಬಲ ಹೊಂದಿದ್ದೇವೆ ಎಂದು ತಿಳಿಸಿದರು.

ನಯನಕುಮಾರ್ಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ಟ್ರಸ್ಟಿ ಕೆ.ಬಿ. ಕುಮಾರ್ ಮಾತನಾಡಿ, ಶ್ರೀಭಾಷ್ಯಂ ಸ್ವಾಮೀಜಿಯವರ ಆಶೀರ್ವಾದೊಂದಿಗೆ ಶಿಬಿರ ಹಮ್ಮಿಕೊಂಡಿದ್ದು, ದೇವಸ್ಥಾನದ ಭಕ್ತರು ಹಾಗೂ ಸಾರ್ವಜನಿಕರಿಗೆ ಸದುಪಯೋಗವಾಗಲಿ ಎಂಬ ನಿಟ್ಟಿನಲ್ಲಿ ಈ ಶಿಬಿರ ಆಯೋಜಿಸಲಾಗಿದೆ ಎಂದು ಹೇಳಿದರು.

'ಇಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 3ರವರೆಗೆ ತಪಾಸಣೆ ನಡೆಸಲಾಯಿತು. 350ಕ್ಕೂ ಮಂದಿ ಪಾಲ್ಗೊಂಡಿದ್ದರು. ಕಣ್ಣು ಕಿವಿ ತಪಾಸಣೆ, ಮಧುಮೇಹ, ರಕ್ತದೊತ್ತಡ ಸೇರಿದಂತೆ ವಿವಿಧ ತಪಾಸಣೆಗಳನ್ನು ನಡೆಸಲಾಯಿತು. ಜೊತೆಗೆ ಉಚಿತವಾಗಿ ಔಷಧ ವಿತರಣೆ ಮಾಡಲಾಯಿತು' ಎಂದು ನಯನ ಕುಮಾರ್ಸ್ ಆಸ್ಪತ್ರೆ ವ್ಯವಸ್ಥಾಪಕ ವರ್ಗದ ಸಿ.ಶಮಂತ್ ತಿಳಿಸಿದರು.

ಆಸ್ಪತ್ರೆ ವೈದ್ಯರು, ಶುಶ್ರೂಷಕರು ಹಾಗೂ ಸಿಬ್ಬಂದಿ ವರ್ಗ ತಪಾಸಣೆ ನಡೆಸಿದರು. ದೇವಸ್ಥಾನದ ಆಡಳಿತಾಧಿಕಾರಿ ಎನ್. ಶ್ರೀನಿವಾಸನ್, ಪ್ರಧಾನ ಆಗಮಿಕ ಎನ್. ಶೇಷಾದ್ರಿ ಮತ್ತಿತರರು ಹಾಜರಿದ್ದರು.

ಮೈಸೂರಲ್ಲಿ ಧಮ್ಮಪದ ಉತ್ಸವಕ್ಕೆ ಚಾಲನೆ

ವಿಶ್ವಕ್ಕೆ ಬುದ್ಧರ ಶಾಂತಿ, ಮೈತ್ರಿ ಸಂದೇಶ ಅಗತ್ಯ

ಮಹಾ ಬೋಧಿ ಸೊಸೈಟಿ ಪ್ರಧಾನ ಕಾರ್ಯದರ್ಶಿ ಪೂಜ್ಯ ಆನಂದ ಭಿಕ್ಕು ಭಂತೇಜಿ



ಮೈಸೂರಿನ ವಿಜಯನಗರದ ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆ ಆವರಣದ ಧ್ಯಾನ ಮಂದಿರದಲ್ಲಿ ಹಮ್ಮಿಕೊಂಡಿರುವ ಭಗವಾನ್ ಬುದ್ಧನ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸುವ ಮೂಲಕ ಮಹಾ ಬೋಧಿ ಸೊಸೈಟಿ ಅಧ್ಯಕ್ಷ ಪೂಜ್ಯ ಕಸ್ಸಾಪ ಮಹಾತೇರ ಧಮ್ಮಪದ ಉತ್ಸವಕ್ಕೆ ಚಾಲನೆ ನೀಡಿದರು.

ಮೈಸೂರು,ಮೇ 14(ಪಿಎಂ)– ಭಗವಾನ್ ಬುದ್ಧರು ಭಾರತದಲ್ಲಿ ದೊಡ್ಡ ಜ್ಞಾನ ಸಂಸ್ಕೃತಿ ಸೃಷ್ಟಿಸಿದ್ದು, ಇಡೀ ವಿಶ್ವಕ್ಕೆ ಎಂದಿಗಿಂತ ಇಂದು ಅವರ ಶಾಂತಿ ಮತ್ತು ಮೈತ್ರಿ ಸಂದೇಶ ಅಗತ್ಯ ಎಂದು ಬೆಂಗಳೂರಿನ ಮಹಾ ಬೋಧಿ ಸೊಸೈಟಿ ಪ್ರಧಾನ ಕಾರ್ಯದರ್ಶಿ ಪೂಜ್ಯ ಆನಂದ ಭಿಕ್ಕು ಭಂತೇಜಿ ಶನಿವಾರ ಹೇಳಿದರು.

ಮೈಸೂರಿನ ವಿಜಯನಗರದ ಮೊದಲನೇ ಹಂತದ ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆ ಆವರಣದ ಧ್ಯಾನ ಮಂದಿರದಲ್ಲಿ ಕರ್ನಾಟಕ ಬುದ್ಧಧಮ್ಮ ಸಮಿತಿ ಮೈಸೂರು ಹಾಗೂ ಭಾರತೀಯ ಬೌದ್ಧ ಮಹಾಸಭಾದ ಜಂಟಿ ಆಶ್ರಯದಲ್ಲಿ 2566ನೇ ಬುದ್ಧ ಪೂರ್ಣಿಮೆ ಅಂಗವಾಗಿ ಹಮ್ಮಿಕೊಂಡಿರುವ ಎರಡು ದಿನಗಳ 'ಧಮ್ಮಪದ ಉತ್ಸವ–2022'ರ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

ಶಾಂತಿ ಮತ್ತು ನೆಮ್ಮದಿಗೆ ಅಗತ್ಯವಾದ ದೊಡ್ಡ ಜ್ಞಾನ ಸಂಸ್ಕೃತಿ ಸೃಷ್ಟಿಸಿ, ಅದನ್ನು ಇಡೀ ವಿಶ್ವಕ್ಕೆ ಭಗವಾನ್ ಬುದ್ಧರು ಪ್ರಚಾರ ಮಾಡಿದ್ದಾರೆ. ಅವರ ಮಾರ್ಗ ಹೊರತಾಗಿ ಸುಖ–ಶಾಂತಿ ಮತ್ತು ನೆಮ್ಮದಿಗೆ ಬೇರೊಂದು ದಾರಿಯಿಲ್ಲ ಇಂದು ಇಡೀ ಜಗತ್ತಿನೆಲ್ಲೆಡೆ ಅಶಾಂತಿ ಮನೆ ಮಾಡಿದೆ. ಕೆಲವೆಡೆ ಯುದ್ಧಗಳು ನಡೆಯುತ್ತಿವೆ. ಇವು ಪರಿಹಾರಗೊಳ್ಳಲು ಭಗವಾನ್ ಬುದ್ಧರ ಮಾರ್ಗ ಅಗತ್ಯ ಎಂದರು.

ಕೊಳ್ಳೇಗಾಲದ ಜೇತವನ ಬುದ್ಧವಿಹಾರದ ಪೂಜ್ಯ ಮನೋರಖ್ಖಿತ ಭಂತೇಜಿ ಮಾತನಾಡಿ, ಭಗವಾನ್ ಬುದ್ಧರು ಪಾಲಿ ಭಾಷೆಯಲ್ಲಿ ಉಪದೇಶಿಸಿದ ಸತ್ಯ ದರ್ಶನಗಳ ಸಾರ ಸಂಗ್ರಹವೇ ಧಮ್ಮಪದ. ಸಾಂದರ್ಭಿಕವಾಗಿ ಅವರು ಬೋಧನೆ ಮಾಡಿದ ಸಂಗ್ರಹವಿದು. 'ಧಮ್ಮ' ಎಂದರೆ ಸತ್ಯ, 'ಪದ' ಎಂದರೆ ಮಾರ್ಗ ಎಂಬರ್ಥವಿದೆ ಎಂದು ತಿಳಿಸಿದರು.

ಬುದ್ಧರ ಉಪದೇಶದ ಒಂದೊಂದು ಮಾತುಗಳು ಅವರ ಜ್ಞಾನೋದಯದಿಂದ ಬಂದಿರುವ ಸತ್ಯ ವಿಚಾರಗಳು. ಮನುಷ್ಯನ ಮನಸ್ಸು ಒಳ್ಳೆಯದನ್ನು ಆಲೋಚನೆ ಮಾಡಿದರೆ, ಒಳ್ಳೆಯ ಕೆಲಸ ಕಾರ್ಯಗತವಾಗುತ್ತದೆ. ಇದನ್ನೇ ಬುದ್ಧರು ಹೇಳಿದ್ದು, ಬೌದ್ಧ ಧಮ್ಮ ಒಂದು ದೊಡ್ಡ ವಿಜ್ಞಾನ. ಅದೊಂದು ವೈಜ್ಞಾನಿಕ ಸತ್ಯ ಎಂದು ಪ್ರತಿಪಾದಿಸಿದರು.

ಜಗತ್ತಿನಾದ್ಯಂತ ನಾನಾ ಸಮಸ್ಯೆಗಳಿವೆ. ಇದಕ್ಕೆ ಕಾರಣ ಅಜ್ಞಾನ. ಅದಕ್ಕೆ ಜ್ಞಾನವೇ ಪರಿಹಾರ. ದುರಾಸೆಯೇ ದುಃಖಕ್ಕೆ ಕಾರಣ. ಅವಶ್ಯಕತೆಗೆ ಅನುಗುಣವಾಗಿ ನಮ್ಮ ಆಲೋಚನೆ ಇರಬೇಕು. ಇಂತಹ ಮಹತ್ವದ ಸತ್ಯ ಸಂಗತಿ ಮೇಲೆ ಬುದ್ಧರ ಚಿಂತನೆಗಳು ಅನಾವರಣಗೊಂಡಿವೆ ಎಂದರು.

ಬುದ್ಧರ ಪಂಚಶೀಲ ತತ್ವಗಳು ನಮ್ಮ ಸಮಸ್ಯೆಗೆ ಪರಿಹಾರ ನೀಡುತ್ತವೆ. ಪಂಚಶೀಲ ಕೇವಲ ಬೌದ್ಧಧರ್ಮಕ್ಕೆ ಸೀಮಿತವಲ್ಲ. ಇದು ಜಗತ್ತಿನ ಮಾನವ ಕೋಟಿ ವಿಮೋಚನೆಗೆ ಇರುವ ಮಾರ್ಗ. ಸುಖೀ ರಾಜ್ಯ ನಿರ್ಮಿಸಿದ ಸಾಮ್ರಾಟ ಅಶೋಕ ಇಂದಿಗೂ ಜಗತ್ತಿನಲ್ಲಿ ತನ್ನ ಶ್ರೇಷ್ಠತೆಯಿಂದ ಹೆಸರುವಾಸಿಯಾಗಿದ್ದಾನೆ. ಇದಕ್ಕೆ ಕಾರಣ ಆತನು ಅನುಸರಿಸಿದ ಬುದ್ಧ ಮಾರ್ಗ. ಬುದ್ಧ ಮಾರ್ಗ ಯಾವುದೇ ಮತಕ್ಕೆ ಸೀಮಿತವಲ್ಲ. ಅತೀತವಾದ ಬೆಳಕಿನ ಜೀವನ ವಿಧಾನ. ಯಾವುದೇ ಪಕ್ಷ ಆಳ್ವಿಕೆ ಮಾಡಿದರೂ ಬುದ್ಧ ಮಾರ್ಗದಲ್ಲಿ ನಡೆದರೆ ಶಾಂತಿ ನೆಲೆಸಿ, ಸಮೃದ್ಧಿ ಕಾಣಬಹುದು ಎಂದು ಪ್ರತಿಪಾದಿಸಿದರು.

ಮಹಾ ಬೋಧಿ ಸೊಸೈಟಿ ಅಧ್ಯಕ್ಷ ಪೂಜ್ಯ ಕಸ್ಸಾಪ ಮಹಾತೇರ ಧಮ್ಮಪದ ಉತ್ಸವ ಉದ್ಘಾಟಿಸಿದರು. ಪೂಜ್ಯ ಬೋಧಿರತ್ನ ಭಂತೇಜಿ, ಪೂಜ್ಯ ಬೋಧಿ ದತ್ತ ಭಂತೇಜಿ, ಪೂಜ್ಯ ನ್ಯಾನಲೋಕ ಭಂತೇಜಿ, ಪೂಜ್ಯ ಬುದ್ಧರತ್ನ ಭಂತೇಜಿ, ಪೂಜ್ಯ ಧಮ್ಮಪಾಲಾ ಭಂತೇಜಿ, ಪೂಜ್ಯ ಬೋಧಿಪ್ರಿಯಾ ಭಂತೇಜಿ, ಪೂಜ್ಯ ಗೌತಮಿ ಶೀಲ ಅವರು ಪಾಲ್ಗೊಂಡಿದ್ದು, ಒಟ್ಟು 6 ಗೋಷ್ಠಿಗಳಲ್ಲಿ ಭಂತೇಜಿಗಳು ಧಮ್ಮಪದದ ಬೋಧನೆ ಮಾಡಲಿದ್ದಾರೆ.

ರಾಜ್ಯದ ವಿವಿಧ ಭಾಗಗಳಿಂದ 200ಕ್ಕೂ ಹೆಚ್ಚು ಮಂದಿ ಉತ್ಸವದಲ್ಲಿ ಪಾಲ್ಗೊಂಡಿದ್ದಾರೆ. ಮೈಸೂರು ವಿವಿ ಡಾ. ಅಂಬೇಡ್ಕರ್ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ಪ್ರೊ.ಸೋಮಶೇಖರ್, ಬುದ್ಧಧಮ್ಮ ಸಮಿತಿ ಪ್ರಧಾನ ಕಾರ್ಯದರ್ಶಿ ಆರ್.ಮಹದೇವಪ್ಪ, ಸದಸ್ಯರಾದ ಡಾ. ಜಗನ್ನಾಥ್, ಕೆಆರ್.ಗೋಪಾಲಕೃಷ್ಣ ಆರ್.ನಟರಾಜು, ರಾಜು ಹಂಪಾಪುರ, ಹೆಚ್.ಶಿವರಾಜು ಮತ್ತಿತರರು ಹಾಜರಿದ್ದರು.

'ಬೋಧಿ ಸಪ್ತಾಹ' ಆಚರಣೆ

ಇಡೀ ಜಗತ್ತಿನೆಲ್ಲೆಡೆ ಇದೇ ಮೇ 16ರ ವೈಶಾಖ ಪೂರ್ಣಿಮೆ ದಿನದಂದು ಬುದ್ಧ ಜಯಂತಿ ಆಚರಣೆ ನಡೆಯಲಿದೆ. ಹಲವಡೆ 'ಬೋಧಿ ಸಪ್ತಾಹ' ಎಂದು ಜಯಂತಿ ದಿನದಿಂದ ವಾರ ಕಾಲ ಆಚರಣೆ ಮಾಡಲಾಗುತ್ತದೆ. ಈ ವೇಳೆ ಧ್ಯಾನ, ಪೂಜೆ ಮತ್ತು ಸೇವಾ ಕಾರ್ಯದೊಂದಿಗೆ ಧರ್ಮೋಪದೇಶ ಕಾರ್ಯಕ್ರಮ ನಡೆಸಲಾಗುತ್ತದೆ. ಇದೇ ಮಾದರಿಯಲ್ಲಿ ನಮ್ಮ ಮಹಾ ಬೋಧಿ ಸೊಸೈಟಿ ವತಿಯಿಂದ ಬುದ್ಧ ಜಯಂತಿ ಆಚರಣೆ ಮಾಡಲಾಗುತ್ತದೆ.

–ಪೂಜ್ಯ ಆನಂದ ಭಿಕ್ಕು ಭಂತೇಜಿ

ವರ್ಷವಿಡೀ ಮೈಸೂರು ದಸರಾ ವಸ್ತು ಪ್ರದರ್ಶನ

13.5 ಕೋಟಿ ರೂ. ಅನುದಾನ ಬಿಡುಗಡೆ



ಮೈಸೂರು, ಮೇ 14 (ಆರ್‌ಕೆ)– ವರ್ಷ ಪೂರ್ತಿ ದಸರಾ ವಸ್ತು ಪ್ರದರ್ಶನ ನಡೆಸುವ ಯೋಜನೆಗೆ ಮೊದಲ ಕಂತಿನಲ್ಲಿ ಸರ್ಕಾರ 13.5 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದೆ ಎಂದು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್‌ಕುಮಾರ್‌ಗೌಡ ತಿಳಿಸಿದ್ದಾರೆ.

ಈ ಸಂಬಂಧ ಬೆಂಗಳೂರಿನಲ್ಲಿ ಪ್ರವಾಸೋದ್ಯಮ ಮತ್ತು ಪರಿಸರ ಸಚಿವ ಆನಂದ್‌ಸಿಂಗ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮೈಸೂರಿನ ದಸರಾ ವಸ್ತು ಪ್ರದರ್ಶನವನ್ನು ವರ್ಷದ 365 ದಿನವೂ ನಡೆಸುವ ಯೋಜನೆ ಕುರಿತು ಸುದೀರ್ಘ ಚರ್ಚೆ ನಡೆದಿದ್ದು, ಮೊದಲ ಹಂತದಲ್ಲಿ 13.5 ಕೋಟಿ ರೂ. ಅನುದಾನ ಬಿಡುಗಡೆ ಮಾಡಲು ನಿರ್ಧರಿಸಲಾಯಿತು ಎಂದು ತಿಳಿಸಿದರು.

ಈ ಯೋಜನೆಗೆ ಪ್ರಾಧಿಕಾರದಿಂದ 135 ಕೋಟಿ ರೂ.ಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಡಿಪಿಆರ್ ರೀತ್ಯ ಟೆಂಡರ್ ಕರೆಯಲು ಒಟ್ಟು ಮೊತ್ತದ 3ನೇ ಒಂದರಷ್ಟು ಹಣ ಇರಬೇಕು. ಹೆಚ್ಚುವರಿಯಾಗಿ ಬೇಕಿರುವ ಹಣ ಬಿಡುಗಡೆಗೆ ಸಿಎಂ ಭೇಟಿ ಮಾಡಿ ಮನವಿ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು ಎಂದರು. ಅನುದಾನ ಬಿಡುಗಡೆಯಾದರೆ ಟೆಂಡರ್ ಕರೆದು ಮೊದಲ ಹಂತದ ಕಾಮಗಾರಿ ಆರಂಭಿಸಬಹುದು. ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಯೋಜನೆಗೆ ಚಾಲನೆ ನೀಡಲು ಸಭೆಯಲ್ಲಿ ನಿರ್ಧರಿಸಲಾಯಿತು ಎಂದು ಹೇಮಂತ್‌ಕುಮಾರ್‌ಗೌಡ ತಿಳಿಸಿದ್ದಾರೆ.

ಸಭೆಯಲ್ಲಿ ಪ್ರವಾಸೋದ್ಯಮ ಇಲಾಖೆ ಪ್ರಧಾನ ಕಾರ್ಯದರ್ಶಿ ಪಂಕಜ್‌ಕುಮಾರ್‌ಪಾಂಡೆ, ನಿರ್ದೇಶಕ ವೆಂಕಟೇಶ್, ಇಂಜಿನಿಯರ್ ರಮೇಶ್ ಹಾಗೂ ಇತರರು ಪಾಲ್ಗೊಂಡಿದ್ದರು.

ಕಂಪನಿಯೊಂದರ ಮುಂದೆ ನಿಲ್ಲಿಸಿದ್ದ ಬೈಕ್ ಕಳವು

ಮೈಸೂರು,ಮೇ 14–ಕಡಕೊಳ ಕೈಗಾರಿಕಾ ಪ್ರದೇಶದ ಕಂಪನಿಯೊಂದರ ಮುಂಭಾಗ ನಿಲ್ಲಿಸಿದ್ದ ಬೈಕ್ ಕಳುವಾಗಿರುವ ಬಗ್ಗೆ ವರದಿಯಾಗಿದೆ ಮೈಸೂರು ತಾಲೂಕು ಕೋಚನಹಳ್ಳಿ ಕೆ.ಮಹದೇವ ಸ್ವಾಮಿ ಎಂಬುವರು ಎಸ್‌ಕೆಎಫ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ಅವರು ಮೇ 4ರಂದು ಮಧ್ಯಾಹ್ನ 1.45ರಲ್ಲಿ ತಮ್ಮ ಬೈಕ್ (ಕೆಎ 09 ಹೆಚ್‌ಟಿ 3920) ಅನ್ನು ಕಂಪನಿ ಮುಂಭಾಗ ನಿಲ್ಲಿಸಿದ್ದು, ಕೆಲಸ ಮುಗಿಸಿ ರಾತ್ರಿ 10.10 ಗಂಟೆಗೆ ಬಂದು ನೋಡುವಷ್ಟರಲ್ಲಿ ಅದನ್ನು ಕಳವು ಮಾಡಲಾಗಿತ್ತು ಈ ಸಂಬಂಧ ಮೈಸೂರು ದಕ್ಷಿಣ ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಶೇಖ್ ಮೊಹಮ್ಮದ್ ಬಿನ್ ಜಾಯೇದ್ ಯುಎಇ ನೂತನ ಅಧ್ಯಕ್ಷರಾಗಿ ಆಯ್ಕೆ



ದುಬೈ: ಶೇಖ್ ಮೊಹಮ್ಮದ್ ಬಿನ್ ಜಾಯೇದ್ ಅಲ್ ನಹ್ಯಾನ್ ಅವರು ಯುಎಇ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಯುಎಇ ಅಧ್ಯಕ್ಷರಾಗಿದ್ದ ಶೇಖ್ ಖಲೀಫಾ ಬಿನ್ ಜಾಯೆದ್ ಅಲ್ ನಹ್ಯಾನ್ ಅವರು ಶುಕ್ರವಾರ ನಿಧನರಾಗಿದ್ದರು. ಆ ಹಿನ್ನೆಲೆಯಲ್ಲಿ, ಯುನೈಟೆಡ್ ಅರಬ್ ಎಮಿರೇಟ್ಸ್‌ನ ಫೆಡರಲ್ ಸುಪ್ರೀಂ ಕೌನ್ಸಿಲ್ ನೂತನ ಅಧ್ಯಕ್ಷರನ್ನು ಆಯ್ಕೆ ಮಾಡಿದೆ ಎಂದು ಸುದ್ದಿಸಂಸ್ಥೆ ವರದಿ ಮಾಡಿದೆ. ಶೇಕ್ ಖಲೀಫಾ ಅವರು ಯುಎಇ ಅಧ್ಯಕ್ಷರಾಗಿ ಹಾಗೂ ಅಬುಧಾಬಿಯ ದೊರೆಯಾಗಿ 2004, ನವೆಂಬರ್ 3ರಿಂದ ಕಾರ್ಯನಿರ್ವಹಿಸುತ್ತಿದ್ದರು. ಯುಎಇ ಅಧ್ಯಕ್ಷೀಯ ವ್ಯವಹಾರಗಳ ಸಚಿವಾಲಯವು ಶೇಕ್ ಖಲೀಫಾ ಅವರ ನಿಧನಕ್ಕೆ ಸಂತಾಪ ಸೂಚಿಸಿ 40 ದಿನಗಳ ಶೋಕಾಚರಣೆಯನ್ನು ಘೋಷಿಸಿದೆ. ಬಾರತದಲ್ಲೂ ಶನಿವಾರ ರಾಷ್ಟ್ರಧ್ವಜವನ್ನು ಅರ್ಧಕ್ಕಿಳಿಸಿ ಸಂತಾಪ ಸೂಚಿಸಲಾಯಿತು.

ಸ್ಕೂಟರ್‌ನಿಂದ ಬಿದ್ದು ವ್ಯಕ್ತಿ ಸಾವು

ಮೈಸೂರು, ಮೇ 14 (ಆರ್‌ಕೆ)– ಸ್ಕೂಟರ್‌ನಿಂದ ಆಯತಪ್ಪಿ ಬಿದ್ದ ವ್ಯಕ್ತಿಯೋರ್ವ ಸಾವನ್ನಪ್ಪಿರುವ ಘಟನೆ ಮೈಸೂರಿನ ಜೆ.ಪಿ.ನಗರ ಮುಖ್ಯ ರಸ್ತೆಯಲ್ಲಿ ಸಂಭವಿಸಿದೆ. ವೇದರ್ ಬ್ಲಾಕ್ ನಿವಾಸಿ ಬಾಲರಾಜ್(45) ಸಾವನ್ನಪ್ಪಿದವರು. ಹೋಂಡಾ ಆಕ್ಟಿವಾದಲ್ಲಿ ಜೆ.ಪಿ.ನಗರದಿಂದ ವಿದ್ಯಾರಣ್ಯಪುರಂ ಕಡೆಗೆ ಬರುತ್ತಿದ್ದಾಗ ವಿದ್ಯಾರಣ್ಯಪುರಂ ಪೊಲೀಸ್ ಠಾಣೆ ಎದುರು ಮುಖ್ಯ ರಸ್ತೆಯಲ್ಲಿ ಬೆಳಗ್ಗೆ 10.15ರ ಸಮಯದಲ್ಲಿ ಆಯತಪ್ಪಿ ಬಿದ್ದರು. ತಲೆಗೆ ತೀವ್ರ ಗಾಯಗಳಾಗಿ ತೀವ್ರ ರಕ್ತಸ್ರಾವದ ಕಾರಣ ಬಾಲರಾಜು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪ್ರಕರಣ ದಾಖಲಿಸಿಕೊಂಡಿರುವ ಕೆ.ಆರ್.ಸಂಚಾರ ಠಾಣೆ ಪೊಲೀಸರು ತಿಳಿಸಿದ್ದಾರೆ. ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ದೇಹವನ್ನು ವಾರಸುದಾರರಿಗೆ ಒಪ್ಪಿಸಲಾಯಿತು.



ಚಾಮರಾಜ ಕ್ಷೇತ್ರ ವಾರ್ಡ್ ನಂ.22ರ ವ್ಯಾಪ್ತಿಯ ನಾರಾಯಣಸ್ವಾಮಿ ಬ್ಲಾಕ್ ಹಾಗೂ ಮಾಡೆಲ್ ಹೌಸ್ ಅಡ್ಡರಸ್ತೆಗಳಿಗೆ 18 ಲಕ್ಷ ರೂ. ವೆಚ್ಚದ ಡಾಂಬರೀಕರಣ ಕಾಮಗಾರಿಗೆ ಶಾಸಕ ಎಲ್.ನಾಗೇಂದ್ರ ಚಾಲನೆ ನೀಡಿದರು. ಈವೇಳೆ ಪಾಲಿಕೆ ಸದಸ್ಯರಾದ ಶ್ರೀಮತಿ ನಮ್ರತಾ ರಮೇಶ್, ಚಿಕ್ಕವೆಂಕಟು, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಮುಖಂಡರಾದ ರಮೇಶ್, ಗೋವಿಂದು, ಮಹಿಳಾ ಮೋರ್ಚಾದ ಸುಧಾ ರಾಮಚಂದ್ರ, ಉಮೇಶ್, ವೇಣು, ಪಾಪು, ಅಭಿವೃದ್ಧಿ ಅಧಿಕಾರಿ ಯೋಗಾನಂದ, ಅಭಿಯಂತರ ರಾಮಣ್ಣ ಮತ್ತಿತರರು ಉಪಸ್ಥಿತರಿದ್ದರು.

ಪಾರ್ವತಮ್ಮ ರಾಜ್‌ಕುಮಾರ್ ಸಹೋದರಿ ಎಸ್.ಎ.ನಾಗಮ್ಮ ವಿಧಿವಶ



ಬೆಂಗಳೂರು : ಇತ್ತೀಚೆಗಷ್ಟೇ ಪುನೀತ್ ರಾಜ್‌ಕುಮಾರ್ ಅವರನ್ನು ಕಳೆದುಕೊಂಡು ದುಃಖದಲ್ಲಿರುವ ರಾಜ್ ಕುಟುಂಬಕ್ಕೆ ಮತ್ತೊಂದು ಆಘಾತ ಎದುರಾಗಿದೆ. ಪಾರ್ವತಮ್ಮ ರಾಜ್‌ಕುಮಾರ್ ಅವರ ಸಹೋದರಿ ಎಸ್.ಎ.ನಾಗಮ್ಮ ಇಂದು (ಮೇ 14) ವಿಧಿವಶರಾಗಿದ್ದಾರೆ.

81 ವರ್ಷ ವಯಸ್ಸಿನ ನಾಗಮ್ಮ, ಕಳೆದ 2 ವಾರಗಳಿಂದ ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದರು. ನಗರದ ಬಸವೇಶ್ವರ ನಗರದ ತಮ್ಮ ಮಗನ ಮನೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ಸಹೋದರರಾದ ಎಸ್.ಎ.ಚಿನ್ನೇಗೌಡ, ಎಸ್.ಎ.ಗೋವಿಂದರಾಜು, ಎಸ್.ಎ. ಶ್ರೀನಿವಾಸ್, ಸಹೋದರಿ ಜಯಮ್ಮ, ಮಗ ಮಹೇಶ್‌ರನ್ನು ಎಸ್.ಎ.ನಾಗಮ್ಮ ಅಗಲಿದ್ದಾರೆ.

ಶ್ರೀಮತಿ ಶಾರದಾ ನಿಧನ



ಮೈಸೂರು, ಮೇ 14– ಪಿರಿಯಾಪಟ್ಟಣ ತಾಲೂಕಿನ ದಿಂಡಿಗಾಡು ಗ್ರಾಮದ ನಿವಾಸಿ ದಿ.ಪೊನ್ನಚನ ದಿ.ಚಂಗಪ್ಪನವರ ಪತ್ನಿ ಶ್ರೀಮತಿ ಶಾರದಾ(83) ಶನಿವಾರ ನಿಧನರಾದರು.

ಮೃತರು ಪುತ್ರ ಡಾ.ಪಿ.ಸಿ.ಶ್ರೀನಿವಾಸ್, ಪುತ್ರಿಯರಾದ ಪೂರ್ಣಿಮಾ, ಸುಮಿತ್ರಾ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಮೇ 15) ಮಧ್ಯಾಹ್ನ 3 ಗಂಟೆಗೆ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಫ್ರಾಂಕ್ಲಿನ್



ಮೈಸೂರು, ಮೇ 14– ಮೈಸೂರಿನ ಯಾದವಗಿರಿ ನಿವಾಸಿ ಫ್ರಾಂಕ್ಲಿನ್(71) ಅವರು ಶನಿವಾರ ನಿಧನರಾದರು. ಮೃತರು ಪತ್ನಿ, ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೈಸೂರು– ಮಹದೇವಪುರ ರಸ್ತೆಯಲ್ಲಿರುವ ಸಿಎಸ್‌ಐ ಸಮಾಧಿಯಲ್ಲಿ ಭಾನುವಾರ ಮಧ್ಯಾಹ್ನ ಮೃತರ ಅಂತ್ಯಸಂಸ್ಕಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.05.2022 ಭಾನುವಾರ, ಮಳೆ ನಕ್ಷತ್ರ : ಕೃತಿಕ 11.05.2022 ರಿಂದ 24.05.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ
ತಿಥಿ: ಚತುರ್ದಶಿ, ನಕ್ಷತ್ರ: ಸ್ವಾತಿ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್ :** ಬ್ರಹ್ಮ ರಥೋತ್ಸವ, ಸಂಜೆ 6ಕ್ಕೆ ವಿದುಷಿ ನಮ್ರತಾ ಮತ್ತು ಶಿಷ್ಯ ವೃಂದದಿಂದ ನೃತ್ಯ ಕಾರ್ಯಕ್ರಮ, ಸ್ಥಳ: ಟ್ರಸ್ಟ್ ಆವರಣ, ಗೋಕುಲಂ 3ನೇ ಹಂತ.

■ **ಪಾರಮಿ ಸಾಮಾಜಿಕ ಮತ್ತು ಶೈಕ್ಷಣಿಕ ಟ್ರಸ್ಟ್:** ಬುದ್ಧ ಪೂರ್ಣಿಮೆ ಸಂಭ್ರಮ, ಉದ್ಘಾಟನೆ : ಮನೋರಖ್ಖಿತ ಭಂತೇಜಿ, ಮುಖ್ಯ ಭಾಷಣಕಾರರು: ಸಂಸ್ಕೃತಿ ಚಿಂತಕ ಡಾ.ಬಿ.ಗಂಗಾಧರ, ವಿಶೇಷ ಆಹ್ವಾನಿತರು: ಡಾ.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಎನ್.ಮುನಿರಾಜು, ಅಧ್ಯಕ್ಷತೆ: ಟ್ರಸ್ಟ್ ಅಧ್ಯಕ್ಷ ಡಾ.ನಿಂಗರಾಜು, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10ಕ್ಕೆ.

■ **ಸುವರ್ಣ ಬೆಳಕು ಫೌಂಡೇಷನ್, ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ :** ಬಸವ ಜಯಂತಿ ಪ್ರಯುಕ್ತ ಶ್ರೀ ಬಸವ ವಿಭೂಷಣ ಮತ್ತು ಶ್ರೀ ಬಸವ ಭೂಷಣ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಶ್ರೀ ಸೋಮಶೇಖರ ಸ್ವಾಮೀಜಿ, ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಪುಷ್ಪಾರ್ಚನೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ : ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10ಕ್ಕೆ.

■ **ಪಾರಿಜಾತ ಸಾಂಸ್ಕೃತಿಕ ಹಾಗೂ ಸಾಮಾಜಿಕ ಟ್ರಸ್ಟ್:** ಕಾರ್ಮಿಕ ದಿನಾಚರಣೆ ಅಂಗವಾಗಿ ಗೀತಗಾಯನ ಮತ್ತು ಪುನೀತ ಸೇವಾರತ್ನ ಪ್ರಶಸ್ತಿ ಪ್ರದಾನ, ಉದ್ಘಾಟನೆ: ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಅಧ್ಯಕ್ಷತೆ: ಸಂಧ್ಯಾ ಸುರಕ್ಷಾ ಟ್ರಸ್ಟ್ ಅಧ್ಯಕ್ಷ ಬಿ.ಆರ್. ನಟರಾಜ್ ಜೋಯಿಸ್, ಮುಖ್ಯ ಅತಿಥಿಗಳು : ಮಾಜಿ ಸಚಿವ ಸಿ.ಎಚ್. ವಿಜಯಶಂಕರ್, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಬೆಳಗ್ಗೆ 10ಕ್ಕೆ.

■ **ಹಸ್ತಶಿಲ್ಪಿ** : ಸಿಲ್ಕ್ ಇಂಡಿಯಾ–2022, ರೇಷ್ಮೆ ಸೀರೆಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಹೋಟೆಲ್ ಸದರನ್ ಸ್ಟಾರ್, ಬೆಳಗ್ಗೆ 10.30ರಿಂದ.

■ **ಸಾಯಿ ಸರಸ್ವತಿ ವಿದ್ಯಾಕೇಂದ್ರ, ಬೋಗಾದಿ:** ಶಂಕರ ಜಯಂತಿ ಅಂಗವಾಗಿ ಶ್ರೀರಾಮಚಂದ್ರಾಪುರ ಮಠದ ಮೈಸೂರು ವಲಯದಿಂದ ವಿವಿಧ ಕಾರ್ಯಕ್ರಮ, ಗುರುಪಾದುಕಾ ಪೂಜೆ, ಗುರುವಂದನೆ, ರಾಮಭುಜಂಗಪ್ರಯಾತ ಸ್ತೋತ್ರ ಪಾರಾಯಣ, ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ಸಾಯಿ ಸರಸ್ವತಿ ವಿದ್ಯಾಕೇಂದ್ರ, ಬೋಗಾದಿ, ಬೆಳಗ್ಗೆ 10.30ರಿಂದ

■ **ಅಖಿಲ ಭಾರತೀಯ ಗ್ರಾಹಕ ಪಂಚಾಯತ್:** ಅಭ್ಯಾಸ ವರ್ಗ, ಉದ್ಘಾಟನೆ: ಡಾ.ಚಂದ್ರಶೇಖರ್, ಉಪಸ್ಥಿತರು: ಕರ್ನಾಟಕ ಪ್ರಾಂತ್ಯ ಸಂಘಟನಾ ಮಂತ್ರಿ ರಾಜೇಶ್‌ಪ್ರಸಾದ್, ಸ್ವದೇಶಿ ಜಾಗರಣ ಮಂಚ್‌ನ ಮುಖ್ಯ ಸಂಚಾಲಕ ಮಂಜುನಾಥ್, ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಡಿಸಿಸಿ ಅಧ್ಯಕ್ಷೆ ರೇಣುಕಾಂಬ, ಮಹಿಳಾ ಪ್ರಮುಖ್ ಗಾಯತ್ರಿ, ಸ್ಥಳ: ಗೋಪಾಲಸ್ವಾಮಿ ಶಿಶುವಿಹಾರ, ಬೆಳಗ್ಗೆ 10.30 ರಿಂದ.

■ **ಚಿದಾನಂದ ಪ್ರಶಸ್ತಿ ಪ್ರದಾನ ಸಮಿತಿ :** ಚಿದಾನಂದ ಪ್ರಶಸ್ತಿ ಪ್ರದಾನ ಸಮಾರಂಭ, ಪ್ರಶಸ್ತಿ ಪುರಸ್ಕೃತರು: ಪುರಾತತ್ತ್ವ ಶಾಸ್ತ್ರಜ್ಞ ಡಾ.ಕೃಷ್ಣಮೂರ್ತಿ, ಹರಿದಾಸ ಸಾಹಿತ್ಯ ಸಂಶೋಧಕರಾದ ಡಾ. ಟಿ.ಎನ್. ನಾಗರತ್ನ, ಹಿರಿಯ ಸಮುದಾಯ ಅಧ್ಯಯನ ಸಂಶೋಧಕ ಡಾ.ಬಿ.ಕೆ.ಪ್ರಣತಾರ್ತಿಹರನ್, ಅಭಿನಂದನಾ ಭಾಷಣ: ಚಿದಾನಂದ ಪ್ರಶಸ್ತಿ ಪ್ರದಾನ ಸಮಿತಿ ಕಾರ್ಯದರ್ಶಿ ಡಾ.ಎಸ್.ಎಲ್.ಶ್ರೀನಿವಾಸಮೂರ್ತಿ, ಅಧ್ಯಕ್ಷತೆ : ಹಿರಿಯ ವಿದ್ವಾಂಸ ನಾಡೋಜ ಡಾ.ಟಿ.ವಿ.ವೆಂಕಟಾಚಲಶಾಸ್ತ್ರೀ, ಸ್ಥಳ: ಶ್ರೀ ರಾಜೇಂದ್ರ ಭವನ, ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯ, ಎಂ.ಜಿ.ರಸ್ತೆ, ಬೆಳಗ್ಗೆ 10.30ಕ್ಕೆ.

■ **ಭಾವಸಾರ ವಿಷನ್ ಇಂಡಿಯಾ, ರಾಯಲ್ ಕ್ಲಬ್ :** ಕಾರ್ಮಿಕ ದಿನಾಚರಣೆ ಅಂಗವಾಗಿ ಸನ್ಮಾನ ಸಮಾರಂಭ, ಮುಖ್ಯ ಅತಿಥಿಗಳು : ಬಿವಿಐ ರಾಷ್ಟ್ರೀಯ ಅಧ್ಯಕ್ಷ ಸತೀಶ್ ಜಾದವ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್‌ಕುಮಾರ್‌ಗೌಡ, ಭಾವಸಾರ ಕ್ಷತ್ರಿಯ ಮಂಡಳಿ ಅಧ್ಯಕ್ಷ ಆರ್.ಜಿ. ಶಿವಾಜಿರಾವ್ ರಂಪೊರೆ, ಪಾಲಿಕೆ ಸದಸ್ಯ ಬಿ.ವಿ. ಮಂಜುನಾಥ್, ಬಿವಿಐ ರಾಯಲ್ ಕ್ಲಬ್ ಅಧ್ಯಕ್ಷ ರವೀಂದ್ರ ಉತ್ತರ್‌ಕರ್, ಸ್ಥಳ: ಪತ್ರಕರ್ತರ ಭವನ, ಅಗ್ರಹಾರ ಬೆಳಗ್ಗೆ 11.30ಕ್ಕೆ

■ **ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಪ್ರಚಾರ ಸಮಿತಿ** : ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಹುಟ್ಟುಹಬ್ಬದ ಅಂಗವಾಗಿ ತೃತೀಯ ಲಿಂಗಿಯರಿಗೆ ಅಪಘಾತ ವಿಮೆ ವಿತರಣಾ ಕಾರ್ಯಕ್ರಮ, ಸ್ಥಳ: ಇಂದಿರಾ ಗಾಂಧಿ ಕಾಂಗ್ರೆಸ್ ಭವನ, ಬೆಳಗ್ಗೆ 11.30ಕ್ಕೆ.

■ **ನ್ಯಾಷನಲ್ ಫೆಡರೇಷನ್ ಆಫ್ ಟೆಲಿಕಾಂ ಎಂಪ್ಲಾಯೀಸ್ ಭಾರತ್ ಸಂಚಾರ ನಿಗಮ್ ಲಿಮಿಟೆಡ್:** 4ನೇ ಕರ್ನಾಟಕ ಸರ್ಕಲ್ ಕಾನ್ಫರೆನ್ಸ್, ಅಧ್ಯಕ್ಷತೆ: ಎನ್‌ಎಫ್‌ಟಿಇ–ಬಿಎಸ್‌ಎನ್‌ಎಲ್, ಕರ್ನಾಟಕ ಸರ್ಕಲ್ ಅಧ್ಯಕ್ಷ ಅರಳಿ, ಮುಖ್ಯ ಅತಿಥಿಗಳು: ಕರ್ನಾಟಕ ಸರ್ಕಲ್ ಚೀಫ್ ಜನರಲ್ ಮ್ಯಾನೇಜರ್ ದೇವೇಶ್‌ಕುಮಾರ್, ಎನ್‌ಎಫ್‌ಟಿಇ–ಬಿಎಸ್‌ಎನ್‌ಎಲ್ ಅಖಿಲ ಭಾರತ ಅಧ್ಯಕ್ಷ ಇಸ್ಲಾಂ ಅಹಮದ್, ಪ್ರಧಾನ ಕಾರ್ಯದರ್ಶಿ ಚಂಡೇಶ್ವರ್ ಸಿಂಗ್, ಗೌರವ ಅತಿಥಿಗಳು: ಮರಿನಾ ಜಾರ್ಜ್, ಅಶೋಕ್‌ಕುಮಾರ್ ಅಗರ್‌ವಾಲ್, ರಾಜ್‌ಕುಮಾರ್, ಸ್ಥಳ: ರೀಜನಲ್ ಟೆಲಿಕಾಂ ಟ್ರೈನಿಂಗ್ ಸೆಂಟರ್, ಕಾಮಾಕ್ಷಿ ಆಸ್ಪತ್ರೆ ಹತ್ತಿರ, ಮಧ್ಯಾಹ್ನ 12.30ಕ್ಕೆ.

■ **ಶ್ರೀ ಬಸವೇಶ್ವರ ವಧು–ವರರ ವಿವಾಹ ವೇದಿಕೆ, ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ :** ವೀರಶೈವ–ಲಿಂಗಾಯಿತ ವಧು–ವರರ ಸಮಾವೇಶ, ಸಾನ್ನಿಧ್ಯ : ಶ್ರೀ ಫಲಹಾರ ಪ್ರಭುದೇವ ಸ್ವಾಮೀಜಿ, ಉದ್ಘಾಟನೆ: ಚಲನಚಿತ್ರ ನಟ ಸುಪ್ರೀತ್, ಅಧ್ಯಕ್ಷತೆ : ಮೈಸೂರು ಜಿಲ್ಲಾ ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷ ಮಾಲಂಗಿ ಸುರೇಶ್, ಮುಖ್ಯ ಅತಿಥಿಗಳು : ಸಮಾಜ ಸೇವಕ ಡಾ.ಕೆ.ಲೀಲಾಪ್ರಕಾಶ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಎಸ್.ಇ. ಗಿರೀಶ್, ಕನ್ನಡ ಪರ ಹೋರಾಟಗಾರ ತಾಯೂರು ವಿಠ್ಠಲಮೂರ್ತಿ, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಮಧ್ಯಾಹ್ನ 2 ರಿಂದ

■ **ಜನಚೈತನ್ಯ ಫೌಂಡೇಷನ್ :** ಚೈತನ್ಯ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಮಾಜಿ ಮೇಯರ್ ನಾರಾಯಣ, ಮುಖ್ಯ ಅತಿಥಿಗಳು : ಅಂಕಣಕಾರ ಡಾ. ಅಮ್ಮಸಂದ್ರ ಸುರೇಶ್, ಪಾಲಿಕೆ ಸದಸ್ಯೆ ಶೋಭಾ ಸುನೀಲ್, ಶ್ರೀನಿವಾಸಲು, ಸಮಾಜ ಸೇವಕ ರವಿಗೌಡ, ಆರ್. ರಮೇಶ್, ಕಲಾವಿದ ಎಂ. ಪುಟ್ಟಸ್ವಾಮಿ, ಜಿ. ನರಸಿಂಹ, ಎನ್. ಬಸವರಾಜು, ಡಿ.ಪಿ. ಮಂಜುನಾಥ್, ಸುಶೀಲ, ಪ್ರಾಸ್ತಾವಿಕ ಭಾಷಣ : ಜನಚೈತನ್ಯ ಫೌಂಡೇಷನ್ ಅಧ್ಯಕ್ಷ ಆರ್. ಲಕ್ಷ್ಮಣ್, ಸ್ಥಳ: ಸಮುದಾಯ ಭವನ, ಸಾರ್ವಜನಿಕ ಹಾಸ್ಟೆಲ್ ಹಿಂಭಾಗ, ವಿದ್ಯಾರಣ್ಯಪುರಂ, ಸಂಜೆ 4.30ಕ್ಕೆ.

■ **ಮೈಸೂರು ಉತ್ಸವ :** ವಸ್ತುಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಮುಕ್ತಿದಾನಂದ ಅವರಿಂದ ರಾಮಕೃಷ್ಣ ಮಹಾಸಂಘದ ವೈಶಿಷ್ಟ್ಯ ಮತ್ತು ಆಧ್ಯಾತ್ಮಿಕ ಮಹತ್ವ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ರಂಗಾಯಣ :** ಬೆಂಗಳೂರಿನ ಸಮುದಾಯ ರಂಗತಂಡದಿಂದ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಜುಗಾರಿ ಕ್ರಾಸ್ ನಾಟಕ ಪ್ರದರ್ಶನ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ, ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ವಿಶೇಷ ಸರಣಿ 'ನಮ್ಮ ಸಂವಿಧಾನ' ಪರಿಚಯಿಸುತ್ತಾರೆ: ಡಾ. ಸುಧಾಕರ ಹೊಸಳ್ಳಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಅಂಬಯ್ಯನುಲಿ.ಸಿ.ವಿಶ್ವನಾಥ್, ವ್ಯಾಖ್ಯಾನ– ಡಾ.ಬಿ.ವಿ.ವಸಂತಕುಮಾರ್, 7.15 ಪ್ರಾಯೋಜಿತ ಕಾರ್ಯಕ್ರಮ 'ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ' ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.00 ಈಸಿ ಇಂಗ್ಲೀಷ್–ಕನ್ನಡದ ಮೂಲಕ ಇಂಗ್ಲೀಷ್ ಕಲಿಕೆಯ ಬಾನುಲಿ ಸರಣಿ, ರಚನೆ ಮತ್ತು ಪ್ರಸ್ತುತಿ–ಸಿ.ಕೆ.ವಿಜಯನಾರಸಿಂಹ, ನಿರ್ಮಾಣ–ಎಸ್.ಲಕ್ಷ್ಮೀನಾರಾಯಣ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳುವಳಿಯ ಪಯಣ, 9.40 ನಮ್ಮ ಆರೋಗ್ಯ, ಬಾಯಿಯ ಆರೋಗ್ಯ ಕುರಿತು ಡಾ.ಶ್ರೀಶೈಲಾ ಹೆಚ್.ಎಸ್. ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ವಿವಿಧ ಶಾಲೆಯ ಮಕ್ಕಳಿಂದ ಕಾರ್ಯಕ್ರಮ, 10.30 ಮಕ್ಕಳ ಮಂಟಪ, 'ನಂದ ಗೋಕುಲ' ಪ್ರಸ್ತುತಿ– ಕೆ.ಬಿ.ಮೀನಾ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ– ಎನ್.ನಂಜುಂಡಸ್ವಾಮಿ, ರಮಾಕಾಂತ, 12.45 ಜನಪದ ಸಂಗೀತ–ಮೊಳೆರಾಜಣ್ಣ ಮತ್ತು ತಂಡ, 1.20 ಭಾವಗೀತೆ–ಹೇಮಾ, 2.35 ಚಲನ ಚಿತ್ರ ಧ್ವನಿ ವಾಹಿನಿ, 3.40 ಯಕ್ಷಗಾನ ತಾಳ ಮದ್ದಲೆ, 5.00 ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ವಿಶೇಷ ಸರಣಿ 'ನಮ್ಮ ಸಂವಿಧಾನ' ಪರಿಚಯಿಸುತ್ತಾರೆ ಡಾ.ಸುಧಾಕರ ಹೊಸಳ್ಳಿ, 7.00 AIR Nxt programme–ವಿಷಯ–ನನ್ನ ಕನಸಿನ ಭಾರತ, 9.05 ಚಿಣ್ಣರ ಸುದ್ದಿ ಲೋಕ–ಪ್ರಚಲಿತ ವಿದ್ಯಮಾನಗಳ ವಾರ್ತಾ ಸಂಚಿಕೆ, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ವಿದ್ವಾನ್ ಬೋನಲ್ ಶಂಕರ್ ಪ್ರಕಾಶ್–ವೀಣಾವಾದನ, 11.00 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 15 ಭಾನುವಾರ 2022

ಮೈಸೂರು ಮಿತ್ರ 43

ಸಂಪುಟ: 43 | ಸಂಚಿಕೆ: 29 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಹಳೇ ಮೈಸೂರು ಭಾಗದಲ್ಲಿ ಆಪರೇಷನ್ ಕಮಲ ಸ್ಟಾರ್ಟ್

ಜೆಟಿಡಿ, ಚಲುವರಾಯಸ್ವಾಮಿ, ರಮೇಶ್ ಬಂಡಿಸಿದ್ದೇಗೌಡ ಸೇರಿ ಪ್ರಮುಖರಿಗೆ

ಬಿಜೆಪಿ ಗಾಳ

ಬೆಂಗಳೂರು, ಮೇ 14(ಕೆಎಂಶಿ)– ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ, ಕಾಂಗ್ರೆಸ್ ಮುಖಂಡರೂ ಆದ ಮಾಜಿ ಸಚಿವ ಚಲುವರಾಯಸ್ವಾಮಿ ಸೇರಿದಂತೆ ಹಳೇ ಮೈಸೂರು ಭಾಗದಲ್ಲಿ ಪ್ರಮುಖ ರಾಜಕೀಯ ಮುಖಂಡರನ್ನು ಸೆಳೆಯಲು ಬಿಜೆಪಿ ಮುಂದಾಗಿದೆ.

ಆಪರೇಷನ್ ಕಮಲದ ಮೂಲಕ ಅಧಿಕಾರಕ್ಕೆ ಬಂದ ಬಿಜೆಪಿ, ಮತ್ತೆ ವಿಧಾನಸಭೆ ಚುನಾವಣೆಗೂ ಮುನ್ನ ಆಪರೇಷನ್ ಕಮಲ ಆರಂಭಿಸಿದೆ. ಕೇಂದ್ರದ ನಾಯಕರೊಬ್ಬರ ಮಾರ್ಗದರ್ಶನದಂತೆ ಹಳೇ ಮೈಸೂರು ಭಾಗದಲ್ಲಿ ಪಕ್ಷಕ್ಕೆ ಭದ್ರ ನೆಲೆ ಕಲ್ಪಿಸಲು ಹಾಗೂ ಪ್ರತಿಪಕ್ಷಗಳಾದ ಕಾಂಗ್ರೆಸ್, ಜೆಡಿಎಸ್ ದುರ್ಬಲಗೊಳಿಸುವ ಉದ್ದೇಶದಿಂದ ಆಪರೇಷನ್ ಪ್ರಾರಂಭಿಸಲಾಗಿದೆ. ವಿಧಾನಸಭೆ ಚುನಾವಣೆಗೆ ಇನ್ನೂ ಒಂದು ವರ್ಷ ಬಾಕಿ ಇರುವಾಗಲೇ ಅಖಾಡಕ್ಕಿಳಿದಿರುವ ಬಿಜೆಪಿ ನಾಯಕರು ಆಪರೇಷನ್ ಮೂಲಕ ಪಕ್ಷ ಬಲವರ್ಧನೆಗೆ ಅಡಿ ಇಟ್ಟಿದ್ದಾರೆ. ಮಂಡ್ಯ, ಮೈಸೂರು ಭಾಗದ ಪ್ರಬಲ ನಾಯಕರಿಗೆ ಬಿಜೆಪಿ ಗಾಳ ಹಾಕಿದೆ. ಅದರಲ್ಲೂ ಮಾಜಿ ಸಿಎಂ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಜತೆ ಗುರುತಿಸಿಕೊಂಡಿರುವ ಮುಖಂಡರನ್ನೇ ಗುರಿಯಾಗಿಸಿಕೊಂಡು ಆಪರೇಷನ್ ಕಮಲ ಮಾಡಲಾಗುತ್ತಿದೆ. ಮುಖ್ಯಮಂತ್ರಿ ಗಾದಿಯ ಮೇಲೆ ಕಣ್ಣಿಟ್ಟು ತಮ್ಮ ತಮ್ಮ ವರ್ಚಸ್ಸು ವೃದ್ಧಿಸಿಕೊಳ್ಳಲು ▶ 7ನೇ ಪುಟಕ್ಕೆ

ಐದಾರು ಮಂದಿ ಘಟಾನುಘಟಿಗಳು ಶೀಘ್ರ ಬಿಜೆಪಿಗೆ



ಮೈಸೂರು, ಮೇ 14 (ಆರ್‌ಕೆ)– ಹಳೇ ಮೈಸೂರು ಭಾಗದ ಐದಾರು ಮಂದಿ ಘಟಾನುಘಟಿ ನಾಯಕರು ಬಿಜೆಪಿಗೆ ಬರುತ್ತಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಅಚ್ಚರಿಯ ಹೇಳಿಕೆ ನೀಡಿದ್ದಾರೆ. ಶುಕ್ರವಾರದಿಂದ ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ನಡೆಯಲಿರುವ ಚುನಾವಣೆಗೆ ಬಿಜೆಪಿ ಅಭ್ಯರ್ಥಿ ಮೈ.ವಿ. ರವಿಶಂಕರ್ ಪರ ಪ್ರಚಾರ ನಡೆಸುತ್ತಿರುವ ಸಚಿವರು, ಮೈಸೂರಿನಲ್ಲಿ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿ, ಈಗಾಗಲೇ ಈ ಭಾಗದ ಐದಾರು ಮಂದಿ ನಾಯಕರು ▶ 7ನೇ ಪುಟಕ್ಕೆ

ಕ್ಷೇತ್ರದ ಮತದಾರರ ತೀರ್ಮಾನದಂತೆ ನನ್ನ ನಿರ್ಧಾರ



ಮೈಸೂರು: ನನ್ನ ಕ್ಷೇತ್ರದ ಮತದಾರರನ್ನು ಕೇಳಿ ಯಾವ ಪಕ್ಷ ಸೇರಬೇಕೆಂಬುದರ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತೇನೆ ಎಂದು ಶಾಸಕ ಜಿ.ಟಿ.ದೇವೇಗೌಡ ಸ್ಪಷ್ಟಪಡಿಸಿದ್ದಾರೆ. ಈಗಲೂ ನಾನು ಜೆಡಿಎಸ್ ಶಾಸಕ. ನಾನು ಇನ್ನೂ ಒಂದು ವರ್ಷ ಶಾಸಕನಾಗಿರುತ್ತೇನೆ. ನನ್ನ ಕ್ಷೇತ್ರದ ಅಭಿವೃದ್ಧಿಗಾಗಿ ಆಗಿಂದಾಗ್ಗೆ ಮುಖ್ಯಮಂತ್ರಿಗಳು, ಮಂತ್ರಿಗಳು, ಅಧಿಕಾರಿಗಳನ್ನು ಭೇಟಿ ಮಾಡುತ್ತಿರಬೇಕಾಗುತ್ತದೆ. ಅದೇ ರೀತಿ ಇಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಅವರನ್ನು ಭೇಟಿಯಾಗಿದ್ದು ನಿಜ. ಅದಕ್ಕೆ ಬೇರೆ ಅರ್ಥ ಕಲ್ಪಿಸಬೇಕಿಲ್ಲ ಎಂದು ತಿಳಿಸಿದರು. ಹಳೇ ಮೈಸೂರು ಭಾಗದ ಐದಾರು ಮಂದಿ ಘಟಾನುಘಟಿ ನಾಯಕರು ಬಿಜೆಪಿ ▶ 7ನೇ ಪುಟಕ್ಕೆ

ಜಿ.ಡಿ.ಹರೀಶ್‌ಗೌಡರಿಗಾಗಿ ನಾನು ಕ್ಷೇತ್ರ ತ್ಯಾಗಕ್ಕೂ ಸಿದ್ಧ



ಮೈಸೂರು: ಜಿ.ಟಿ.ದೇವೇಗೌಡರು ಬಿಜೆಪಿಗೆ ಬಂದರೆ ಸ್ವಾಗತ. ಅವರ ಪುತ್ರನಿಗಾಗಿ ನಾನು ಕ್ಷೇತ್ರ ತ್ಯಾಗ ಮಾಡಲೂ ಸಿದ್ಧನಿದ್ದೇನೆ ಎಂದು ಶಾಸಕ ಎಲ್. ನಾಗೇಂದ್ರ ತಿಳಿಸಿದ್ದಾರೆ.

ಮೈಸೂರು ಭಾಗದ ಘಟಾನುಘಟಿ ನಾಯಕರು ಬಿಜೆಪಿ ಸೇರುತ್ತಾರೆಂಬ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, ಶಾಸಕ ಜಿ.ಟಿ. ದೇವೇಗೌಡರು ಬಂದರೆ ಸ್ವಾಗತ, ಅವರ ಪುತ್ರ ಜಿ.ಡಿ.ಹರೀಶ್‌ಗೌಡರಿಗೆ ಚಾಮರಾಜ ಕ್ಷೇತ್ರದಲ್ಲಿ ಟಿಕೆಟ್ ನೀಡಬೇಕೆಂದು ಹೈಕಮಾಂಡ್ ನಿರ್ಧರಿಸಿದರೆ ನಾನು ಕ್ಷೇತ್ರ ತ್ಯಾಗಕ್ಕೂ ಸಿದ್ಧ ಎಂದರು. ▶ 7ನೇ ಪುಟಕ್ಕೆ

ಜೆಟಿಡಿ ಮೊಮ್ಮಗಳು ಗೌರಿ ನಿಧನ



ಮೈಸೂರು, ಮೇ 14– ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಡಿ. ದೇವೇಗೌಡರ ಮೊಮ್ಮಗಳು ಹಾಗೂ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ ಅವರ ಪುತ್ರಿ 3 ವರ್ಷದ ಗೌರಿ ಇಂದು ರಾತ್ರಿ ನಿಧನ ಹೊಂದಿದ್ದಾಳೆ. ಅನಾರೋಗ್ಯ ನಿಮಿತ್ತ ಬೆಂಗಳೂರಿನ ನಾರಾಯಣ ಹೃದಯಾಲಯದಲ್ಲಿ ದಾಖಲು ಮಾಡಲಾಗಿದ್ದ ಗೌರಿ ಚೇತರಿಸಿಕೊಂಡಿದ್ದಳು. ಆದರೆ ಇಂದು ಮಧ್ಯಾಹ್ನ ಇದ್ದಕ್ಕಿದ್ದಂತೆ ಆರೋಗ್ಯದಲ್ಲಿ ಏರುಪೇರು ಉಂಟಾಗಿ ರಾತ್ರಿ 12.30ರ ವೇಳೆಗೆ ನಿಧನ ಹೊಂದಿದಳು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಾಳೆ (ಭಾನುವಾರ) ಪಾರ್ಥಿವ ಶರೀರವನ್ನು ಮೈಸೂರು ತಾಲೂಕಿನ ಗುಂಗ್ರಾಲ್ ಛತ್ರದ ಜಿ.ಟಿ.ದೇವೇಗೌಡರ ಮನೆಗೆ ತರಲಾಗುತ್ತಿದ್ದು, ಮಧ್ಯಾಹ್ನ 12 ಗಂಟೆ ವೇಳೆಗೆ ಗೌಡರ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ತಿಳಿಸಲಾಗಿದೆ

ರಾಜ್ಯಸಭೆಗೆ ನಿರ್ಮಲಾ ಸೀತಾರಾಮನ್, ರಾಮಮೂರ್ತಿ, ಸುರಾನಾ, ಪರಿಷತ್‌ಗೆ ವಿಜಯೇಂದ್ರ, ಸವದಿ, ರಾಜೇಂದ್ರ, ಸಿದ್ದರಾಜು, ತೇಜಸ್ವಿನಿ ಸೇರಿ 20 ಹೆಸರು ಶಿಫಾರಸು

ಪರಿಷತ್‌ನ ನಾಲ್ಕು, ರಾಜ್ಯಸಭೆ 2 ಸ್ಥಾನ ಬಿಜೆಪಿಗೆ ದಕ್ಕಲಿದೆ



ನಿರ್ಮಲಾ ಸೀತಾರಾಮನ್ | ಕೆ.ಸಿ.ರಾಮಮೂರ್ತಿ | ನಿರ್ಮಲ್‌ಕುಮಾರ್ ಸುರಾನಾ | ಬಿ.ವೈ.ವಿಜಯೇಂದ್ರ
ಲಕ್ಷ್ಮಣ್ ಸವದಿ | ತೇಜಸ್ವಿನಿ | ಎಂ.ರಾಜೇಂದ್ರ | ಸಿದ್ದರಾಜು

ಬೆಂಗಳೂರು, ಮೇ 14(ಕೆಎಂಶಿ)– ವಿಧಾನಸಭೆಯಿಂದ ವಿಧಾನಪರಿಷತ್‌ಗೆ ನಡೆಯಲಿರುವ ಚುನಾವಣೆಗೆ ಬಿಜೆಪಿ ಅಭ್ಯರ್ಥಿಗಳ ಆಯ್ಕೆಗಾಗಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪುತ್ರ ಬಿ.ವೈ.ವಿಜಯೇಂದ್ರ, ಮಾಜಿ ಉಪಮುಖ್ಯಮಂತ್ರಿ ಲಕ್ಷ್ಮಣ್ ಸವದಿ, ನಿರ್ಮಲ್‌ಕುಮಾರ್ ಸುರಾನಾ, ತೇಜಸ್ವಿನಿ ಅನಂತಕುಮಾರ್ ಸೇರಿದಂತೆ 20 ಮಂದಿಯ ಪಟ್ಟಿಯನ್ನು ರಾಜ್ಯ ಬಿಜೆಪಿ ಕೇಂದ್ರೀಯ ಸಂಸದೀಯ ಮಂಡಳಿಗೆ ಶಿಫಾರಸು ಮಾಡಿದೆ. ಇದೇ ಸಂದರ್ಭದಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಕೆ.ಸಿ.ರಾಮಮೂರ್ತಿ, ನಿರ್ಮಲ್‌ಕುಮಾರ್ ಸುರಾನಾ ಅವರ ಹೆಸರನ್ನು ರಾಜ್ಯಸಭೆಯ ಅಭ್ಯರ್ಥಿ ಆಯ್ಕೆಗೂ ಶಿಫಾರಸು ಮಾಡಲಾಗಿದೆ.

ರಾಜ್ಯ ವಿಧಾನಸಭೆಯಿಂದ ವಿಧಾನಪರಿಷತ್‌ನ ಏಳು ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದ್ದು, ಇದರಲ್ಲಿ ಆಡಳಿತಾರೂಢ ಬಿಜೆಪಿಗೆ ನಾಲ್ಕು ಸ್ಥಾನ ದೊರೆಯಲಿದೆ. ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ದ್ವೈವಾರ್ಷಿಕ ಚುನಾವಣೆ ನಡೆಯುತ್ತಿದ್ದು, ಆಡಳಿತಾರೂಢ ಬಿಜೆಪಿಗೆ ಸಂಖ್ಯಾಬಲದ ಮೇಲೆ ಎರಡು ಸ್ಥಾನಗಳು ದೊರೆಯಲಿವೆ. ಪಕ್ಷದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಲುವಾಗಿ ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್‌ಸಿಂಗ್ ಅವರ ಅಧ್ಯಕ್ಷತೆಯಲ್ಲಿ ಕೋರ್ ಕಮಿಟಿ ಸಭೆ ನಡೆದು, ಸಭೆಯಲ್ಲಿ ಪಕ್ಷ ಮತ್ತು ಸಂಘಟನೆಗೆ ದುಡಿದ ಹೆಸರುಗಳನ್ನು ಶಿಫಾರಸು ಮಾಡಲಾಗಿದೆ. ಪರಿಷತ್ತಿನ ತನ್ನ ಪಾಲಿನ ನಾಲ್ಕು ಸ್ಥಾನಗಳಿಗೆ 20 ಹೆಸರುಗಳನ್ನು, ರಾಜ್ಯಸಭೆಯ ಎರಡು ಸ್ಥಾನಗಳಿಗೆ ಮೂರು ಹೆಸರುಗಳನ್ನು ಶಿಫಾರಸು ಮಾಡಿದೆ. ವಿಜಯೇಂದ್ರ, ಲಕ್ಷ್ಮಣ್ ಸವದಿ ಅಲ್ಲದೆ, ಪರಿಷತ್ತಿಗೆ ಶಿಫಾರಸುಗೊಂಡವರಲ್ಲಿ ಭಾರತೀ ಮುಕ್ತಮ್, ಗೀತಾವಿವೇಕಾನಂದ ರೆಡ್ಡಿ, ಎಂ.ರಾಜೇಂದ್ರ, ಸಿದ್ದರಾಜು ▶ 7ನೇ ಪುಟಕ್ಕೆ

ನಾಳೆಯಿಂದ ಶಾಲೆಗಳು ಆರಂಭ

ಹಳೇ ಬಸ್ ಪಾಸ್‌ನಲ್ಲೇ ಪ್ರಯಾಣಿಸಲು ಅವಕಾಶ



ಬೆಂಗಳೂರು, ಮೇ 14– ರಾಜ್ಯದಲ್ಲಿ ಶಾಲೆಗಳು ಮೇ 16ರಿಂದ ಪುನರಾರಂಭವಾಗಲಿವೆ. ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹಳೇ ಬಸ್ ಪಾಸ್‌ನಲ್ಲೇ ಪ್ರಯಾಣಕ್ಕೆ ಅವಕಾಶ ಕಲ್ಪಿಸಿದೆ. ಶಾಲೆಗೆ ಮಕ್ಕಳು ಬರಬೇಕೆಂದರೆ ಶಾಲೆಯ ವಾತಾವರಣ ಪರಿಶುದ್ಧವಾಗಿರಬೇಕು. ವಿದ್ಯಾರ್ಥಿಗಳು ಶಾಲೆ ಆವರಣಕ್ಕೆ ಕಾಲಿಡುತ್ತಿದ್ದಂತೆ ಉಲ್ಲಾಸಿತರಾಗಬೇಕು ಎಂಬ ಕಾರಣಕ್ಕೆ ಶಾಲೆ ಸ್ವಚ್ಛಗೊಳಿಸಿ ಅಣಿಯಾಗಲು ತಿಳಿಸಲಾಗಿದೆ. ಇನ್ನು, ಶಾಲೆಯ ಒಳಾಂಗಣದಲ್ಲಿ ಯಾವುದೇ ರೀತಿಯ ರಿಪೇರಿ ಕೆಲಸಗಳಿದ್ದರೇ ಹಾಗೂ ಬಣ್ಣವನ್ನು ಬಳಿಯಬೇಕಿದ್ದರೆ ಆ ಕಾರ್ಯಗಳನ್ನು ಮೇ 16ರ ಒಳಗೆ ಮುಗಿಸಿಕೊಳ್ಳುವಂತೆ ಶಾಲೆಗಳ ಮುಖ್ಯೋಪಾಧ್ಯಾಯರಿಗೆ ಈಗಾಗಲೇ ಶಿಕ್ಷಣ ಇಲಾಖೆ ಸೂಚನೆ ನೀಡಿದೆ.

ವಿದ್ಯಾರ್ಥಿಗಳಿಗೆ ವಿಶೇಷ ಸೂಚನೆ: ಶನಿವಾರ ಪ್ರಕಟಣೆ ಹೊರಡಿಸಿರುವ KSRTC 2022–23ರ ಸಾಲಿನ ಭೌತಿಕ ತರಗತಿಗಳು ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಮೇ 16ರಂದು ಆರಂಭವಾಗುತ್ತಿದೆ. ಹಾಗಾಗಿ ಪ್ರಸ್ತುತ ಸಾಲಿನ ಪಾಸುಗಳನ್ನು ಪಡೆಯಲು ಸಮಯಾವಕಾಶ ಒದಗಿಸಿಕೊಡುವ ಉದ್ದೇಶವನ್ನು ಇಲಾಖೆ ಹೊಂದಿದೆ. ಆದ್ದರಿಂದ ಕಳೆದ ಸಾಲಿನಲ್ಲಿ ಪಡೆದಿರುವ ಪಾಸ್‌ಗಳು ಮಾನ್ಯತಾ ಅವಧಿ ಜೂನ್ 30 ರವರೆಗೆ ಇರುವುದರಿಂದ, ವಿದ್ಯಾರ್ಥಿಗಳು ಯಾವುದೇ ಗೊಂದಲಕ್ಕೆ ಒಳಗಾಗದೇ ತಮ್ಮ ಹಳೆಯ ಪಾಸುಗಳನ್ನು ಬಳಸಿಕೊಳ್ಳುವಂತೆ ಇಲಾಖೆ ಸೂಚಿಸಿದೆ. 2021–22ರ ಸಾಲಿನಲ್ಲಿ ರಿಯಾಯಿತಿ ಮತ್ತು ಉಚಿತ ಪಾಸ್ ಪಡೆದಿರುವ ವಿದ್ಯಾರ್ಥಿಗಳು ತಮ್ಮ ಹಳೆಯ ಪಾಸುಗಳಿಂದ ಕರಾರಸಾ ನಿಗಮದ ನಗರ, ಹೊರ ವಲಯ, ಸಾಮಾನ್ಯ ಮತ್ತು ವೇಗದೂತ ಬಸ್ಸುಗಳಲ್ಲಿ ಪ್ರಯಾಣಿಸಲು ಅವಕಾಶ ನೀಡಲಾಗಿದೆ. ಹೊಸ ಬಸ್ ಪಾಸ್‌ಗಳ ವಿತರಣಾ ದಿನಾಂಕವನ್ನು ಶೀಘ್ರದಲ್ಲೇ ತಿಳಿಸುತ್ತೇವೆ. ಆ ನಂತರ ನಿಯಮಾನುಸಾರ ಪಾಸುಗಳನ್ನು ಪಡೆಯಲು ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಬೇಕೆಂದು ಕೆಎಸ್‌ಆರ್‌ಟಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

ಪರಾರಿ ಯತ್ನ: ಆಸಿಡ್ ನಾಗನ ಕಾಲಿಗೆ ಗುಂಡು

- ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ
- ಪೊಲೀಸರಿಗೆ 5 ಲಕ್ಷ ರೂ. ಬಹುಮಾನ
- ಸಾರ್ವಜನಿಕರಿಂದ ಆಸಿಡ್ ನಾಗನ ಮಾಹಿತಿ



ಬೆಂಗಳೂರು, ಮೇ 14– ಮೂತ್ರವಿಸರ್ಜನೆ ನೆಪದಲ್ಲಿ ಪೊಲೀಸರ ಮೇಲೆ ಹಲ್ಲೆ ನಡೆಸಿ ಪರಾರಿಯಾಗಲು ಯತ್ನಿಸಿದ ಆಸಿಡ್ ದಾಳಿ ಪ್ರಕರಣದ ಆರೋಪಿ ನಾಗೇಶ್ ಕಾಲಿಗೆ ಕಾಮಾಕ್ಷಿಪಾಳ್ಯ ಪೊಲೀಸರು ಗುಂಡು ಹಾರಿಸಿದ್ದಾರೆ.

ಬೆಂಗಳೂರಲ್ಲಿ ಯುವತಿ ಮೇಲೆ ಆಸಿಡ್ ದಾಳಿ ನಡೆಸಿ ಪರಾರಿಯಾಗಿದ್ದ ನಾಗೇಶ್‌ನನ್ನು ತಮಿಳುನಾಡಿನ ತಿರುವಣ್ಣಾಮಲೈನಲ್ಲಿರುವ ರಮಣ ಆಶ್ರಮದಲ್ಲಿ ಬೆಂಗಳೂರಿನ ಕಾಮಾಕ್ಷಿಪಾಳ್ಯ ಪೊಲೀಸರು ಶುಕ್ರವಾರ ಬಂಧಿಸಿದ್ದರು. ಆತನನ್ನು ವಾಹನದಲ್ಲಿ ಕರೆ ತರುವ ವೇಳೆ, ಮೂತ್ರ ವಿಸರ್ಜನೆಗೆ ಗಾಡಿ ನಿಲ್ಲಿಸಿ ಎಂದು ಹೇಳಿದ್ದಾನೆ. ನಂತರ ಪೊಲೀಸರು ಕೆಂಗೇರಿ ಮೇಲ್ಸೇತುವೆ ▶ 7ನೇ ಪುಟಕ್ಕೆ

ಈಗಲೂ ಅವಳನ್ನೇ ಮದುವೆ ಆಗ್ತೀನಿ!

ಕೊಟ್ಟರೆ ಈಗಲೂ ಅವಳನ್ನೇ ಮದುವೆ ಆಗುತ್ತೇನೆ ಎಂದು ಆಸಿಡ್ ನಾಗೇಶ್ ಪೊಲೀಸರಿಗೆ ಹೇಳಿದ್ದಾನಂತೆ. ಶುಕ್ರವಾರ ಆಸಿಡ್ ನಾಗೇಶನನ್ನು ಬಂಧಿಸಿ ಬೆಂಗಳೂರಿಗೆ ಕರೆತರುವ ಸಂದರ್ಭದಲ್ಲಿ ಯಾಕೋ ಆಸಿಡ್ ಹಾಕಿದೆ ಎಂದು ಪೊಲೀಸರು ಪ್ರಶ್ನಿಸಿದಾಗ ನಾನು ಆಸಿಡ್ ಹಾಕಬೇಕು ಅಂತ ಅಂದುಕೊಂಡಿರಲಿಲ್ಲ. ಆದರೆ ಅವರ ಮನೆಯವರೇ ಆಸಿಡ್ ಹಾಕುತ್ತಾನಂತೆ ಅಂತ ಊರು ತುಂಬಾ ಹೇಳಿಕೊಂಡು ಬಂದರು. ಯಾವಾಗ ಅವರ ಮನೆಯವರು ಎಲ್ಲಾ ಕಡೆ ಹೇಳಿಕೊಂಡು ಬಂದರೋ ಆಗ ಆಸಿಡ್ ಹಾಕಿದೆ. ಈಗಲೂ ಅವಳನ್ನು ಕೊಡುತ್ತಾರಾ ಕೇಳಿ ನೋಡಿ ▶ 7ನೇ ಪುಟಕ್ಕೆ

ಶ್ರೀ ಮಾದೇಶ್ವರಾಯ ನಮಃ

ನಾಳೆಯಿಂದ ಲೋಕ ಕಲ್ಯಾಣ, ವಿಶ್ವಶಾಂತಿಗಾಗಿ 18 ಕೋಟಿ ಜಪಯಜ್ಞ

- ದಿನಕ್ಕೊಂದು ಕೋಟಿಯಂತೆ 18 ಪುಣ್ಯಕ್ಷೇತ್ರಗಳಲ್ಲಿ ಜಪ
- ಮಹದೇಶ್ವರ ಬೆಟ್ಟದಲ್ಲಿ ಜಪ ಸಂಪನ್ನ; ಭಕ್ತರಿಗೆ ಅವಕಾಶ



ಮೈಸೂರು, ಮೇ 14(ಎಂಟಿವೈ)–ಲೋಕ ಕಲ್ಯಾಣಾರ್ಥ ಹಾಗೂ ವಿಶ್ವಶಾಂತಿಗಾಗಿ ಮೇ 16ರಿಂದ ದಿನಕ್ಕೊಂದು ಕೋಟಿಯಂತೆ 18 ದಿನ 18 ಕೋಟಿ 'ಶ್ರೀ ಮಾದೇಶ್ವರಾಯ ನಮಃ' ಸರಣಿ ಜಪ ಯಜ್ಞ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಮಲೆ ಮಹದೇಶ್ವರ ಜಯಂತಿ ಮಹೋತ್ಸವ ಸಮಿತಿ ಕಾರ್ಯಾಧ್ಯಕ್ಷ ಹಾಗೂ ವಿಧಾನ ಪರಿಷತ್ ಮಾಜಿ ಸದಸ್ಯ ಡಿ. ಮಾದೇಗೌಡ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಲೆ ಮಹದೇಶ್ವರ ಜಯಂತಿ ಮಹೋತ್ಸವ ಸಮಿತಿ, ಕುಂಬಾರಕೊಪ್ಪಲು ಅಭ್ಯುದಯ ಸಂಘ, ಮೈಸೂರು ಜಿಲ್ಲಾ ವೀರಶೈವ ಮಹಾಸಭಾ, ಶ್ರೀ ಗುರುರಾಘವೇಂದ್ರ ಆರಾಧನಾ ಸಮಿತಿ ಸಂಯುಕ್ತಾಶ್ರಯದಲ್ಲಿ ಮೇ 16 ರಂದು ಕುಂಬಾರಕೊಪ್ಪಲಿನ ಮಹದೇಶ್ವರ ದೇವಾಲಯದ ಆವರಣದಲ್ಲಿ ಈ ಜಪಯಜ್ಞ ಕಾರ್ಯಕ್ರಮ ನಡೆಯಲಿದೆ ಎಂದರು.

ಅಂದು ಸಂಜೆ 6 ರಿಂದ ರಾತ್ರಿ 9 ಗಂಟೆವರೆಗೆ ಈ ಕಾರ್ಯಕ್ರಮ ನಡೆಯಲಿದೆ. ಈ ಜಪಯಜ್ಞ ಸಮಾರಂಭದಲ್ಲಿ ಭಾಗವಹಿಸುವವರು ಸಾಂಪ್ರಾದಾಯಿಕ ಉಡುಗೆ ಧರಿಸಿ 1 ಮಣ್ಣಿನ ದೀಪ, ಬತ್ತಿ, ಎಣ್ಣೆ, ಅರಿಶಿನ– ಕುಂಕುಮ ಹಾಗೂ ಬಿಡಿ ಹೂವಿನೊಂದಿಗೆ ಬರಬೇಕು ಎಂದರು.

ಮೊದಲ ಬಾರಿಗೆ ಇಂತಹ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಮಹದೇಶ್ವರಸ್ವಾಮಿ ಪಾದಸ್ಪರ್ಶ ಮಾಡಿದ 18 ಪುಣ್ಯ ಸ್ಥಳಗಳಲ್ಲಿ ಒಂದೊಂದು ದಿನ ಒಂದೊಂದು ಕೋಟಿ ಜಪ ಮಾಡಿ, ಅಂತಿಮವಾಗಿ ಮಲೆ ಮಹದೇಶ್ವರ ಬೆಟ್ಟದಲ್ಲಿ 18ನೇ ಕೋಟಿ ಜಪ ಮಾಡುವ ಮೂಲಕ ಈ ಧಾರ್ಮಿಕ ಕಾರ್ಯಕ್ರಮವನ್ನು ಸಂಪನ್ನಗೊಳಿಸಲಾಗುತ್ತದೆ ಎಂದು ಮಾದೇಗೌಡರು ತಿಳಿಸಿದರು. 800 ವರ್ಷಗಳ ಹಿಂದೆ ಮಹದೇಶ್ವರರು ಉತ್ತರದಿಂದ ಕತ್ತಲ ರಾಜ್ಯವನ್ನು ಉದ್ಧಾರ ಮಾಡಲೆಂದು ಬಂದರು. ಹೀಗೆ ಮೈಸೂರು ಪ್ರಾಂತ್ಯಕ್ಕೆ ಬಂದು ನೆಲೆಸುವ ಮುನ್ನ ಹಲವು ಸ್ಥಳಗಳಿಗೆ ತೆರಳಿ ಅಲ್ಲಿ ಆವರಿಸಿದ್ದ ಕತ್ತಲನ್ನು ನಿವಾರಿಸಿ ಬೆಳಕು ಚೆಲ್ಲಿದರು. ಇದರಿಂದ ಮಹದೇಶ್ವರರ ಸಂಕಲ್ಪದಂತೆ ಕತ್ತಲಾವರಿಸಿದ್ದ ಹಲವು ಸ್ಥಳಗಳಲ್ಲಿ ಸುಧಾರಣೆ ಕಂಡಿದೆ. ಈ ಹಿನ್ನೆಲೆಯಲ್ಲಿ 'ಶ್ರೀ ಮಾದೇಶ್ವರಾಯ ನಮಃ' ಸರಣಿ ಜಪಯಜ್ಞ ಹಮ್ಮಿಕೊಳ್ಳಲಾಗಿದೆ ಎಂದರು.

ಮಹದೇಶ್ವರ ಬೆಟ್ಟವು ಪ್ರವಾಸೋದ್ಯಮ ಹಾಗೂ ಉತ್ತಮ ಧಾರ್ಮಿಕ ಸ್ಥಳವಾಗಿದ್ದು, 77 ಬೆಟ್ಟಗಳನ್ನು ಸಫಾರಿಗೆ ಅಭಿವೃದ್ಧಿಪಡಿಸಬೇಕು. ಕಾಡಿನಲ್ಲಿ ವಾಸಿಸುತ್ತಿರುವ ಜನರಿಗೆ ಮೂಲಭೂತ ಸೌಕರ್ಯಗಳಾದ ವಿದ್ಯುತ್, ಆಸ್ಪತ್ರೆ, ಮನೆ ಹಾಗೂ ಶಾಲಾ–ಕಾಲೇಜುಗಳು ಇನ್ನು ಸಿಗುತ್ತಿಲ್ಲ. ಮುಖ್ಯಮಂತ್ರಿಗಳು ಹಾಗೂ ಮುಜರಾಯಿ ಸಚಿವರು ಮಹದೇಶ್ವರ ಬೆಟ್ಟ ಅಭಿವೃದ್ಧಿಗೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಶ್ರೀ ಮಲೆ ಮಹದೇಶ್ವರ ಜಯಂತಿ ಮಹೋತ್ಸವ ಸಮಿತಿ ಉಪಾಧ್ಯಕ್ಷ ಪ್ರಭುಸ್ವಾಮಿ, ಮುರುಳಿ ದೇಶಪಾಂಡೆ, ಭೈರಪ್ಪ ಹಾಗೂ ಮಹದೇವಸ್ವಾಮಿ ಇದ್ದರು.



▶ ತಿರುಪತಿ ವೆಂಕಟರಮಣ ಸ್ವಾಮಿಗಿಂತಲೂ ಮಹದೇಶ್ವರ ಸ್ವಾಮಿಗೆ ಹೆಚ್ಚಿನ ಭಕ್ತರಿದ್ದಾರೆ. ಮಹದೇಶ್ವರ ಬೆಟ್ಟಕ್ಕೆ ಕೋಟ್ಯಾಂತರ ರೂ ಆದಾಯವಿದ್ದರೂ, ಬೆಟ್ಟಕ್ಕೆ ಹೋಗುವ ಭಕ್ತರು ಮೂಲಭೂತ ಸೌಕರ್ಯಗಳ ಕೊರತೆ ಎದುರಿಸುತ್ತಿದ್ದಾರೆ. ಸಂಬಂಧಪಟ್ಟ ಇಲಾಖೆಯವರು ಕೂಡಲೇ ಈ ಸಮಸ್ಯೆಯನ್ನು ಬಗೆಹರಿಸಿ ಭಕ್ತರಿಗೆ ಅನುಕೂಲ ಮಾಡಿಕೊಡಬೇಕು. –ಡಿ.ಮಾದೇಗೌಡ

ನಕ್ಕರೆ ಅದೇ ಸ್ವರ್ಗ

ಅವರು : "ನನ್ನ ಆರೋಗ್ಯದ ಬಗ್ಗೆ ಗಮನ ನೀಡುವವರು ಒಬ್ಬರಾದರೂ ಇದ್ದಾರಲ್ಲ"
ಇವರು : "ಯಾರು, ನಿಮ್ಮ ಹೆಂಡ್ತೀನಾ?"
ಅವರು : "ಇಲ್ಲ ನಮ್ಮ ಡಾಕ್ಟರು!"

ಮೈಸೂರು ಮಿತ್ರ
ಭಾನುವಾರ, 15 ಮೇ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಅನುಭವ ಎನ್ನುವುದು ಉತ್ತೀರ್ಣತೆ ಇಲ್ಲದ ಶಿಕ್ಷಣ –ನೀತಿಸಾರ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಸಮಯಕ್ಕಾದವನೇ ನೆಂಟ, ಕೆಲಸಕ್ಕಾದವನೇ ಭಂಟ

ನಿಮ್ಮ ಪತ್ರಗಳು

ಮುಖ್ಯಮಂತ್ರಿಗಳಿಗೊಂದು ಬಹಿರಂಗ ಪತ್ರ

ಮಾನ್ಯರೆ,

ಪಿಎಸ್ಐ ಅಕ್ರಮ ಬಯಲಾದಂತೆ ಅದಕ್ಕೆ ಸಂಬಂಧಪಟ್ಟ ಹಲವಾರು ವಿಚಾರ ಹಾಗೂ ಆಶ್ಚರ್ಯಕರ ಮಾಹಿತಿಗಳು ಬಹಳ ದಿನಗಳಿಂದಲೂ ಪತ್ರಿಕೆಗಳಲ್ಲಿ, ಸುದ್ದಿ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. ನಿಮ್ಮ ಕಾರ್ಯಕರ್ತರುಗಳೇ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವಂತಹ ಹೇಳಿಕೆಗಳನ್ನು ನೀಡುತ್ತಿದ್ದಾರೆ.

ಪ್ರತಿ ಹಂತದಲ್ಲೂ ಹೆಚ್ಚು ಕಡಿಮೆ ಹಲವಾರು ಇಲಾಖೆಗಳಲ್ಲಿನ ಅಕ್ರಮ, ಭ್ರಷ್ಟಾಚಾರಗಳು ದಿನನಿತ್ಯದ ಸುದ್ದಿಗಳಾಗಿ ತಮ್ಮನ್ನೇ ಸುತ್ತಿಕೊಳ್ಳುತ್ತಿವೆ. ಅಧಿಕಾರ ವಹಿಸಿಕೊಂಡ ಹೊಸದರಲ್ಲಿ ಒಂದು ಮಾತು ಹೇಳಿದ್ದೀರಿ. ಲೋಕಾಯುಕ್ತಕ್ಕೆ ಹೆಚ್ಚು ಅಧಿಕಾರ ಕೊಟ್ಟು ಅದನ್ನು ಬಲಪಡಿಸುತ್ತೇವೆಂದು.

ಈ ಹಿಂದೆ ಇದ್ದಂತಹ ನ್ಯಾಯಮೂರ್ತಿಗಳಾದ ವೆಂಕಟಾಚಲ ಹಾಗೂ ಸಂತೋಷ್ ಹೆಗ್ಗಡೆಯಂತಹ ಲೋಕಾಯುಕ್ತರ ಅವಶ್ಯಕತೆ ರಾಜ್ಯಕ್ಕೆ ಬಹಳ ಅಗತ್ಯವಾಗಿದೆ.

ಪಿಎಸ್ಐ ಅಕ್ರಮದ ಬಗ್ಗೆ ಅಗೆದಷ್ಟು ಹೆಚ್ಚು ಅಕ್ರಮಗಳು ಬಯಲಾಗುತ್ತಿವೆ. ಪ್ರಾಮಾಣಿಕ ಹಾಗೂ ದಕ್ಷ ವ್ಯಕ್ತಿಗಳನ್ನು ಲೋಕಾಯುಕ್ತಕ್ಕೆ ಆರಿಸಿ, ಅವರಿಗೆ ಹೆಚ್ಚಿನ ಅಧಿಕಾರ ನೀಡಿದರೆ ಆಡಳಿತ ಯಂತ್ರಕ್ಕೆ ಸಹಾಯವಾಗಬಹುದು.

ಭ್ರಷ್ಟಾಚಾರ ನಿಗ್ರಹ ದಳ ಒಂದು ಹಲ್ಲಿಲ್ಲದ ಹಾವಿನಂತೆ ಆಗಿದೆ. ಬಲಿಷ್ಠವಾಗಿ ಈ ಹಿಂದೆ ಕಾರ್ಯನಿರ್ವಹಿಸುತ್ತಿದ್ದ ಲೋಕಾಯುಕ್ತವನ್ನು ಕಾಂಗ್ರೆಸ್ ಪಕ್ಷ ತನ್ನ ಅಧಿಕಾರದ ಅವಧಿಯಲ್ಲಿ ನಿಷ್ಕ್ರಿಯಗೊಳಿಸಿತು.

ಸದ್ಯದಲ್ಲೇ ಚುನಾವಣೆ ಬರಲಿದೆ. ಅಲ್ಲಿಯವರೆಗೆ ಇದುವರೆವಿಗೂ ಅಂಟಿಕೊಂಡಿರುವ ಅಕ್ರಮಗಳ ಸರಮಾಲೆಯಿಂದ ಹೊರಬಂದರೆ ಮುಂದಿನ ಚುನಾವಣೆಯಲ್ಲಿ ಮತದಾರ ನಿಮ್ಮ ಪಕ್ಷದ ಕೈಹಿಡಿದಾನು. ಭ್ರಷ್ಟಾಚಾರ ನಿಗ್ರಹ ದಳಕ್ಕೆ ಯಾವ ಅಧಿಕಾರವೂ ಇಲ್ಲ. ಅದು ಅಸ್ತಿತ್ವಕ್ಕೆ ಬಂದ ದಿನದಿಂದ ಇಲ್ಲಿಯವರೆವಿಗೆ ಎಷ್ಟು ಭ್ರಷ್ಟಾಚಾರ ಪ್ರಕರಣಗಳು ನೋಂದಣಿ ಆದವು? ಎಷ್ಟು ಪ್ರಕರಣಗಳಿಗೆ ಎಫ್ಐಆರ್ ಹಾಕಲಾಯಿತು? ಎಷ್ಟು ಪ್ರಕರಣಗಳು ತಾರ್ಕಿಕ ಅಂತ್ಯ ಕಂಡವು ಅನ್ನುವ ಯಾವ ಮಾಹಿತಿಗಳು ಜನತೆಯ ಗಮನಕ್ಕೆ ಬಂದಿಲ್ಲ. ಇದರ ಜೊತೆಗೆ ಸರ್ಕಾರ ಎಷ್ಟು ಪ್ರಕರಣಗಳಿಗೆ ಅನುಮತಿ ಕೊಟ್ಟಿದೆ. ಕಾರ್ಯಪ್ರವೃತ್ತರಾಗುವುದಕ್ಕೆ ಅನ್ನುವ ಮಾಹಿತಿ ಇಲ್ಲ. ಲೋಕಾಯುಕ್ತವನ್ನು ಮತ್ತೆ ಬಲಿಷ್ಠಗೊಳಿಸಿ ಅದು ಗತವೈಭವದಿಂದ ಕಾರ್ಯಪ್ರವೃತ್ತವಾಗಲಿ.

–ಎ.ಎಸ್. ಗೋಪಾಲಕೃಷ್ಣ, ರಾಮಕೃಷ್ಣನಗರ, ಮೈಸೂರು.

ಹಳೆ ಸೀರೆಗೆ ನೂಲೇ ದಂಡ?!

ಮಾನ್ಯರೇ,

ವಿಜಯನಗರ ವಾಟರ್ ಟ್ಯಾಂಕ್‌ನಿಂದ ತ್ರಿನೇತ್ರ ವೃತ್ತದವರೆಗಿನ ರಸ್ತೆಯ ಅಧೋಗತಿಯ ಬಗ್ಗೆ ಪುಂಖಾನುಪುಂಖವಾಗಿ ಸಾರ್ವಜನಿಕರು ಪತ್ರಿಕೆಗಳಲ್ಲಿ ಬರೆದೂ ಬರೆದೂ, ಹಿಡಿ ಶಾಪ ಹಾಕಿದ ನಂತರ, ಇದೀಗ ಪಾಲಿಕೆ ಎಚ್ಚತ್ತುಕೊಂಡಂತಿದೆ. ಆದರೆ, ತೇಪೆ ಕೆಲಸವಷ್ಟೆ,

ಹಳ್ಳ ಗುಂಡಿ ಗಳಿಂದ ಕೂಡಿದ ರಸ್ತೆಗೆ ಇದೀಗ ತೇಪೆಯ ನಂತರ ಅಲ್ಲಲ್ಲಿ ಉಬ್ಬು ತಗ್ಗುಗಳು ಸೇರಿ ಒಟ್ಟಾರೆ ವಾಹನ ಸವಾರರಿಗೆ ಇದೊಂದು ರೀತಿಯ ಉಯ್ಯಾಲೆ ಅನುಭವ ತರುತ್ತಿದೆ ಈ ದುರಸ್ತಿ. ಅಂದ ಹಾಗೆ ಪಾಲಿಕೆಯವರು ಬರಿ ಕೈಗಿಂತ ಹಿತ್ತಾಳೆ ಕಡಗ ಮೇಲಲ್ಲವೇ ಎಂದರೂ, ಹಳೆ ಸೀರೆಗೆ ನೂಲೇ ದಂಡ ಎನ್ನುವಂತಿದೆ ಈ ತೇಪೆ ಕೆಲಸ. ಎಂದಿಗೆ ಈ ರಸ್ತೆಗೆ ಪೂರ್ಣ ಡಾಂಬರೀಕರಣ ವಾಗುವುದೋ ದೇವರೇ ಬಲ್ಲ.

–ವಿಜಯ್ ಹೆಮ್ಮಿಗೆ, ಮೈಸೂರು

ಬಸ್ ಪಾಸ್ ಅವಧಿ ವಿಸ್ತರಿಸಲು ಮನವಿ

ಮಾನ್ಯರೆ,

ರಾಜ್ಯಾದ್ಯಂತ ಪದವಿ ಮತ್ತು ಸ್ನಾತಕೋತ್ತರ ಕಾಲೇಜುಗಳಿಗೆ ಶೇ. 90ರಷ್ಟು ವಿದ್ಯಾರ್ಥಿಗಳು ಬರುವುದೇ ಬಸ್‌ಪಾಸ್ ಮೂಲಕ. ಕೋವಿಡ್ ಕಾರಣದಿಂದ ಶೈಕ್ಷಣಿಕ ವರ್ಷ ಪ್ರಾರಂಭವಾಗಿರುವುದು ತಡವಾಗಿದ್ದು, ಬಸ್ ಪಾಸ್ ಅವಧಿ ಮುಕ್ತಾಯ ವಾಗುತ್ತಿದೆ. ಆದರೆ ವಿದ್ಯಾರ್ಥಿಗಳ ಶೈಕ್ಷಣಿಕ ವರ್ಷ ಇನ್ನೂ ಕೂಡ ಮುಕ್ತಾಯ ಆಗದಿರುವ ಕಾರಣ ಬಸ್ ಪಾಸ್ ಅವಧಿಯನ್ನು ವಿಸ್ತರಿಸುವುದರಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸಾರಿಗೆ ಸಚಿವರು ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ.

–ಗೋವಿತ್ ಕಿರಣ್, ರಾಜೇಂದ್ರನಗರ, ಮೈಸೂರು

ಮಹಾಪುರುಷ ಮಹಾರಾಣಾ ಪ್ರತಾಪ್ ಸಿಂಹರಿಗೆ ಅಗೌರವ

ಮಾನ್ಯರೆ,

ರಾಷ್ಟ್ರವೀರ ಮಹಾರಾಣಾ ಪ್ರತಾಪ್‌ಸಿಂಹರ ಗೌರವಾರ್ಥ ಮೈಸೂರು ನಗರದ ಲಲಿತ ಮಹಲ್ ರಸ್ತೆ, ಕಾರಂಜಿ ಕೆರೆ ರಸ್ತೆ ಮತ್ತು ಮೃಗಾಲಯದ ಕಡೆಯಿಂದ ಬರುವ ರಸ್ತೆ ಹಾಗೂ ಚಾಮುಂಡಿ ಬೆಟ್ಟಕ್ಕೆ ಹೋಗುವ ರಸ್ತೆಯ ಕಮಾನಿನ ಸಮೀಪದಲ್ಲಿ ಮಹಾರಾಣಾ ಪ್ರತಾಪ್ ಸಿಂಹರ ನಾಮಫಲಕವನ್ನು 12.1.2000 ರಂದು ನಗರ ಪಾಲಿಕೆಯಿಂದ ಹಾಕಲಾಗಿತ್ತು ಅಂದಿನಿಂದ ಈವರೆಗೂ ಪ್ರತಿವರ್ಷ ಜ.12ರಂದು ವಾರ್ಷಿಕೋತ್ಸವವನ್ನು ಆಚರಿಸುತ್ತ ಬರಲಾಗುತ್ತಿತ್ತು.

ಕೆಲವು ವರ್ಷಗಳ ಹಿಂದೆ ಮಹಾರಾಣಾ ಪ್ರತಾಪ್‌ಸಿಂಹರ ನಾಮಫಲಕವನ್ನು ತೆರವುಗೊಳಿಸುವ ಮೂಲಕ ಈ ವೀರ ಮಹಾಪುರುಷರಿಗೆ ಅಪಮಾನ ಮಾಡಲಾಗಿದೆ. ಮಹಾರಾಣಾ ಪ್ರತಾಪ್ ಸಿಂಹರ ನಾಮಫಲಕವನ್ನು ಪುನಃ ಅಳವಡಿಸುವಂತೆ ಮೈಸೂರು ಮಹಾಪೌರರಿಗೆ 29.9.2021 ಮತ್ತು 12.2.2022ರಂದು ಪತ್ರ ಮುಖೇನ ವಿನಂತಿಸಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಸಂಬಂಧಪಟ್ಟವರು ಈಗಲಾದರೂ ಮಹಾ ರಾಣಾ ಪ್ರತಾಪ್‌ಸಿಂಹರ ನಾಮಫಲಕವನ್ನು ಅಳವಡಿಸಲು ಕ್ರಮ ಕೈಗೊಳ್ಳಬೇಕಾಗಿದೆ.

– ಬಿ.ಎನ್.ಸಿಂಗ್–ಚೇತಕ್, ಮೈಸೂರು

ಪಾಂಡವಪುರಕ್ಕೆ ಹೆಚ್ಚುವರಿ ಬಸ್ ಸೌಲಭ್ಯ ಕಲ್ಪಿಸಿ

ಮಾನ್ಯರೆ,

ಮೈಸೂರು ನಗರ ಬಸ್ ನಿಲ್ದಾಣ ದಿಂದ ಕೆಆರ್‌ಎಸ್ ಮಾರ್ಗವಾಗಿ ಪಾಂಡವಪುರಕ್ಕೆ ರೂಟ್ ಸಂಖ್ಯೆ 303ಪಿ ಬಸ್‌ಗಳು ಸಂಚರಿಸುತ್ತಿವೆ. ಈ ಬಸ್‌ಗಳು ಸದಾ ಪ್ರಯಾಣಿಕರಿಂದ ಕಿಕ್ಕಿರಿದು ತುಂಬಿರುತ್ತವೆ. ಇದರಿಂದ ಶಾಲಾ ಕಾಲೇಜಿಗೆ ತೆರಳುವ ವಿದ್ಯಾರ್ಥಿಗಳು, ಕೆಲಸ ಕಾರ್ಯಗಳಿಗೆ ತೆರಳುವ ಸಾರ್ವಜನಿಕರು, ಹೆಂಗಸರು–ಮಕ್ಕಳು ಹಾಗೂ ಹಿರಿಯ ನಾಗರಿಕರಿಗೆ ತುಂಬಾ ತೊಂದರೆ ಯಾಗಿದೆ. ಈ ಬಗ್ಗೆ ಸಾರಿಗೆ ಸಂಸ್ಥೆ ಅಧಿಕಾರಿ ಗಳು ಕ್ರಮ ಕೈಗೊಂಡು, ಈ ಮಾರ್ಗದಲ್ಲಿ ಹೆಚ್ಚುವರಿ ಬಸ್ ಸೌಲಭ್ಯ ಕಲ್ಪಿಸುವ ಮೂಲಕ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಬೇಕಾಗಿದೆ.

– ನೊಂದ ಪ್ರಯಾಣಿಕರು, ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

'ಓಲ್ಡ್ ಈಸ್ ಗೋಲ್ಡ್'–ಎಲ್ಲ ಕಾಲಕ್ಕೂ ಸಲ್ಲುವ ಪದ

ನಮ್ಮಲ್ಲಿ ಬಹಳ ಹಿಂದಿನಿಂದಲೂ ಈ 'ಓಲ್ಡ್ ಈಸ್ ಗೋಲ್ಡ್' ಎಂಬ ಪದ ಬಳಕೆಯಲ್ಲಿದೆ. ನಾವು ಚಿಕ್ಕವರಾಗಿದ್ದಾಗಲೂ ಈ ಪದವನ್ನು ಕೇಳುತ್ತಿದ್ದೆವು, ಈಗಲೂ ಅದು ಬಳಕೆಯಲ್ಲಿದೆ. (ಇದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ 'ಹಳೆಯದೆಲ್ಲವೂ ಸೊಗಸೇ' ಎಂದು ಹೇಳಬಹುದೇನೋ?) ಆದರೆ ಇತ್ತೀಚೆಗೆ ಹೊಸದೇ ಸರಿ ಎಂಬ ಮನೋಭಾವ ಕಾಣುತ್ತಿದ್ದೇವೆ. ಹಳೆಯದು ಎಂದರೆ ಹೆಚ್ಚು ಬಾಳಿಕೆ ಬರುವಂತಹುದಲ್ಲ, ಆದ್ದರಿಂದ ಹೊಸದು ಸರಿ ಎಂಬ ಮನೋಭಾವ ಕಂಡುಬರುತ್ತದೆ. ಆದರೆ ನೂರಾರು ವರ್ಷದ ಹಿಂದೆ ಕಟ್ಟಿದ ಮನೆಯನ್ನು ಕೆಡವುವುದು ಅಷ್ಟು ಸುಲಭವಲ್ಲ ಎಂಬುದು ಅದಕ್ಕೆ ಕೈ ಹಾಕಿದಾಗಲೇ ತಿಳಿಯುವಂತಹುದು. ಈ ಹಿಂದೆ ಗಾರೆ, ಕಪ್ಪೆಚಿಪ್ಪು, ಮಣ್ಣು ಬಳಸಿಯೇ ಅಷ್ಟು ಗಟ್ಟಿಮುಟ್ಟಾದ ಕಟ್ಟಡ ಕಟ್ಟುತ್ತಿದ್ದರು. ಇಂದಿಗೂ ಮೈಸೂರಿನಲ್ಲಿರುವ ನೂರಾರು ವರ್ಷದ ಹಲವಾರು ಕಟ್ಟಡಗಳು ಗಟ್ಟಿಯಾಗಿ ನಿಂತಿರುವುದನ್ನು ಕಾಣಬಹುದು. ಕೆಲವು ಕಡೆಯಂತು ಹಳೆ ಮನೆ ಕೆಡವಿದಾಗ ಅದರಲ್ಲಿ ಸಿಕ್ಕಿದ ಅಮೂಲ್ಯವಾದ ಮರದಿಂದಲೇ ಮತ್ತೊಂದು ಮನೆ ಕಟ್ಟುವಷ್ಟು ಹಣ ದೊರಕಿದ್ದನ್ನೂ ಕೇಳಿದ್ದೇವೆ. ಈಗಲೂ ಈ ಹಿಂದೆ ಮನೆಗಳಲ್ಲಿ ಉಪಯೋಗಿಸುತ್ತಿದ್ದ ಗಾರೆ ನೆಲ, ರೆಡ್ ಆಕ್ಸೈಡ್ ನೆಲ ಮಿರಿಮಿರಿ ಮಿಂಚುವುದನ್ನು ಕಾಣಬಹುದು. ಅದರ ಮುಂದೆ ಈಗಿನ ಟೈಲ್ಸ್ ಆಗಲಿ, ಮಾರ್ಬಲ್ ಆಗಲಿ ಸರಿಸಾಟಿ ಎನಿಸುವುದಿಲ್ಲ. ನಾಡಹಂಚಿನ ಮನೆಗಳಿಗೆ ಎಸಿಯ ಅವಶ್ಯಕತೆ ಇಲ್ಲ. ಮಣ್ಣಿನ ಮೇಲ್ಛಾವಣಿ ಇರುವ ಮನೆ ಆರೋಗ್ಯಪೂರ್ಣವಾದದ್ದು ಎಂದು ಸಾಬೀತಾಗಿರುವಂತಹುದು. ಹಿಂದೆ ಮನೆಗಳ ಚಾವಣಿಗೆ ಕಲ್ಲು ಬಳಸುತ್ತಿದ್ದುದೂ ಉಂಟು. ಇಂದಿಗೂ ಗುಹೆಗಳಿಗೆ ಹೋದಾಗ ಅತ್ಯಂತ ತಂಪಾಗಿರುವುದನ್ನು ಕಾಣುತ್ತೇವೆ. ಅಂದರೆ ಹಿಂದಿನವರು ಆಗಿದ್ದ ತಂತ್ರಜ್ಞಾನ ಬಳಸಿಕೊಂಡು ಉತ್ತಮ ವಸತಿ ನಿರ್ಮಿಸುತ್ತಿದ್ದರು. ಕಾಲಕ್ರಮೇಣ ನಾಗರಿಕತೆ ಬೆಳೆದಂತೆ(!) ನಗರಗಳಲ್ಲಿ ಜನಜೀವನ ಆಡಂಬರಕ್ಕೆ ತಿರುಗಿದ್ದನ್ನು ಕಾಣಬಹುದು. ಆದರೂ ಇಂದಿಗೂ ಹಳ್ಳಿಗಳಲ್ಲಿ ಹಿಂದಿನ ಸಂಪ್ರದಾಯದ ಮನೆಗಳು ಕಾಣಸಿಗುತ್ತವೆ. ಇದರಿಂದಾಗಿಯೇ ಹಿಂದಿನಿಂದಲೂ

> ನಮ್ಮ ಈಗಿನ ತಲೆಮಾರಿನವರಿಗೆ ಹಳೆಯದು ಎಂದರೆ ಆಗುವುದಿಲ್ಲ. ಹಳೆಯದು ಎಂದರೆ ಅದರ ಆಯುಷ್ಯ ಮುಗಿದಿದೆ, ಅದರಿಂದ ಏನೂ ಪ್ರಯೋಜನವಿಲ್ಲ, ಆದ್ದರಿಂದ ಅದನ್ನು ಬದಲಿಸಬೇಕು ಎಂಬ ಮನೋಭಾವ ಕಂಡುಬರುತ್ತದೆ. ಹಾಗಾಗಿ ಹೊಸ ಮನೆ ಕಟ್ಟಿದಾಗ ಅದರಲ್ಲಿ ಎಲ್ಲವೂ ಹೊಸದಿರಬೇಕು ಎಂದು ಬಯಸಿ, ಚೆನ್ನಾಗಿರುವುದನ್ನೂ ಉಪಯೋಗಿಸದೆ, ಕಂಡಕಂಡವರಿಗೆ ಕೊಟ್ಟುಬಿಡುತ್ತಾರೆ. ಮತ್ತೆ ಎಲ್ಲವನ್ನೂ ಹೊಸದಾಗಿ ಖರೀದಿಸಿ ಮತ್ತಷ್ಟು ಹಣ ಖರ್ಚು ಮಾಡಿಕೊಳ್ಳುತ್ತಾರೆ. ಅವರಿಗೆ ಹಳೆಯದು ಎಂದರೆ ಒಂದು ರೀತಿಯ ಅಲರ್ಜಿ. ಹಾಗಾಗೇ ವಯಸ್ಸಾದವರನ್ನೂ ಅವರು ಅಷ್ಟೊಂದು ಗಮನಿಸುವುದಿಲ್ಲ. ಹೀಗಾಗಿ ಇಂದು ವೃದ್ಧಾಶ್ರಮಗಳು ಜಾಸ್ತಿಯಾಗುತ್ತಿವೆ.

ಮಕ್ಕಳು ಬೇಸಿಗೆ ರಜೆ ಎಂದರೆ ತಮ್ಮ ಅಜ್ಜಅಜ್ಜಿ ವಾಸಿಸುವ ಹಳ್ಳಿ ಮನೆಗಳಿಗೆ ಹೋಗಲು ಇಚ್ಛಿಸುವುದು. (ಆದರೆ ಇತ್ತೀಚೆಗೆ ಹಳ್ಳಿಗಳು ಗಲೀಜು ಎಂದು ತಂದೆತಾಯಿಯರು ಮಕ್ಕಳನ್ನು ಅಲ್ಲಿಗೆ ಹೋಗಲು ಬಿಡುತ್ತಿಲ್ಲ ಎಂಬ ಆಪಾದನೆಯೂ ಇದೆ) ಹಳ್ಳಿಗಳು ನಾಗರಿಕತೆಗೆ ಶೀಘ್ರವಾಗಿ ಸ್ಪಂದಿಸದಿರುವುದು ಒಂದು ರೀತಿಯಲ್ಲಿ ಮಕ್ಕಳಿಗೆ ಇಷ್ಟವಾಗುತ್ತದೆ ಹಾಗಾಗಿ ಓಲ್ಡ್ ಈಸ್ ಗೋಲ್ಡ್ ಎಂಬುದು ಈ ಕಾಲಕ್ಕೂ ಸಲ್ಲುತ್ತದೆ.

ಇದು ಕೇವಲ ಕಟ್ಟಡಗಳಿಗೆ ಮಾತ್ರ ಸಂಬಂಧಿಸಿದ್ದು ಎಂದೇನಲ್ಲ. ಎಲ್ಲ ವಸ್ತುಗಳಿಗೆ ಹಾಗೂ ನಮ್ಮ ಜೀವನ ಕ್ರಮಕ್ಕೂ ಅನ್ವಯವಾಗುವಂತಹುದು. ಇಂದಿಗೂ ಹಿರಿಯ ಜೀವಿಗಳು ಮನೆಗೆ ಉಪಕಾರಿಗಳೇ ಆಗಿರುವುದನ್ನು ಕಾಣಬಹುದು. ಅವರನ್ನು ಆದರಿಸಿದಲ್ಲಿ ಅವರ ಜೀವನಾನುಭವವನ್ನು ಮನೆಗೆ ಧಾರೆ ಎರೆಯುತ್ತಾರೆ. ಮೊಮ್ಮಕ್ಕಳು ಸುಗುಣವಂತರಾಗಿ ಬೆಳೆಯುತ್ತಿದ್ದಾರೆ ಎಂದರೆ ಅವರಿಗೆ ಅಜ್ಜಅಜ್ಜಿಯ ಪ್ರೀತಿ ದೊರಕಿದೆ ಎಂದು ಸುಲಭವಾಗಿ ಊಹಿಸಬಹುದಾಗಿದೆ. ಹಿಂದಿನ ಅವಿಭಕ್ತ ಕುಟುಂಬ ವ್ಯವಸ್ಥೆಯನ್ನು ಈಗಲೂ ನೆನಪು ಮಾಡಿಕೊಳ್ಳುವಂತಿರುತ್ತದೆ.

ಇನ್ನು ನಮ್ಮ ಆರೋಗ್ಯಕ್ಕೆ ಸಂಬಂಧಿಸಿದಂತೆ ನೋಡುವುದಾದರೆ ಅಲ್ಲಿಯೂ ನಮ್ಮ ಹಳೆ ಪದ್ಧತಿಯೇ ಉತ್ಕೃಷ್ಟ ಎಂಬುದು ಕಂಡುಬರುತ್ತದೆ. ಈ ಹಿಂದೆ ಮನೆಗಳಲ್ಲಿ ಅಳಲೆಕಾಯಿ ಉಪಯೋಗಿಸುತ್ತಿದ್ದರು. (ಈಗ ಕೆಲವರಿಗೆ ಇದರ ಉಪಯೋಗ ಗೊತ್ತು.) ಮನೆಯ ಮಕ್ಕಳಿಗೆ ಏನೇ ಖಾಯಿಲೆ ಬರಲಿ ಅದಕ್ಕೆ ಅಳಲೇಕಾಯಿಯೇ ಮದ್ದಾಗುತ್ತಿತ್ತು. ಹಿಂದೆ ಕೆಲವು ವೈದ್ಯರನ್ನು ಅಳಲೆಕಾಯಿ ಪಂಡಿತರು ಎಂದೇ ಕರೆಯಲಾಗುತ್ತಿತ್ತು. ಮಲಬದ್ಧತೆ, ಅಲರ್ಜಿಗಳು, ಫಂಗಲ್ ಇನ್‌ಫೆಕ್ಷನ್‌ಗಳು, ಗಂಟಲು ಸಮಸ್ಯೆ, ಕೂದಲು ಉದುರುವಿಕೆ, ಕಣ್ಣಿನ ಬೇನೆ, ತೂಕ ಕಡಿಮೆ ಯಾಗುವುದು ಹೀಗೆ ಅನೇಕ ಸಮಸ್ಯೆಗಳಿಗೆ ಅಳಲೇಕಾಯಿ ಉತ್ತಮ ಔಷಧ ಎಂಬುದು ತಿಳಿದಿತ್ತು. ಮನೆಮನೆಯಲ್ಲೂ ಅಳಲೇಕಾಯಿ ಸಿದ್ಧವಾಗಿರುತ್ತಿತ್ತು. ಅದೊಂದು ರೀತಿ ವಂಶಪಾರಂಪರ್ಯದಂತೆ ಮನೆಗಳಲ್ಲಿ ಔಷಧಿಯಾಗಿ ಬಳಕೆಯಾಗುತ್ತಿತ್ತು. ಆದರೆ ಇಂದಿಗೂ ಅಳಲೆಕಾಯಿ ದೊರೆತರೂ ಅದನ್ನು ಉಪಯೋಗಿಸುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಇದರಿಂದಾಗಿ ಆರೋಗ್ಯದಲ್ಲಿ ಸ್ವಲ್ಪ ಏರುಪೇರಾದರೂ ವೈದ್ಯರ ಬಳಿಗೆ ಹೋಗುವಂತಾಗುತ್ತಿದೆ. ಅಳಲೇಕಾಯಿ ಮನೆಯ ತೊಟ್ಟಿಲ ಮಗುವಿನಿಂದ ಹಿಡಿದು ಎಲ್ಲ ವಯೋಮಾನದವರಿಗೂ ಒದಗಿಬರುತ್ತಿತ್ತು. 'ಎಲ್ಲಾ ವಿಧದ ಜಡ್ಡಿಗೂ ಅಳಲೇ ಕಾಯಿಯೇ ಮದ್ದು' ಎಂದು ಕರೆಯಲಾಗುತ್ತಿತ್ತು. ಇಂದಿಗೂ ಅಳಲೇಕಾಯಿಯ ಗುಣ ಬದಲಾಗಿಲ್ಲ, ಆದರೆ ನಮ್ಮ ಮೌಢ್ಯ, ಹಳೆಯದು ಸರಿಯಲ್ಲ ಎಂಬ ಮನೋಭಾವ ನಮ್ಮನ್ನು ಆರೋಗ್ಯದಿಂದ ದೂರ ಸರಿಸುತ್ತಿದೆ.

ನಮ್ಮ ಹಿಂದಿನವರಿಗೆ ನಮಗೆ ಬರುವ ರೋಗ/ಖಾಯಿಲೆಗಳಿಗೆ ಮನೆಯಲ್ಲೇ ಆಹಾರ, ನೀರು, ಅಡುಗೆಗೆ ಉಪಯೋಗಿಸುವ ಸೊಪ್ಪು ತರಕಾರಿ, ಸಸ್ಯ, ನಾರು ಬೇರುಗಳಿಂದ ಔಷಧಿ ಮಾಡಿಕೊಂಡು ಆರೋಗ್ಯವಂತರಾಗಿರಬಹುದು ಎಂದು ತಿಳಿದಿತ್ತು. ಇದು ಅನೂಚಾನವಾಗಿ ಮನೆಗಳಲ್ಲಿ ನಡೆದುಕೊಂಡು ಬಂದ ಪದ್ಧತಿಯಾಗಿತ್ತು ಇದನ್ನು ಮನೆ ಮದ್ದು ಎಂದೇ ಕರೆಯಲಾಗುತ್ತಿತ್ತು. ಮನೆಯವರಿಗೆ ಬರುವ ಸಣ್ಣಪುಟ್ಟ ಆರೋಗ್ಯದ ಸಮಸ್ಯೆಗೆ ವೈದ್ಯರು ಬೇಕಾಗಿರಲಿಲ್ಲ. ಮನೆ ಮದ್ದು ಅದಕ್ಕೆ ಪರಿಹಾರ ಕೊಡುತ್ತಿತ್ತು. ಆರಂಭದಲ್ಲಿಯೇ ಯಾವುದೇ ಖಾಯಿಲೆಯಾದರೂ ಅದಕ್ಕೆ ಸೂಕ್ತ ಚಿಕಿತ್ಸೆ ನೀಡಿದರೆ ಗುಣಪಡಿಸಬಹುದು ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯವೇ. ನಾವು ಯಾವಾಗ ಮನೆಮದ್ದನ್ನು ತಿರಸ್ಕರಿಸಿ, ಆಧುನಿಕತೆ ಎಂದು ಬಿಡುತ್ತಾ ಹೋದೆವೋ, ಆಗ ನಮ್ಮ ಜೀವನ ಸೂತ್ರವಿಲ್ಲದ ಗಾಳಿಪಟದಂತೆ ಆಗಿ ಹೋಯಿತು. ಈಗಲೂ ಮನೆಯಲ್ಲಿ ಮಕ್ಕಳಿಗೆ ಸ್ವಲ್ಪ ಮೈಬಿಸಿಯಾದರೂ ಯಾವುದಾದರೂ ಮಾತ್ರೆ, ಸಿರಪ್ ನೀಡಿ ಅದನ್ನು ಶಮನ ಮಾಡಲು ಪ್ರಯತ್ನಿಸಲಾಗುತ್ತದೆ. ಆದರೆ ಅದೇ ಅಳಲೇಕಾಯಿಯ ಬಗ್ಗೆ ನಮಗೆ ಅರಿವಿದ್ದರೆ ಹೀಗೆ ಮಾಡಬೇಕಾಗಿರುವುದಿಲ್ಲ.

ಕೊರೊನಾ ಸಮಯದಲ್ಲಿ ಇಡೀ ವಿಶ್ವ ತಳಮಳಿಸಿದ್ದಕ್ಕಿಂತ ಭಾರತದ ತಳಮಳ ಕಡಿಮೆಯೇ ಇತ್ತು. ಇಲ್ಲಿ ಕೊರೊನಾ ಕಾರಣದಿಂದ ಮರಣ ಹೊಂದಿದವರು ಕಡಿಮೆಯೇ ಇದ್ದರು. ಇದಕ್ಕೆ ಕಾರಣ ನಮ್ಮ ಅಡುಗೆಗೆ ಉಪಯೋಗಿಸುವ ಸಾಂಬಾರ ಪದಾರ್ಥಗಳು ಎಂದು ವಿಜ್ಞಾನಿಗಳೇ ಹೇಳಿದ್ದೂ ಇದೆ. 1984ರಲ್ಲಿ ಭೋಪಾಲ್‌ನಲ್ಲಿ ನಡೆದ ಅನಿಲ ದುರಂತದ ಸಮಯದಲ್ಲಿ ಬದುಕುಳಿದ ಜನರು ಕೇವಲ ಒಂದಿಬ್ಬರು ಮಾತ್ರವಲ್ಲಾ, ಅವರ ಕುಟುಂಬದವರೂ ಇದ್ದರು. ಅಂತಹುದಕ್ಕೆ ಕಾರಣ ಅವರ ಮನೆಗಳಲ್ಲಿ ಬಳಸುತ್ತಿದ್ದ ಸಗಣಿಯ ನೆಲ, ಆ ಮನೆಗಳಲ್ಲಿ ನಿರ್ವಹಿಸುತ್ತಿದ್ದ ಅಗ್ನಿಕಾರ್ಯ ಎಂದು ಕೆಲವು ವರದಿಗಳು ಹೇಳಿದ್ದವು. ಇದೂ ಸಹಾ ನಮ್ಮ ಪುರಾತನ ಸಂಸ್ಕೃತಿ ಉನ್ನತ ಎಂದು ಹೇಳುವುದಕ್ಕೆ ಕಾರಣವಾಯಿತು. ಅದು ಖಂಡಿತಾ ಮೌಢ್ಯವಲ್ಲ ಎಂಬುದು ಆಗ ಬಲ್ಲವರ ಗಮನಕ್ಕೆ ಬಂದಿತು.

ಗೌತಮ ಬುದ್ಧ ಒಂದು ಕಡೆ ಉಲ್ಲೇಖ ಮಾಡುವಂತೆ 'ಭೂಮಿಯ ಮೇಲೆ, ಸೂರ್ಯನ ಕೆಳಗೆ ಯಾವ ಖಾಯಿಲೆಗೂ ಔಷಧಗಳಿಲ್ಲ. ಇರುವ ಔಷಧಿಗಳೆಲ್ಲಾ ತಾತ್ಕಾಲಿಕವಾದದ್ದು. ಅದು ನೀಡುವ ಉಪಶಮನವೂ ತಾತ್ಕಾಲಿಕ' ಎಂದು. ಸ್ವಾಮಿ ವಿವೇಕಾನಂದರೂ ಇದೇ ಧಾಟಿಯಲ್ಲಿ 'ಎಲ್ಲವೂ ನಮ್ಮೊಳಗೇ ಇದೆ' ಎಂದಿದ್ದಾರೆ.


ಅಂದರೆ ರೋಗವೂ, ಔಷಧಿಯೂ ನಮ್ಮೊಳಗೇ ಇದೆ. ಅದನ್ನು ಬಳಸಿಕೊಳ್ಳುವ ವಿಧಾನವನ್ನು ನಾವು ಅರಿಯಬೇಕಷ್ಟೇ ಎಂದು. ರೋಗ ವನ್ನು ಎದುರಿಸಲು ದೇಹವನ್ನು ಸಜ್ಜು ಗೊಳಿಸಬೇಕೇ ಹೊರತು, ಔಷಧಿಗಳನ್ನು ಸಿದ್ಧಪಡಿಸುವುದಲ್ಲ. ದೇಹದಲ್ಲಿಯೇ ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳುವ ಆಹಾರ, ವ್ಯಾಯಾಮ, ಸಕಾರಾತ್ಮಕ ಆಲೋಚನೆ, ಸ್ವಚ್ಛತೆ ಇವುಗಳು ಅಗತ್ಯ. ರೋಗ ಬಂದ ಮೇಲೆ ಚಿಕಿತ್ಸೆ ಪಡೆಯುವುದಕ್ಕಿಂತ ಸಾಧ್ಯವಾದಷ್ಟೂ ರೋಗ ಬರದಂತೆ ಎಚ್ಚರ ವಹಿಸುವುದು ಬುದ್ಧಿವಂತಿಕೆಯಾಗುತ್ತದೆ. ನಮ್ಮ ಆರೋಗ್ಯ ಹಾಳಾಗುತ್ತಿದೆ ಎಂಬ ಬಗ್ಗೆ ವೈದ್ಯಕೀಯ ಪರೀಕ್ಷೆಗಳು ಬೇಕಾಗುವುದಿಲ್ಲ, ನಮಗೇ ಅದು ಗೊತ್ತಾಗುತ್ತದೆ. ಹಾಗೆ ಗೊತ್ತಾಗುತ್ತಿದ್ದಂತೆಯೇ ಅದನ್ನು ಸರಿಪಡಿಸಿಕೊಳ್ಳುವ ಜವಾಬ್ದಾರಿಯೂ ನಮ್ಮದೇ ಆಗಿರುತ್ತದೆ. ನಮ್ಮ ದೇಹಕ್ಕೆ ಕೆಲವು ವಸ್ತುಗಳು ಆಗಿ ಬರುವುದಿಲ್ಲ, ಅದು ಈ ಹಿಂದೆಯೂ ನಮಗೆ ಅರ್ಥವಾಗಿರುತ್ತದೆ. ಆದರೆ ಚಪಲದಿಂದ ಒಂದಷ್ಟು ತಿಂದು ನೋಡೋಣ ಎಂದು ತಿನ್ನುತ್ತೇವೆ. ಕೊನೆಗೆ ನೋವನ್ನೂ ನಾವೇ ಅನುಭವಿಸುತ್ತೇವೆ. ಒಬ್ಬರ ದೇಹ ರಚನೆಯಂತೆ ಮತ್ತೊಬ್ಬರ ದೇಹ ರಚನೆ ಇರುವುದಿಲ್ಲ. ಅವರಿಗೆ ಏನೂ ಆಗಲಿಲ್ಲ, ಎಂದಾದಾಗ ನನಗೂ ಏನೂ ಆಗುವುದಿಲ್ಲ ಎಂದು ನಿರ್ಧರಿಸಲು ಬರುವುದಿಲ್ಲ. ನಮಗೆ ಆರೋಗ್ಯ ಕೆಟ್ಟಾಗ ವೈದ್ಯರು ಇದ್ದಾರೆ, ಆಸ್ಪತ್ರೆಗಳಿವೆಯಲ್ಲ ಎಂಬ ಮನಸ್ಥಿತಿ ಸರಿಯಾದುದಲ್ಲ. ಆರೋಗ್ಯ ಹಾಳಾಗದಂತೆ ನೋಡಿಕೊಳ್ಳುವುದು ಮುಖ್ಯವಾಗುತ್ತದೆ. ಈ ಕಾರಣದಿಂದಲೇ ಈ ಹಿಂದೆ ನಮ್ಮ ಪೂರ್ವಜರು ಮಾಡಿಕೊಂಡಿದ್ದ ಸಂಪ್ರದಾಯಗಳನ್ನು ಅವು ಹಳೆಯವು ಎಂದು ಬಿಡಲು ಹೋಗಬಾರದು. ಅವು ಸರಿ ಎನ್ನುವುದಕ್ಕೆ ನಮ್ಮ ನಡುವೆ ಬದುಕಿರುವ ಹಿರಿಯರೇ ಉದಾಹರಣೆಯಾಗಿರುತ್ತಾರೆ. ಹಳೆಯ ಪದ್ಧತಿ ಸರಿಯಲ್ಲ ಎನ್ನುವುದಕ್ಕಿಂತ ಅದನ್ನು ಸುಧಾರಿಸುವುದು ಹೇಗೆ ಎಂದು ಯೋಚಿಸುವುದು ಬುದ್ಧಿವಂತಿಕೆ ಎನಿಸುತ್ತದೆ. ಈಗಲೂ ಓಲ್ಡ್ ಈಸ್ ಗೋಲ್ಡ್ ಎಂಬುದು ನೈಜಸಂಗತಿಯೇ ಆಗಿದೆ. ಅದನ್ನು ವಿವೇಚನೆಯಿಂದ ಕಂಡುಕೊಳ್ಳಬೇಕು.

ಶ್ರೀರಂಗಪಟ್ಟಣದಲ್ಲಿ ವೀರ ಮದಕರಿ ನಾಯಕರ ಸಂಸ್ಮರಣೆ

ವಿಜಯನಗರ ಸಾಮ್ರಾಜ್ಯದ ಅವನತಿಯ ನಂತರ ಪ್ರಬಲರಾದ ಸಾಮಂತರಲ್ಲಿ ಚಿತ್ರದುರ್ಗದ ಪಾಳೆಯಗಾರರು ಪ್ರಮುಖರು. ಇವರು ದುರ್ಗದ ಸುತ್ತ ಬಲವಾದ ಕೋಟೆ ಕೊತ್ತಲು ನಿರ್ಮಿಸಿಕೊಂಡು ಆಳ್ವಿಕೆ ನಡೆಸಿದರು. ಚಿತ್ರದುರ್ಗದ ನಾಯಕರ ಬಗ್ಗೆ ಬಖೈರುಗಳು, ಕೈಫಿಯತ್ತುಗಳು, ಜಾನಪದ ಕಥೆಗಳು, ಶಾಸನಗಳು ಮತ್ತು ಬಿಜಾಪುರ, ಕೆಳದಿ, ಮೈಸೂರು ಇತರೆ ಸಮಕಾಲೀನ ಸಂಸ್ಥಾನಗಳಲ್ಲಿ ಇರುವ ದಾಖಲೆಗಳಲ್ಲಿ ಸಾಕಷ್ಟು ಮಾಹಿತಿ ದೊರಕುತ್ತದೆ.

ಚಿತ್ರದುರ್ಗದ ನಾಯಕರು ಕ್ರಿ.ಶ.1568 ರಿಂದ 1779ರವರೆಗೆ ಸುಮಾರು 210ಕ್ಕೂ ಹೆಚ್ಚಿನ ವರ್ಷಗಳ ಕಾಲ ಆಳ್ವಿಕೆ ನಡೆಸಿದರು. ಇವರು ಬೇಡ ಕುಲದ ವಾಲ್ಮೀಕಿ ಗೋತ್ರದ ಕಾಮಗೀತಿ ವಂಶದವರೆಂದು, ಮಹಾನಾಯಕಾಚಾರ್ಯರೆಂದು ಶಾಸನಗಳಿಂದ ತಿಳಿಯುತ್ತದೆ. ಶಾಸನ ತಜ್ಞ ಬಿ.ಎಲ್.ರೈಸ್‌ರವರ ಪ್ರಕಾರ ಇವರು ಆಂಧ್ರದ ತಿರುಪತಿಯ ಬಳಿಯ ಮದಕೇರಿ ಗ್ರಾಮದಿಂದ ಬಂದವರಾಗಿದ್ದರಿಂದ ತಮ್ಮ ಮೂಲ ಸ್ಥಳ ಸೂಚಕವಾಗಿ ಇಟ್ಟುಕೊಂಡ ಮದಕೇರಿಯು ಮದಕರಿಯಾಗಿದೆ ಎಂದು ಅಭಿಪ್ರಾಯಪಡುವುದು ಉಂಟು.

ಇದಕ್ಕೆ ಪುಷ್ಟಿ ನೀಡುವಂತೆ ಕರ್ನಾಟಕ ಹಾಗೂ ಆಂಧ್ರ ಪ್ರದೇಶದ ಗಡಿಯಲ್ಲಿರುವ ಅಹೋಬಲ ಪ್ರದೇಶ ದಲ್ಲಿ ಮದಕೇರಿ ಎಂಬ ಗ್ರಾಮವಿದೆ. ಅಹೋಬಲ ದಲ್ಲಿರುವ ಓಬಳ ದೇವರು ಕೂಡ ಮದಕರಿ ನಾಯಕರ ಮನೆದೇವರಾಗಿದೆ ಎಂಬ ಸಾಕ್ಷ್ಯವಿದೆ. ಇನ್ನೊಂದು ಮೂಲದ ಪ್ರಕಾರ ಮದವೇರಿದ ಆನೆಯನ್ನು ಪಳಗಿಸಿದ್ದರಿಂದ ಈ ವಂಶಕ್ಕೆ ಮದಕರಿ ನಾಯಕರು ಎಂಬ ಹೆಸರು ಬಂದಿರಬೇಕೆಂದು ಹೇಳಲಾಗುತ್ತದೆ. ಪಾಳೆಯಗಾರರ ಮೊದಲ ಅರಸ ತಿಮ್ಮಣ್ಣ ನಾಯಕರು, ಚಿತ್ರದುರ್ಗ ನಾಯಕರ ಆಳ್ವಿಕೆಯ ಸ್ಥಾಪಕರು. ಇವರ ನಂತರ ಅನೇಕ ದೊರೆಗಳು ಆಳ್ವಿಕೆ ನಡೆಸಿದರು. ಅವರಲ್ಲಿ ಅತ್ಯಂತ ಶ್ರೇಷ್ಠ ಅರಸರೆಂದರೆ **ರಾಜ ಮದಕರಿ ನಾಯಕರು**. ಇವರು, ಅಕ್ಟೋಬರ್ 13, 1742ರಲ್ಲಿ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗದ ಜಾನಕಲ್ ಎಂಬಲ್ಲಿ ಜನಿಸಿದರು. ಜಾನಕಲ್ಲಿನ ದಳವಾಯಿ ಭರಮಪ್ಪ ನಾಯಕರ ಮಗನೇ ಮದಕರಿ ನಾಯಕರು.



ಪ್ರತಿ ವರ್ಷ ಮೇ 15ರಂದು ವೀರ ಮದಕರಿ ನಾಯಕರ ವಂಶಸ್ಥರು ಶ್ರೀರಂಗಪಟ್ಟಣಕ್ಕೆ ಬಂದು ಮದಕರಿ ನಾಯಕರಿಗೆ ಶ್ರದ್ಧಾಂಜಲಿ ಸಲ್ಲಿಸುವ ಪರಿಪಾಠ ಅನುಸರಿಸುತ್ತಾ ಬಂದಿದ್ದಾರೆ. ಹಾಗಾಗಿ ಇತಿಹಾಸದಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ ಚಿತ್ರದುರ್ಗದ ನಾಯಕ ಸಂತತಿಯ ಶ್ರೇಷ್ಠ ಅರಸ ರಾಜ ವೀರ ಮದಕರಿ ನಾಯಕರ ನೆನಪಿನಾರ್ಥ ಕರ್ನಾಟಕ ಸರ್ಕಾರ ಈಗಲಾದರೂ ಶ್ರೀರಂಗಪಟ್ಟಣದಲ್ಲಿ ಒಂದು ಸ್ಮಾರಕ ನಿರ್ಮಾಣ ಮಾಡಿ ರಾಜವೀರ ಮದಕರಿ ನಾಯಕರಿಗೆ ಗೌರವ ಸಲ್ಲಿಸಬೇಕಾಗಿದೆ.

ಇವರನ್ನು ರಾಜವೀರ ಮದಕರಿ ನಾಯಕ, ಚಿಕ್ಕ ಮದಕರಿ ನಾಯಕ, ಗಂಡುಗಲಿ ಮದಕರಿ ನಾಯಕ, ದುರ್ಗದ ಹುಲಿ, ಚಿತ್ರದುರ್ಗದ ರಾಜ, ಐದನೇ ಮದಕರಿ ನಾಯಕ, ಚಂಡವಿಕ್ರಮ ರಾಯ, ಗಾದ್ರಿ ಮಲೆ ಹೆಬ್ಬುಲಿ, ಹಿಂದು ಪಾಳೆಯಗಾರರ ಗಂಡ ಇನ್ನೂ ಮುಂತಾದ ಬಿರುದುಗಳಿಂದ ಕರೆಯುತ್ತಾರೆ.

ಮದಿಸಿದ ಕರಿಯ ಮದವಡಗಿಸಿದ ಮದಕರಿ ನಾಯಕರು: ರಾಜವೀರ ಮದಕರಿ ನಾಯಕರು ಅಧಿಕಾರಕ್ಕೆ ಬಂದಾಗ ಕೇವಲ 12 ವರ್ಷದ ಬಾಲಕ. ರಾಜ್ಯದ ಆಡಳಿತವನ್ನು ಓಬವ್ವ ನಾಗತಿಯು ಎರಡು ದಶಕಗಳ ಆಡಳಿತ ನಡೆಸಿ ತೀರಿಕೊಂಡಳು. ನಂತರ ಇವರು ಚಿತ್ರದುರ್ಗ ಸಂಸ್ಥಾನದಲ್ಲಿ ತೆಗೆದುಕೊಂಡ ನಿರ್ಣಯಗಳು, ಸಂಸ್ಥಾನದ ಕೀರ್ತಿಯನ್ನು ದಕ್ಷಿಣ ಭಾರತದಲ್ಲಿ ಹರಡಲು ಕಾರಣವಾಯಿತು ಎಂಬುದು ಇತಿಹಾಸಕಾರರ ಅಭಿಪ್ರಾಯ.

ಮದಕರಿ ನಾಯಕರಿಗೆ 1754 ಏಪ್ರಿಲ್ 12ರಂದು ಸಿದ್ಧೇಶ್ವರನ ಗುಡಿಯಲ್ಲಿ ಪಟ್ಟಾಭಿಷೇಕವಾಯಿತು. ಕರ್ಣವೀರ ಮದಕರಿನಾಯಕ ಆರಂಭದಲ್ಲಿ ರಾಯದುರ್ಗ, ಹರಪನಹಳ್ಳಿಯ ನಾಯಕರನ್ನು ಎದುರಿಸಬೇಕಾಯಿತು. ನಂತರ ಜರಿಮಲೆ ಮತ್ತು ತರಿಕೆರೆ ನಾಯಕರ ಹಾವಳಿಯನ್ನು ಅಡಗಿಸಿದರು. ಮದಕರಿ ನಾಯಕ ಹೈದರಾಲಿಯ ಜೊತೆಗೆ ಮಿತ್ರತ್ವ ಬೆಳೆಸಿ, ಹೈದರಾಲಿಗೆ ಬಂಕಾಪುರ, ನಿಜಗಲ್, ನಿಡುಗಲ್, ಬಿದನೂರು ಮೊದಲಾದ ಬಲಿಷ್ಠ ಕೋಟೆಗಳನ್ನು ಗೆದ್ದುಕೊಟ್ಟರು. ಕೊನೆಗೆ ಮದಕರಿ ನಾಯಕರಿಗೆ ಹೈದರಾಲಿಯೊಂದಿಗೆ ಶತ್ರುತ್ವ ಬೆಳೆಯಿತು. ಇದರಿಂದ ಆಕ್ರೋಶಗೊಂಡ ಹೈದರಾಲಿ ಚಿತ್ರದುರ್ಗದ ಕೋಟೆಯ ಮೇಲೆ ನಾಲ್ಕು ಬಾರಿ ಆಕ್ರಮಣ ನಡೆಸಿದನು.

1762ರಲ್ಲಿ ಹೈದರಾಲಿ ಚಿತ್ರದುರ್ಗದ ಮೇಲೆ ಮೊದಲ ಆಕ್ರಮಣ ಮಾಡಿ ಗಡಿ ದುರ್ಗಗಳಾದ ಧರ್ಮಪುರ, ಪರಶುರಾಮಪುರ, ದೊಡ್ಡೇರಿ, ಜಾನಕಲ್, ನಾಯಕನಹಟ್ಟಿ ಹಿರಿಯೂರು, ಹೊಸದುರ್ಗ ಮೊದಲಾದ ಸ್ಥಳಗಳಿಗೆ ಮುತ್ತಿಗೆ ಹಾಕಿದಾಗ ಮದಕರಿ ನಾಯಕರು ಹೈದರಾಲಿಗೆ ಎರಡು ಲಕ್ಷ ವರಹ ನೀಡಿ ಸಂಧಾನ ಮಾಡಿಕೊಂಡರು.

1774ರಲ್ಲಿ ಚಿತ್ರದುರ್ಗದ ಮೇಲೆ ಎರಡನೇ ಮತ್ತು 1777ರಲ್ಲಿ ಮೂರನೇ ಆಕ್ರಮಣವಾಯಿತು. ಈ ವೇಳೆ ಚಿತ್ರದುರ್ಗದ 7 ಸುತ್ತಿನ ಕೋಟೆಯ ಮೇಲೆ ಹೈದರಾಲಿ ಸೈನ್ಯ ಮುತ್ತಿಗೆ ಹಾಕುತ್ತದೆ. ಈ ಸಂದರ್ಭದಲ್ಲಿ ಒನಕೆ ಓಬವ್ವನ ಘಟನೆ ಈಗಲೂ ಜನಪ್ರಿಯ ಇತಿಹಾಸ ಒನಕೆ ಓಬವ್ವ ಚಿತ್ರದುರ್ಗದ ಕೋಟೆಯ ಕಾವಲುಗಾರ ಕಹಳೆ ಮದ್ದಹನುಮಪ್ಪನ ಪತ್ನಿ, ಇವರನ್ನು ಕನ್ನಡ ನಾಡಿನ ವೀರ ವನಿತೆ ಕಿತ್ತೂರು ರಾಣಿ ಚೆನ್ನಮ್ಮ, ರಾಣಿ ಅಬ್ಬಕ್ಕನಿಗೆ ಹೋಲಿಸಲಾಗಿದೆ. ಈ ಆಕ್ರಮಣದಲ್ಲಿ ಹೈದರಾಲಿಗೆ ಸೋಲುಂಟಾಯಿತು.

ನಾಲ್ಕನೇ ಆಕ್ರಮಣ: 1779ರಲ್ಲಿ ಸತತ ನಾಲ್ಕು ತಿಂಗಳು ಚಿತ್ರದುರ್ಗಕ್ಕೆ ಮುತ್ತಿಗೆ ಹಾಕಿದ ಹೈದರಾಲಿ ರಾಯದುರ್ಗ, ಹರಪನಹಳ್ಳಿ, ಸವಣೂರು, ಕಡಪ, ಕನಕಗಿರಿ ಮೊದಲಾದ ಸಂಸ್ಥಾನಿಕರ ನೆರವು ಪಡೆದು ಹೋರಾಡಿದ. ಈ ವೇಳೆ ತಾನು ನಂಬಿದ್ದ ಮರಾಠರು ಮದಕರಿ ನಾಯಕರ ಸಹಾಯಕ್ಕೆ ಬರಲಿಲ್ಲ. ಅಂತಿಮವಾಗಿ ಚಿತ್ರದುರ್ಗದ ಕೋಟೆ ಹೈದರಾಲಿ ಮತ್ತು ಅವನ ಕೂಟದ ವಶವಾಯಿತು. ಹೀಗೆ 1779ರಲ್ಲಿ ಹೈದರಾಲಿ ಹಿಂದೂ ಪಾಳೆಯಗಾರರ ಜೊತೆಗೂಡಿ ಮದಕರಿ ನಾಯಕರನ್ನು ಯುದ್ಧದಲ್ಲಿ ಸೋಲಿಸಿ, ಮದಕರಿ ನಾಯಕರ ಹಾಗೂ ಅವರ ಮಕ್ಕಳಾದ ಭರಮಪ್ಪನಾಯಕ ಹಾಗೂ ಪರಶುರಾಮ ನಾಯಕನನ್ನು ಬಂಧಿಸಿ ಅಜ್ಞಾತ ಸ್ಥಳವಾದ ಕಬ್ಬಾಳು ದುರ್ಗಕೋಟೆಯಲ್ಲಿಡುತ್ತಾನೆ. ನಂತರ ಅಲ್ಲಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ ಅವರ ಮಕ್ಕಳನ್ನು ಬೈರಾಪಟ್ಟದಲ್ಲಿ ಗಲ್ಲಿಗೇರಿಸಿದನೆಂದು ಹೇಳಲಾಗುತ್ತದೆ. ಕೊನೆಗೆ ಹೈದರಾಲಿ, ಮದಕರಿ ನಾಯಕರನ್ನು ಶ್ರೀರಂಗಪಟ್ಟಣಕ್ಕೆ ಕರೆತಂದು, ಅಲ್ಲಿನ ಸುರಂಗದಲ್ಲಿ ಬಂಧನದಲ್ಲಿಟ್ಟನೆಂದು ಇತಿಹಾಸ ಹೇಳುತ್ತದೆ. ಸೋಲು ಮತ್ತು ಸೆರೆವಾಸದ ನೋವುಗಳಿಂದ ನೊಂದ ರಾಜವೀರ ಮದಕರಿ ನಾಯಕರು, ಮೇ 15, 1779ರಲ್ಲಿ ಶ್ರೀರಂಗಪಟ್ಟಣ ಕಾರಾಗೃಹದಲ್ಲೇ ನಿಧನರಾದರು. ಅಂದಿನಿಂದ ಇಂದಿನವರೆವಿಗೂ ಮದಕರಿ ನಾಯಕರ ವಂಶಸ್ಥರು ಈ ದಿನದಂದು ಶ್ರೀರಂಗ ಪಟ್ಟಣದಲ್ಲಿ ಅವರ ಪುಣ್ಯಸ್ಮರಣೆ ಆಚರಿಸುತ್ತಾ ಬಂದಿದ್ದಾರೆ. ಚಿತ್ರದುರ್ಗದ ನಾಯಕ ಸಂತತಿಯ ಶ್ರೇಷ್ಠ ಅರಸ ರಾಜ ವೀರ ಮದಕರಿ ನಾಯಕರ ನೆನಪಿನಾರ್ಥ ಕರ್ನಾಟಕ ಸರ್ಕಾರ ಈಗಲಾದರೂ ಶ್ರೀರಂಗಪಟ್ಟಣದಲ್ಲಿ ಒಂದು ಸ್ಮಾರಕ ನಿರ್ಮಾಣ ಮಾಡಿ ರಾಜ ವೀರ ಮದಕರಿ ನಾಯಕರಿಗೆ ಗೌರವ ಸಲ್ಲಿಸಬೇಕಾಗಿದೆ.



– ಡಾ. ಎಸ್.ಬಿ.ಎಂ. ಪ್ರಸನ್ನ
ಭಾರತೀಯ ಇತಿಹಾಸ ಸಂಕಲನ ಸಮಿತಿ, ಕರ್ನಾಟಕ
ಮೊ: 9945306611

ಮೈಸೂರು ಹೆಬ್ಬಾಳು ಕೆರೆ ಒಡಲು ಸೇರುತ್ತಿದೆ ತ್ಯಾಜ್ಯ

ಅಧಿಕಾರಿಗಳ ನಿರ್ಲಕ್ಷ್ಯತೆ ಸಾರ್ವಜನಿಕರ ಆಕ್ರೋಶ

ಮೈಸೂರು, ಮೇ 14(ಎಂಕೆ)– ಮೈಸೂರಿನ ಹೆಬ್ಬಾಳ ಕೆರೆಯಲ್ಲಿ ರಸಾಯನಿಕಯುಕ್ತ ನೀರಿನಿಂದ ಮೀನುಗಳ ಮಾರಣಹೋಮವೇ ನಡೆದರೂ ಕೆರೆಗೆ ಸೇರುತ್ತಿರುವ ತ್ಯಾಜ್ಯಕ್ಕೆ ತಡೆಬಿದ್ದಿಲ್ಲ.

ಕಾರ್ಖಾನೆಗಳು ಹಾಗೂ ವಿವಿಧ ಬಡಾವಣೆಗಳಿಂದ ಹರಿದು ಬರುವ ಕಲುಷಿತ ನೀರು, ಕೆರೆ ಸೇರುವ ಸ್ಥಳದಲ್ಲಿ ರಾಶಿ ರಾಶಿ ಕಸ ಬಿದ್ದಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ತೆರವುಗೊಳಿಸಲು ಮೀನಾವೇಷ ಎಣಿಸುತ್ತಿದ್ದಾರೆ. ಸತ್ತ ಮೀನುಗಳನಷ್ಟೇ ತೆರವುಗೊಳಿಸಿದ್ದ ಹೂಟಗಳ್ಳಿ ನಗರ ಸಭೆ ಸಿಬ್ಬಂದಿಯ ಕಣ್ಣ ಮುಂದೆಯೇ ರಾಶಿ ಕಸ ಬಿದ್ದಿದ್ದರೂ ಸಂಬಂಧವೇ ಇಲ್ಲದಂತೆ ವರ್ತಿಸುತ್ತಿದ್ದಾರೆ.

ಪ್ರತಿಷ್ಠಿತ ಇನ್‌ಫೋಸಿಸ್ ಸಂಸ್ಥೆಯಿಂದ ಅಭಿವೃದ್ಧಿಗೊಂಡ ಹೆಬ್ಬಾಳ ಕೆರೆಗೆ ಎರಡು ಕಡೆ ರಸಾಯನಿಯುಕ್ತ ಕಲುಷಿತ ನೀರು ಸೇರುತ್ತಿದೆ. ಹೆಬ್ಬಾಳ, ಲೋಕನಾಯಕ ನಗರ, ವಿಜಯನಗರದ ಇನ್ನಿತರೆ ಸುತ್ತ–ಮುತ್ತಲಿನ ಬಡಾವಣೆಗಳಿಂದ ಹರಿದು ಬರುವ ಕಲುಷಿತ ನೀರಿನ ಜಾಗದಲ್ಲಿ ರಾಶಿ ರಾಶಿ ಕಸ ಬಿದ್ದಿದ್ದು, ಭಾರೀ ದುರ್ವಾಸನೆ ಬೀರುತ್ತಿದೆ.

ವಾಯುವಿಹಾರಿಗಳ ನೆಚ್ಚಿನ ತಾಣವಾದ ಹೆಬ್ಬಾಳ ಕೆರೆಯ ವಾತಾವರಣ, ಕೆರೆ ಸಂರಕ್ಷಣೆ ಹೊಣೆಹೊತ್ತ ಅಧಿಕಾರಿ–ಸಿಬ್ಬಂದಿಗಳಿಂದಲೇ ಹಾಳಾಗುತ್ತಿದೆ. ಹಲವು ಬಾರಿ ತ್ಯಾಜ್ಯ ತೆರವು ಮಾಡುವಂತೆ ಮನವಿ ಮಾಡಿದ್ದರೂ ಯಾವುದೇ ಕ್ರಮಕೈಗೊಂಡಿಲ್ಲ. ನೀರನ್ನು ಶುಚಿಗೊಳಿಸಲು ಇರುವ ಒಂದಷ್ಟು ಮೀನುಗಳನ್ನು ಸಾಯಿಸುತ್ತಿದ್ದಾರೆ ಎಂದು ಹೆಬ್ಬಾಳು ಕೆರೆ ಹಿತರಕ್ಷಣಾ ಸಮಿತಿ ಅಧ್ಯಕ್ಷ ರವಿಕುಮಾರ್ 'ಮೈಸೂರು ಮಿತ್ರ'ನಲ್ಲಿ ದೂರಿದ್ದಾರೆ.



Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಬೆಲೆ ಏರಿಕೆ, ನಿರುದ್ಯೋಗದ ವಿರುದ್ಧ ಜನ ದನಿಗೆ ಅಂಜಿ ಧಾರ್ಮಿಕ ವಿಚಾರಗಳು ಮುನ್ನೆಲೆಗೆ ಬರುತ್ತಿವೆ

ಶ್ರೀ ಉರಿಲಿಂಗ ಪೆದ್ದಿ ಮಠದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ ಬೇಸರ



ಮೈಸೂರು, ಮೇ 14(ಪಿಎಂ)– ಬೆಲೆ ಏರಿಕೆ, ನಿರುದ್ಯೋಗದ ವಿರುದ್ಧ ಜನ ಬೀದಿಗಿಳಿದು ಹೋರಾಟ ಮಾಡದಿರಲೆಂಬ ಕಾರಣಕ್ಕೆ ಧಾರ್ಮಿಕ ವಿಚಾರಗಳನ್ನು ಹರಿಬಿಡಲಾಗುತ್ತಿದೆ ಎಂದು ಮೈಸೂರಿನ ಗಾಂಧಿನಗರದ ಶ್ರೀಉರಿಲಿಂಗ ಪೆದ್ದಿ ಮಠದ ಶ್ರೀಜ್ಞಾನ ಪ್ರಕಾಶ ಸ್ವಾಮೀಜಿ ಆರೋಪಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ದಸಂಸ–ಡಾ.ಡಿ.ಜಿ. ಸಾಗರ್ ಬಣ) ಮೈಸೂರು ಜಿಲ್ಲಾ ಶಾಖೆ ವತಿಯಿಂದ ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರ 131ನೇ ಜಯಂತಿ ಅಂಗವಾಗಿ 'ಅಪಾಯದಲ್ಲಿ ಸಂವಿಧಾನ ಮತ್ತು ಪ್ರಜಾಪ್ರಭುತ್ವ' ಕುರಿತು ಶನಿವಾರ ಹಮ್ಮಿಕೊಂಡಿದ್ದ ವಿಚಾರ ಸಂಕಿರಣದಲ್ಲಿ ಅವರು ಮುಖ್ಯಭಾಷಣ ಮಾಡಿದರು.

ಪ್ರಭುತ್ವದ ಶೋಷಣೆಗಳನ್ನು ಪ್ರಶ್ನಿಸಿದರೆ ದೇಶದ್ರೋಹದ ಆಪಾದನೆಯಡಿ ಜೈಲಿಗೆ ಹಾಕುವ ಕೆಲಸ ಪ್ರಸ್ತುತ ನಡೆಯುತ್ತಿದೆ. ಹಾಗಾದರೆ ದೇಶದಲ್ಲಿ ಯಾವ ಸಂವಿಧಾನ ಜಾರಿಯಲ್ಲಿದೆ? ದೇಶದಲ್ಲಿ ಅಲಿಖಿತ 'ಮನು ಸಂವಿಧಾನ' ಜೀವಂತವಾಗಿದೆ. ಮನುವಾದಿಗಳು ಅಂಬೇಡ್ಕರ್ ಸಂವಿಧಾನ ಒಪ್ಪಲ್ಲ. ಏಕೆಂದರೆ ಅಂಬೇಡ್ಕರ್ ಸಂವಿಧಾನ ಕಟ್ಟಕಡೆಯ ವ್ಯಕ್ತಿಗೂ ಪ್ರಧಾನಿ ಆಗುವ ಅವಕಾಶವಿರುವ ಸಮಾನತೆಯ ಸಂವಿಧಾನ ಎಂದು ಹೇಳಿದರು.

ಇಂದು ಭಾರತ ಸಂವಿಧಾನ ಅತ್ಯಂತ ಅಪಾಯದಲ್ಲಿದೆ. ಮುಖ್ಯಮಂತ್ರಿ ಸ್ಥಾನ 2,500 ಕೋಟಿಗೆ ಹರಾಜಿದೆ ಎಂದು ಆಡಳಿತ ಪಕ್ಷದವರೇ ಬಹಿರಂಗ ಹೇಳಿಕೆ ಕೊಟ್ಟಿದ್ದು, ಕರ್ನಾಟಕ ಮತ್ತು ದೇಶ, ಯಾವ ಪರಿಸ್ಥಿತಿಯಲ್ಲಿದೆ? ಎಂದು ಅರ್ಥವಾಗುತ್ತದೆ. ವಿಧಾನಸೌಧ, ವ್ಯಾಪಾರ ಸೌಧವಾಗಿ ಪರಿವರ್ತನೆಯಾಗಿದೆ. ಅಂದರೆ ಪ್ರಜಾಪ್ರಭುತ್ವ ಇದೆಯೇ? ಎಂಬ ಪ್ರಶ್ನೆ ಮೂಡುತ್ತದೆ. ಪ್ರಜಾಪ್ರಭುತ್ವ ಇಂದು ನಮ್ಮ ದೇಶದಲ್ಲಿ ಇದ್ದರೆ ಒಬ್ಬ ಸಾಮಾನ್ಯ ವ್ಯಕ್ತಿ ನೆಮ್ಮದಿಯಿಂದ ಬದುಕುತ್ತಿದ್ದ. ಆದರೆ ಅಂತಹ ಪರಿಸ್ಥಿತಿ ಇಲ್ಲ. ಹಾಗಾಗಿ ಪ್ರಜ್ಞಾವಂತ ಮತದಾರರಿಂದ ಮಾತ್ರ ಈ ದೇಶ ಉನ್ನತ ಸ್ಥಾನಕ್ಕೆ ತಲುಪುವುದು ಸಾಧ್ಯವಾಗಲಿದೆ ಎಂದು ತಿಳಿಸಿದರು.

ಇಂದು ಸಂವಿಧಾನದ ರೆಕ್ಕೆ–ಪುಕ್ಕ ಕಿತ್ತು ಬಿಸಾಡುವ ಸನ್ನಿವೇಶ ಸೃಷ್ಟಿಸಲಾಗುತ್ತಿದೆ. ಮೆರವಣಿಗೆ, ಕುಣಿತದಂತಹ ಅಬ್ಬರದ ಅಂಬೇಡ್ಕರ್ ಜಯಂತಿ ಬದಲು ವಿಚಾರ ಸಂಕಿರಣಗಳ ಮೂಲಕ ಈ ಬಗ್ಗೆ ಜಾಗೃತಿ ಮೂಡಿಸುವುದು ಅಗತ್ಯ ಎಂದರು.

ವಾಲ್ಮೀಕಿ ಸಮುದಾಯದ ಶ್ರೀಗಳು ತಮ್ಮ ಸಮುದಾಯಕ್ಕೆ ಶೇ.7.5ರಷ್ಟು ಮೀಸಲಾತಿ ನೀಡಬೇಕೆಂದು ನಿರಂತರ ಹೋರಾಟ ನಡೆಸಿದರೂ ಅವರಿಗೆ ಸ್ಪಂದಿಸುತ್ತಿಲ್ಲ. ಆದರೆ ಶೇ.3ರಷ್ಟು ಜನಸಂಖ್ಯೆ ಹೊಂದಿರುವ ಮೇಲ್ವರ್ಗದ ಆರ್ಥಿಕವಾಗಿ ಹಿಂದುಳಿದವರಿಗೆ ಶೇ.10ರಷ್ಟು ಮೀಸಲಾತಿ ಕಲ್ಪಿಸಲಾಗಿದೆ. ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಸಮುದಾಯಕ್ಕೆ ಮಾತ್ರ ಮೀಸಲಾತಿ ನೀಡಬೇಕೆಂದು ಸಂವಿಧಾನ ಹೇಳುತ್ತದೆ. ಆದರೆ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ತಿದ್ದುಪಡಿ ತಂದು ಮೇಲ್ವರ್ಗದವರಿಗೆ ಮೀಸಲಾತಿ ಕಲ್ಪಿಸಲಾಗಿದೆ ಎಂದು ದೂರಿದರು.

ಕುದ್ಮುಲ್ ರಂಗರಾಯರನ್ನು ಸದಾ ಸ್ಮರಿಸಬೇಕು

ಬ್ರಾಹ್ಮಣ ಸಮುದಾಯದ ಎಲ್ಲರೂ ಜಾತಿವಾದಿಗಳು ಹಾಗೂ ಕೆಟ್ಟವರಲ್ಲ. ಅವರಲ್ಲೂ ಸಮಾನತೆ ಪ್ರತಿಪಾದಿಸುವ ಹಲವರಿದ್ದಾರೆ. ಆ ಪೈಕಿ ರಾಜ್ಯದಲ್ಲಿ ದಲಿತ ಮಕ್ಕಳಿಗೆ ಕುದ್ಮುಲ್ ರಂಗರಾಯರು ಮೊಟ್ಟ ಮೊದಲಿಗೆ ಶಿಕ್ಷಣ ನೀಡಿದ ಮಹಾಪುರುಷ. ಅವರನ್ನು ನಾವು ಸದಾ ಸ್ಮರಿಸಬೇಕು.
- ಶ್ರೀಜ್ಞಾನ ಪ್ರಕಾಶ ಸ್ವಾಮೀಜಿ

ಸಂವಿಧಾನದ ಪರಿಚ್ಛೇದ 25ರ ಪ್ರಕಾರ ಭಾರತದ ಪ್ರಜೆಗಳು ಯಾವುದೇ ಧರ್ಮವನ್ನು ನಿರಾತಂಕವಾಗಿ ಆಚರಣೆ ಮಾಡಲು ಅವಕಾಶವಿದೆ. ಹಲವು ಧರ್ಮ, ಜಾತಿಯಿಂದ ಕೂಡಿರುವ ಬಹುತ್ವಭಾರತ ಇದಾಗಿದ್ದು, ಇದನ್ನು ಏಕತ್ವ ಮಾಡಿದರೆ, ಮತ್ತೆ ಈ ದೇಶ ಗುಲಾಮಗಿರಿಗೆ ತಲುಪಲಿದೆ ಎಂದು ಅಂಬೇಡ್ಕರ್ ಎಚ್ಚರಿಕೆ ನೀಡಿದ್ದಾರೆ. ಆದರೆ ಇಂದು ಮತಾಂತರ ನಿಷೇಧ ಕಾಯ್ದೆ ಮೂಲಕ ಧಾರ್ಮಿಕ ಸ್ವಾತಂತ್ರ್ಯ ಕಸಿಯಲಾಗುತ್ತಿದೆ ಎಂದು ಆಪಾದಿಸಿದರು.


ರಾಜ್ಯದಲ್ಲಿ ಪರಿಶಿಷ್ಟ ಜಾತಿ, ವರ್ಗದ ಶೇ.42ರಷ್ಟು ಮಕ್ಕಳು ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಿಂದ ಹೊರಗುಳಿದಿದ್ದಾರೆ. ಇದಕ್ಕೆ ಹೊಣೆ ಯಾರು? ಎಂದು ಪ್ರಶ್ನಿಸಿದ ಅವರು, ಕೊಪ್ಪಳ, ರಾಯಚೂರು, ಮಸ್ಕಿ, ಬೀದರ್ ಭಾಗದಲ್ಲಿ 12ರಿಂದ 18ವರ್ಷದವರೆಗಿನ 4 ಸಾವಿರ ಹೆಣ್ಣು ಮಕ್ಕಳು ದೇವದಾಸಿ ಆಗಿದ್ದಾರೆ. ಹಾಗಾದರೆ ಯಾವ ಸಂವಿಧಾನ ದೇಶದಲ್ಲಿ ಜಾರಿಯಲ್ಲಿದೆ? ಸಂವಿಧಾನಕ್ಕಿಂತ ವೇದ, ಉಪನಿಷತ್ ಶ್ರೇಷ್ಠವೆಂದು ಸ್ವಾಮೀಜಿಯೊಬ್ಬರು ಹೇಳಿಕೆ ನೀಡಿದ್ದಾರೆ. ಮತ್ತೊಬ್ಬ ಸ್ವಾಮೀಜಿ, ಕಾನೂನಿಗಿಂತ ಧರ್ಮ ಶ್ರೇಷ್ಠ ಎಂದಿದ್ದಾರೆ ಎಂದು ಕಿಡಿಕಾರಿದರು. ಮೈಸೂರು ಎಪಿಎಂಸಿ ಮಾಜಿ ಉಪಾಧ್ಯಕ್ಷ ಚಿಕ್ಕಜವರಯ್ಯ, ದಸಂಸ ಜಿಲ್ಲಾ ಸಂಚಾಲಕ ಮಲ್ಲೇಶ್ ಚುಂಚನಹಳ್ಳಿ ಮತ್ತಿತರರು ಹಾಜರಿದ್ದರು.


ಮೇ 19ಕ್ಕೆ ಪ್ರೊ.ಎವಿಎನ್ 'ಇತಿಹಾಸ ತಾರೆಗಳು' ಕೃತಿ ಲೋಕಾರ್ಪಣೆ


ಮೈಸೂರು, ಮೇ 14(ಎಂಕೆ)– ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಶ್ರೀ ಯೋಗಾನರಸಿಂಹ ಸ್ವಾಮಿ ದೇವಸ್ಥಾನದ ಆವರಣ ದಲ್ಲಿ ಮೇ 19ರಂದು ಬೆಳಗ್ಗೆ 10.30ಕ್ಕೆ ಹಿರಿಯ ವಿದ್ವಾಂಸ ಡಾ.ಎ. ವಿ. ನರಸಿಂಹಮೂರ್ತಿ ಅವರ 'ಇತಿಹಾಸದ ತಾರೆಗಳು' ಕೃತಿ ಲೋಕಾರ್ಪಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.




ನಾಡೋಜ ಡಾ.ಭಾಷ್ಯಂ ಸ್ವಾಮೀಜಿ ಕೃತಿ ಲೋಕಾರ್ಪಣೆಗೊಳಿಸಲಿದ್ದು, ಕೃತಿ ಕುರಿತು ಕರ್ನಾಟಕ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಡಾ. ಪದ್ಮಾಶೇಖರ್ ಮಾತನಾಡ ಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕ ವಾಸು ಭಾಗವಹಿಸಲಿದ್ದು, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.




















ಜಿಲ್ಲೆಗೆ ಜೆಡಿಎಸ್, ಕಾಂಗ್ರೆಸ್ ಕೊಡುಗೆ ಶೂನ್ಯ

ಪಾಂಡವಪುರದಲ್ಲಿ ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ ವಾಗ್ದಾಳಿ

- ವಿವಿಧ ಪಕ್ಷಗಳ ಕಾರ್ಯಕರ್ತರು ಬಿಜೆಪಿ ಸೇರ್ಪಡೆ
- ಜೂನ್‌ನಲ್ಲಿ ಮೈಶುಗರ್ ಕಾರ್ಖಾನೆ ಆರಂಭ
- ಜಿಲ್ಲೆಯಲ್ಲಿ 7 ಕ್ಷೇತ್ರವನ್ನು ಗೆಲ್ಲಿಸಿಕೊಡಿ
- ಜಿಲ್ಲೆಯ ಅಭಿವೃದ್ಧಿಗೆ ಎರಡೂವರೆ ಸಾವಿರ ಕೋಟಿ ತಂದಿರುವೆ



ಪಾಂಡವಪುರ,ಮೇ 14– ಜಿಲ್ಲೆಗೆ ಜೆಡಿಎಸ್ ಮತ್ತು ಕಾಂಗ್ರೆಸ್ ಕೊಡುಗೆ ಶೂನ್ಯ ಎಂದು ಕ್ರೀಡಾ ಸಚಿವ ಕೆ.ಸಿ.ನಾರಾಯಣ ಗೌಡ ಇಂದಿಲ್ಲಿ ವಾಗ್ದಾಳಿ ನಡೆಸಿದ್ದಾರೆ.

ಪಟ್ಟಣದ ಕ್ರೀಡಾಂಗಣದಲ್ಲಿ ನಡೆದ ಬಿಜೆಪಿ ಕಾರ್ಯಕರ್ತರ ಸಮಾವೇಶ ಹಾಗೂ ವಿವಿಧ ಪಕ್ಷಗಳ ಕಾರ್ಯಕರ್ತರ ಸೇರ್ಪಡೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್ ಹಲವಾರು ಬಾರಿ ಆಡಳಿತ ನಡೆಸಿವೆ. ಆದರೆ, ಜಿಲ್ಲೆಯ ಅಭಿವೃದ್ಧಿಗೆ ಎರಡು ಪಕ್ಷಗಳ ಕೊಡುಗೆ ಏನು ಇಲ್ಲ. ನಾನು ಸಚಿವನಾದ ಬಳಿಕ ಬಿಜೆಪಿ ಸರ್ಕಾರ ಜಿಲ್ಲೆಯ ಅಭಿವೃದ್ಧಿಗಾಗಿ ಎರಡೂವರೆ ಸಾವಿರ ಕೋಟಿ ಅನುದಾನ ನೀಡಿದೆ ಎಂದರು.

ನಾನು ಸೇರಿದಂತೆ ಒಟ್ಟು 17 ಮಂದಿ ಶಾಸಕರು ಬಿಜೆಪಿ ಸೇರ್ಪಡೆಗೊಂಡಿದ್ದು, ಕೇವಲ ಕ್ಷೇತ್ರದ ಅಭಿವೃದ್ಧಿಗಾಗಿ ಮಾತ್ರ. ಅದರಂತೆ ನಾವು ಉಪ ಚುನಾವಣೆಯಲ್ಲಿ ಗೆದ್ದ ಬಳಿಕ ನಮ್ಮ ಸರ್ಕಾರ ಕ್ಷೇತ್ರದ ಅಭಿವೃದ್ಧಿಗೆ ಸಹಕಾರ ನೀಡುತ್ತಿದೆ ಎಂದು ಹೇಳಿದರು.

ಜಿಲ್ಲೆಯ ಅಭಿವೃದ್ಧಿಗೆ ಕೋಟಿಗಟ್ಟಲೆ ಅನುದಾನವನ್ನು ಯಡಿಯೂರಪ್ಪ ಹಾಗೂ ಸಿಎಂ ಬಸವರಾಜ ಬೊಮ್ಮಾಯಿ ಅವರು ಕೊಟ್ಟಿದ್ದಾರೆ. ಮಾತಿನಂತೆ ನಡೆದುಕೊಂಡ ಸಿಎಂ ಇದ್ದರೆ ಅವರು ನಮ್ಮ ನಾಯಕ ಬಿ.ಎಸ್.ಯಡಿಯೂರಪ್ಪ ಮಾತ್ರ. ಈಗಿನ ಸಿಎಂ ಬಸವರಾಜ ಬೊಮ್ಮಾಯಿ ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ದಯಮಾಡಿ ಮಂಡ್ಯ ಜಿಲ್ಲೆಯಲ್ಲಿ ಏಳಕ್ಕೆ ಏಳು ಸ್ಥಾನವನ್ನು ಗೆಲ್ಲಿಸಿಕೊಟ್ಟರೆ 5 ಸಾವಿರ ಕೋಟಿ ಹಣವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ತಂದು ಕ್ಷೇತ್ರವನ್ನು ಅಭಿವೃದ್ಧಿಪಡಿಸುವೆ ಎಂದು ಭರವಸೆ ನೀಡಿದರು.

ಶ್ರೀರಂಗಪಟ್ಟಣ, ಮಂಡ್ಯ, ಮದ್ದೂರು, ಮಳವಳ್ಳಿ ಕ್ಷೇತ್ರದಲ್ಲಿ ಕುಡಿಯುವ ನೀರಿಗಾಗಿ 1200 ಕೋಟಿ ಅನುದಾನ ಮಂಜೂರಾಗಿದ್ದು, ಡಿಪಿಆರ್ ಹೋಗಿದೆ. ಪಾಂಡವಪುರದ ಸಕ್ಕರೆ ಕಾರ್ಖಾನೆಯನ್ನು ಬಿಜೆಪಿ ಆರಂಭಿಸಿದ್ದು, ಮಂಡ್ಯ ಮೈಶುಗರ್ ಕಾರ್ಖಾನೆ ಜೂನ್ ತಿಂಗಳಲ್ಲಿ ಆರಂಭಗೊಳ್ಳಲಿದೆ ಎಂದು ಭರವಸೆ ನೀಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಮಾತನಾಡಿ, ಬಿಜೆಪಿ ಸರಕಾರ ರೈತರ ಪರವಾಗಿ ಕೆಲಸ ಮಾಡುತ್ತಿದೆ. ಕೇಂದ್ರ ಹಾಗೂ ರಾಜ್ಯ ಸರಕಾರದಿಂದ 52 ಲಕ್ಷಕ್ಕಿಂತ ಅಧಿಕ ರೈತರ ಕುಟುಂಬಗಳಿಗೆ ಹಾಗೂ ಜಿಲ್ಲೆಯ 27,316 ರೈತರ ಖಾತೆಗೆ ಹಣ ಜಮೆ ಮಾಡುವ ಕೆಲಸ ಮಾಡಲಾಗಿದೆ. ಕೋವಿಡ್ ಸಂದರ್ಭದಲ್ಲಿ ಅಕ್ಕಿ ನೀಡಿರುವುದು ಬಿಜೆಪಿ. ಹಾಗೆಯೇ ರಾಜ್ಯದ ರೈತರ ಕುಟುಂಬದ ವಿದ್ಯಾರ್ಥಿಗಳಿಗಾಗಿ 1 ಸಾವಿರ ಕೋಟಿ ಹಣ ನೀಡಿದೆ ಎಂದರು.

ಸಚಿವ ನಾರಾಯಣಗೌಡ ಮತ್ತು ನಾನು ಇಬ್ಬರು ಒಟ್ಟಿಗೆ ರಾಜೀನಾಮೆ ಕೊಟ್ಟು ಬಂದೆವು. ನಾನು ಮತ್ತು ನಾರಾಯಣಗೌಡರು ಇಬ್ಬರೂ ಸೇರಿ ಕ್ಷೇತ್ರವನ್ನು ಅಭಿವೃದ್ಧಿಪಡಿಸುವ ವಿಚಾರದಲ್ಲಿ ನ್ಯಾಯ ದೊರಕಿಸಿ ಕೊಡುವ ಕೆಲಸ ಮಾಡುತ್ತೇವೆ ಎಂದರು.

ಸಂಸದ ಪ್ರತಾಪ್‌ಸಿಂಹ ಮಾತನಾಡಿ, ಕಾಂಗ್ರೆಸ್‌ನಲ್ಲಿ ಸಿಎಂ ಆಗಲು ಸಿದ್ದರಾಮಯ್ಯ ಪ್ರಯತ್ನ ನಡೆಸುತ್ತಿದ್ದಾರೆ. ಅದಕ್ಕಾಗಿ ಪ್ರತಿಸ್ಪರ್ಧಿಯನ್ನು ಮುಗಿಸಲು ಹೊರಟಿದ್ದಾರೆ. ಯಾರೇ ಒಬ್ಬ ಸಿಎಂ ಆಗಬೇಕಾದರೆ ಅವರ ಅಭಿವೃದ್ಧಿ ಕೆಲಸಗಳು ಕಣ್ಣ ಮುಂದೆ ಬರುತ್ತದೆ. ಹಾಗೆ ನೋಡಿದರೆ ಯಡಿಯೂರಪ್ಪನವರ ಕಣ್ಣ ಮುಂದೆ ಬರುತ್ತಾರೆ ಎಂದರು.

ಸಿದ್ದರಾಮಯ್ಯ ಅವರನ್ನು ನೆನಪು ಮಾಡಿಕೊಂಡರೆ ಏನು ನೆನಪಾಗುತ್ತದೆ. ಸಿದ್ದರಾಮಯ್ಯನವರನ್ನು ನೆನಪು ಮಾಡಿಕೊಂಡರೆ ಸಭೆ ಸಮಾರಂಭಗಳಲ್ಲಿ ನಿದ್ರೆ ಮಾಡುವುದಷ್ಟೆ ನೆನಪಿಗೆ ಬರುತ್ತದೆ ಎಂದು ಕಿಡಿಕಾರಿದರು.

ಸಭೆಗೂ ಮುನ್ನ ಪಟ್ಟಣದ ಐದು ದೀಪ ವೃತ್ತದಿಂದ ತೆರೆದ ವಾಹನದಲ್ಲಿ ನೂರಾರು ಬಿಜೆಪಿ ಕಾರ್ಯಕರ್ತರು ಮೆರವಣಿಗೆಯ ಮೂಲಕ ಅತಿಥಿಗಳನ್ನು ವೇದಿಕೆಗೆ ಕರೆತಂದರು.

ಈ ಸಂದರ್ಭದಲ್ಲಿ ಶಾಸಕ ಎನ್.ಮಹೇಶ್, ವಿಧಾನಪರಿಷತ್ ಸದಸ್ಯ ಸಿ.ಪಿ.ಯೋಗೀಶ್ವರ್, ರವಿಕುಮಾರ್, ಮೈ.ವಿ.ಶಂಕರ್, ಜಿಲ್ಲಾಧ್ಯಕ್ಷ ವಿಜಯ್‌ಕುಮಾರ್, ಮೈಶುಗರ್ ಅಧ್ಯಕ್ಷ ಜೆ.ಶಿವಲಿಂಗೇಗೌಡ, ಬಿಜೆಪಿ ಮುಖಂಡ ಡಾ.ಎನ್.ಎಸ್.ಇಂದ್ರೇಶ್, ಎಚ್.ಎನ್.ಮಂಜುನಾಥ್, ಮೂಡಾ ಅಧ್ಯಕ್ಷ ಶ್ರೀನಿವಾಸ್, ತಾಲೂಕು ಅಧ್ಯಕ್ಷ ಅಶೋಕ್, ಮಂಗಳ ನವೀನ್ ಹಲವರು ಇದ್ದರು.

ಸಿದ್ದರಾಮಯ್ಯರಿಗೆ ಟಿಪ್ಪು ಬಿಟ್ಟರೆ ಅವರಿಗೆ ಕಾನೂನು ಪದವಿಕೊಟ್ಟ ಮೈಸೂರು ವಿವಿ ಸ್ಥಾಪಕ ನಾಲ್ವಡಿ ನೆನಪಿಲ್ಲ

ಸಂಸದ ಪ್ರತಾಪ್ ಸಿಂಹ ವಾಗ್ದಾಳಿ, ಟಿಪ್ಪು ಜಯಂತಿ ಮೂಲಕ ಅಶಾಂತಿ



ಶ್ರೀರಂಗಪಟ್ಟಣ, ಮೇ 14(ವಿನಯ್ ಕಾರೇಕುರ)– ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ಟಿಪ್ಪು ಜಯಂತಿ ಆಚರಣೆ ಮಾಡಿ ಬಿಜೆಪಿ ಕಾರ್ಯಕರ್ತನ ಹತ್ಯೆಗೆ ಕಾರಣರಾಗುವ ಮೂಲಕ ರಾಜ್ಯದಲ್ಲಿ ಅಶಾಂತಿ ಉಂಟು ಮಾಡಿದ್ದು ಬಿಟ್ಟರೆ ಅವರ ಕಾಲದ ಯಾವುದೇ ಅಭಿವೃದ್ಧಿ ಕಾರ್ಯಕ್ರಮಗಳು ನಮಗೆ ನೆನಪಾಗುವುದಿಲ್ಲ ಎಂದು ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ವಾಗ್ದಾಳಿ ನಡೆಸಿದ್ದಾರೆ.

ಪಟ್ಟಣದ ಖಾಸಗಿ ಬಸ್ ನಿಲ್ದಾಣದ ಬಳಿ ಬಿಜೆಪಿ ಕಾರ್ಯಕರ್ತರ ಸಮಾವೇಶ ಮತ್ತು ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, ಶ್ರೀರಂಗಪಟ್ಟಣಕ್ಕೆ ಟಿಪ್ಪು ಕೊಡುಗೆ ಏನು ಎಂದು ಪ್ರಶ್ನಿಸಿದರಲ್ಲದೆ, ಸಿದ್ದರಾಮಯ್ಯ ಸಿಎಂ ಆಗಿದ್ದಾಗ ಟಿಪ್ಪು ಜಯಂತಿ ಆಚರಿಸಿದರು. ಅವರಿಗೆ ಕಾನೂನು ಪದವಿ ಕೊಟ್ಟ ವಿಶ್ವವಿದ್ಯಾನಿಲಯ, ಕೆಆರ್‌ಎಸ್ ಅಣೆಕಟ್ಟೆ ನಿರ್ಮಿಸಿದ ನಾಲ್ವಡಿ ಕೃಷ್ಣರಾಜ ಒಡೆಯರ್ ನೆನಪಾಗಲಿಲ್ಲ. ಆದರೆ ಟಿಪ್ಪು ಮಾತ್ರ ನೆನಪಾಗಿ ಟಿಪ್ಪು ಜಯಂತಿ ಆಚರಣೆಗೆ ನಾಂದಿ ಹಾಡಿದರು ಎಂದು ಕಿಡಿಕಾರಿದರು.

ಒಂದು ಚಹಾ ಕುಡಿಸದೆ ನಾನು ಮುಖ್ಯಮಂತ್ರಿ ಆದೆ ಎಂದು ಸಿದ್ದರಾಮಯ್ಯ ಹೇಳುತ್ತಾರೆ. ಈ ಮಾತನ್ನು ನಂಬಲು ಸಾಧ್ಯವಿಲ್ಲ. ಬಹುಶಃ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಚಹಾ ಕುಡಿಯಲ್ಲ, ಬೇರೇನೋ ಕುಡಿಯುತ್ತಾರೆ. ಅವರಿಗೆ ಅದನ್ನೇ ಕೊಟ್ಟಿದ್ದಾರೆ ಅನ್ನಿಸುತ್ತೆ ಎಂದು ಸಿದ್ದರಾಮಯ್ಯ ವಿರುದ್ಧ ಲೇವಡಿ ಮಾಡಿದರು.

ಕೋವಿಡ್ ಯಶಸ್ವಿ ನಿರ್ವಹಣೆ: ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಮಾತನಾಡಿ, ಆತ್ಮಾಭಿಮಾನಕ್ಕೆ ಧಕ್ಕೆಯಾದ ಸಂದರ್ಭದಲ್ಲಿ ನಾನು ಮತ್ತು ಕೆ.ಸಿ.ನಾರಾಯಣಗೌಡ ಸೇರಿದಂತೆ ಹಲವರು ಪಕ್ಷ ತೊರೆದು ವಿಶ್ವದಲ್ಲೇ ಅತಿ ದೊಡ್ಡ ಪಕ್ಷ ಬಿಜೆಪಿಗೆ ಸೇರ್ಪಡೆಗೊಂಡು ಸಚಿವರಾಗಿ ಉತ್ತಮ ಆಡಳಿತ ನಡೆಸುತ್ತಿದ್ದೇವೆ. ಕೋವಿಡ್ ಸಮಯದಲ್ಲಿ ನಾನು ಹಾಸನ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ವೇಳೆ ಹಲವಾರು ಸವಾಲುಗಳನ್ನು ಎದುರಿಸಿ ಯಶಸ್ವಿಯಾಗಿ ಕೋವಿಡ್ ನಿರ್ವಹಣೆ ಮಾಡಿದ ಕೀರ್ತಿ ನಮಗಿದೆ ಎಂದರು.

ಬಿಜೆಪಿ ಬೆಳೆ ಬೆಳೆಯಿರಿ: ಮಾಜಿ ಸಚಿವ ಸಿ.ಪಿ.ಯೋಗೇಶ್ವರ್ ಮಾತನಾಡಿ, ಮಂಡ್ಯ ಜಿಲ್ಲೆ ಜೆಡಿಎಸ್ ಭದ್ರಕೋಟೆ. ಹೆಚ್ಚಿನ ಶಾಸಕರನ್ನು ನೀಡಿದ್ದರೂ ಮೈತ್ರಿ ಸರ್ಕಾರದ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ ಹೆಚ್.ಡಿ.ಕುಮಾರಸ್ವಾಮಿ, ಜಿಲ್ಲೆಯ ಎರಡು ಕಣ್ಣುಗಳಂತಿದ್ದ ಸಕ್ಕರೆ ಕಾರ್ಖಾನೆಗಳನ್ನು ಆರಂಭಿಸಲಿಲ್ಲ. ರೈತನ ಮಗ ಎಂದು ಅನ್ನುವವರು ಇದರತ್ತ ಯಾಕೆ ಗಮನಹರಿಸಲಿಲ್ಲ ಎಂದು ಪ್ರಶ್ನಿಸಿದರಲ್ಲದೆ, ಇದೀಗ ರೈತರು ರಾಜಕೀಯ ಬೇಸಾಯ ಬದಲು ಮಾಡಿಕೊಳ್ಳಬೇಕು. ಜೆಡಿಎಸ್– ಕಾಂಗ್ರೆಸ್ ಬೆಳೆ ಬದಲಾಯಿಸಿ ಬಿಜೆಪಿ ಬೆಳೆ ಬೆಳೆಯಬೇಕು ಎಂದು ಹೇಳಿದರು.

ಸಚ್ಚಿದಾನಂದ ಬಿಜೆಪಿ ಸೇರ್ಪಡೆ: ಇದೇ 29 ರಂದು ಇಂಡವಾಳು ಸಚ್ಚಿದಾನಂದ ಸೇರಿದಂತೆ ಜೆಡಿಎಸ್–ಕಾಂಗ್ರೆಸ್‌ನ ಮತ್ತಷ್ಟು ಮುಖಂಡರು ಬಿಜೆಪಿಗೆ ಸೇರ್ಪಡೆಗೊಳ್ಳಲಿದ್ದಾರೆ ಎಂದು ಸಿ.ಪಿ.ಯೋಗೇಶ್ವರ್ ಇದೇ ವೇಳೆ ಘೋಷಣೆ ಮಾಡಿದರು.

ಪಕ್ಷ ಸೇರ್ಪಡೆ: ತಾಲೂಕಿನ ವಿವಿಧ ಗ್ರಾಮಗಳ ವಿವಿಧ ಪಕ್ಷಗಳ ಮುಖಂಡರು ಬಿಜೆಪಿ ಸಿದ್ಧಾಂತಗಳ ಮೆಚ್ಚಿ ಪಕ್ಷ ಸೇರ್ಪಡೆಗೊಂಡರು. ಅವರುಗಳಿಗೆ ಸಚಿವರು ಹಾಗೂ ನಾಯಕರು ಬಿಜೆಪಿ ಶಾಲು ಹೊದಿಸಿ ಬರಮಾಡಿಕೊಂಡರು.

ಸಚಿವ ಕೆ.ಸಿ.ನಾರಾಯಣಗೌಡ, ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಡಾ| ಸಿದ್ದರಾಮಯ್ಯ, ರಾಜ್ಯ ರೈತ ಮೋರ್ಚಾ ಉಪಾಧ್ಯಕ್ಷ ಕೆ.ಎಸ್.ನಂಜುಂಡೇಗೌಡ, ಜಿಲ್ಲಾಧ್ಯಕ್ಷ ವಿಜಯ್‌ಕುಮಾರ್, ಜಿಲ್ಲಾ ಉಪಾಧ್ಯಕ್ಷ ಟಿ.ಶ್ರೀಧರ್, ತಾಲೂಕು ಮಂಡಲ ಅಧ್ಯಕ್ಷ ಪೀಹಳ್ಳಿ ರಮೇಶ್ ಸೇರಿದಂತೆ ಇತರರು ಇದ್ದರು.

ನಾಳೆಯಿಂದ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿ

ಮಂಡ್ಯ,ಮೇ 14(ಮೋಹನ್‌ರಾಜ್)– ಶ್ರೀ ಬಿಸಿಲು ಮಾರಮ್ಮ ದೇವಿಯ ಹಬ್ಬದ ಪ್ರಯುಕ್ತ ಮಾರಿಗುಡಿ ಗೆಳೆಯರ ಬಳಗದ ವತಿಯಿಂದ ಮೈಸೂರು ವಿಭಾಗ ಮಟ್ಟದ ಪುರುಷರ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿ ಯನ್ನು ಮೇ 16 ಮತ್ತು 17ರಂದು ನಗರದ ಹೊಸಹಳ್ಳಿಯ ರಾಮಮಂದಿರದ ಬಳಿ ಆಯೋಜಿಸಲಾಗಿದೆ ಎಂದು ಬಳಗದ ಅಧ್ಯಕ್ಷ ಶ್ರೀಕಾಂತ್ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಂದ್ಯಾವಳಿಗೆ ಸರ್‌ಎಂವಿ ಕಪ್ ಎಂದು ಹೆಸರಿಟ್ಟಿದ್ದು, ಪ್ರಥಮ ಬಹುಮಾನ 50 ಸಾವಿರ, ದ್ವಿತೀಯ ಬಹುಮಾನ 30 ಸಾವಿರ, ತೃತೀಯ ಹಾಗೂ ಚತುರ್ಥ ಬಹುಮಾನ ತಲಾ ಹತ್ತು ಸಾವಿರ ನಿಗದಿ ಮಾಡಿದ್ದು, ಹಣದ ಜೊತೆಗೆ ಆಕರ್ಷಕ ಟ್ರೋಫಿ ನೀಡಲಾಗುವುದು ಎಂದು ತಿಳಿಸಿದರು.

ಆನ್‌ಲೈನ್ ವಂಚನೆ ಪ್ರಕರಣ ಭೇದಿಸಿದ ಸೈಬರ್ ಠಾಣೆಯ ಪೊಲೀಸರು: 1.75 ಲಕ್ಷ ರೂ. ವಾಪಸ್



ಆನ್‌ಲೈನ್ ಮೂಲಕ ಸಾಲ ನೀಡುವುದಾಗಿ ಬರುವ ಸಂದೇಶಗಳ ಬಗ್ಗೆ ಸಾರ್ವಜನಿಕರು ಎಚ್ಚರ ವಹಿಸಬೇಕು. ಕಡಿಮೆ ಬಡ್ಡಿಗೆ ಸಾಲ ದೊರೆಯುತ್ತದೆ ಎಂಬ ಕಾರಣಕ್ಕೆ ಹಣ ಕಳಹಿಸಬಾರದು. ಆನ್‌ಲೈನ್ ವಂಚನೆ ಬಗ್ಗೆ ಅರಿವಿರದವರು ಹೆಚ್ಚು ಹಣ ತಮ್ಮ ಬ್ಯಾಂಕ್ ಖಾತೆಯಿಂದ ಕಡಿತವಾದರೆ ತಕ್ಷಣ ಸೈಬರ್ ಠಾಣೆಯ 1930ಗೆ ಕರೆ ಮಾಡಿ ದೂರು ನೀಡಬೇಕು.
– ಕೆ.ಎಸ್.ಸುಂದರರಾಜ್, ಎಎಸ್‌ಪಿ.

ಚಾಮರಾಜನಗರ, ಮೇ 14– ಆನ್‌ಲೈನ್ ವಂಚನೆ ಪ್ರಕರಣವನ್ನು ನಗರದ ಸೈಬರ್ ಠಾಣೆಯ ಪೊಲೀಸರು ಭೇದಿಸುವಲ್ಲಿ ಯಶಸ್ವಿಯಾಗಿದ್ದು, ವಂಚನೆಗೊಳಗಾಗಿದ್ದ ವ್ಯಕ್ತಿಗೆ 1.75ಲಕ್ಷ ರೂ. ಹಣ ವಾಪಸ್ ಕೊಡಿಸಲಾಗಿದೆ ಎಂದು ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್. ಸುಂದರರಾಜ್ ಹೇಳಿದರು.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನ ಕುಮಚಹಳ್ಳಿ ಗ್ರಾಮದ ನಾಗಮಲ್ಲಪ್ಪ ಅವರು ಆನ್‌ಲೈನ್ ಸಾಲದ ಸುಳಿಗೆ ಸಿಲುಕಿ ವಂಚನೆಗೆ ಒಳಗಾಗಿದ್ದರು. ಇವರ ದೂರು ಆಧರಿಸಿ ಪೊಲೀಸರು ಚುರುಕಿನ ತನಿಖೆ ನಡೆಸಿ, ದೊಡ್ಡ ಮೊತ್ತದ ಹಣವನ್ನು ವಾಪಸ್ ಕೊಡಿಸಿದ್ದಾರೆ ಎಂದು ತಿಳಿಸಿದರು.

ಏನಿದು ಘಟನೆ: ಕುಮಚಹಳ್ಳಿ ಗ್ರಾಮದ ನಾಗಮಲ್ಲಪ್ಪ ಅವರ ಮೊಬೈಲ್‌ಗೆ ಏ. 14ರಂದು ಲೈಟ್‌ಸ್ಟ್ರೀಮ್ ಎಂಬ ಕಂಪನಿಯಿಂದ 5 ಲಕ್ಷ ರೂ. ಸಾಲ ನೀಡುವ ಸಂಬಂಧ ಒಂದು ಸಂದೇಶ ಬಂದಿತ್ತು. ಅದರಲ್ಲಿ ಒಂದು ಲಿಂಕ್ ಕೂಡ ಬಂದಿದ್ದು, ಅದನ್ನು ಕ್ಲಿಕ್ ಮಾಡಿದಾಗ 50 ಪೈಸೆ ಬಡ್ಡಿ ದರದಡಿ 5 ಲಕ್ಷ ರೂ. ಸಾಲ ನೀಡುವುದಾಗಿ ಹಾಗೂ ಜಿಎಸ್‌ಟಿ ಮತ್ತು ಕಮಿಷನ್ ಹಣ ನೀಡಿದರೆ ಸಾಲ ಮಂಜೂರು ಮಾಡುವುದಾಗಿ ವಿವರ ನೀಡಲಾಯಿತು.

ಈ ಮೋಸ ಜಾಲದ ಅರಿವಿಲ್ಲದೇ ನಾಗಮಲ್ಲಪ್ಪ ಅವರು ಏ. 14ರಿಂದ 17ರವರೆಗೆ ತಮ್ಮ ಬ್ಯಾಂಕ್ ಖಾತೆಯಿಂದ ಆರೋಪಿಯ ಬ್ಯಾಂಕ್ ಖಾತೆಗೆ ವಿವಿಧ ಹಂತಗಳಲ್ಲಿ 1.75 ಲಕ್ಷ ರೂ.ಗಳನ್ನು ಪಾವತಿ ಮಾಡಿದ್ದಾರೆ. ಆದರೆ, ಅವರಿಗೆ ಯಾವುದೇ ಸಾಲ ಮಂಜೂರಾಗಲಿಲ್ಲ. ಕೂಡಲೇ ತಾನು ಮೋಸ ಹೋಗಿರುವುದಾಗಿ ಅರಿತ ನಾಗಮಲ್ಲಪ್ಪ ಸೈಬರ್ ಠಾಣೆಗೆ ಏ. 21 ರಂದು ದೂರು ನೀಡಿದ್ದರು ಎಂದು ಎಎಸ್‌ಪಿ, ಸುಂದರರಾಜ್ ವಿವರಿಸಿದರು.

ದೂರಿನನ್ವಯ ಕಾರ್ಯ ಪ್ರವೃತ್ತರಾದ ಪೊಲೀಸರು, ಹಣವನ್ನು ವರ್ಗಾವಣೆ ಮಾಡಿದ್ದ ಬ್ಯಾಂಕಿನ ಖಾತೆಯ ಐಎಫ್‌ಎಸ್‌ಸಿ ಕೋಡ್ ಪರಿಶೀಲಿಸಿದಾಗ ಅದು ಉತ್ತರ ಪ್ರದೇಶದ ಲಕ್ನೋದ ಹಜ್ರತ್‌ಗಂಜ್‌ನ ಖಾಸಗಿ ಬ್ಯಾಂಕ್ ಶಾಖೆಯಾಗಿತ್ತು. ಆ ಶಾಖೆಯನ್ನು ಪೊಲೀಸರು ಇಮೇಲ್ ಮೂಲಕ ಸಂಪರ್ಕಿಸಿ ಸದರಿ ಖಾತೆಯಲ್ಲಿರುವ ಹಣವನ್ನು ಡ್ರಾ ಮಾಡದಂತೆ ಸ್ಥಗಿತಗೊಳಿಸಬೇಕು ಎಂದು ತಿಳಿಸಿದ್ದರು.

ಪೊಲೀಸರ ಸೂಚನೆಯಂತೆ ಬ್ಯಾಂಕ್ ಶಾಖಾ ವ್ಯವಸ್ಥಾಪಕರು ಈ ಅಕೌಂಟ್ ಅನ್ನು ಸ್ಥಗಿತಗೊಳಿಸಿ ಖಾತೆಯಲ್ಲಿ 2,39,242 ರೂ. ಇದೆ ಎಂದು ಉತ್ತರಿಸಿದ್ದರು. ನಂತರ ಪೊಲೀಸರು ನ್ಯಾಯಾಲಯದ ಆದೇಶ ಪಡೆದು ಹಣವನ್ನು ಬಿಡುಗಡೆ ಮಾಡಿಕೊಳ್ಳುವಂತೆ ನಾಗಮಲ್ಲಪ್ಪಗೆ ಸೂಚಿಸಿದ್ದರು. ಬಳಿಕ ನ್ಯಾಯಾಲಯದ ಆದೇಶವನ್ನು ಪೊಲೀಸ್ ಠಾಣೆಗೆ ಹಾಗೂ ಬ್ಯಾಂಕ್ ಶಾಖೆಗೆ ಕಳುಹಿಸಿ 1.75 ಲಕ್ಷ ರೂ.ಗಳನ್ನು ವಾಪಸ್ ಪಡೆಯ ಲಾಯಿತು ಎಂದು ತಿಳಿಸಿದರು.

ಕಾರ್ಯಾಚರಣೆಯಲ್ಲಿ ತನಿಖಾಧಿಕಾರಿ ಪಿಐ ಮಹದೇವಶೆಟ್ಟಿ ಅವರ ನೇತೃತ್ವದಲ್ಲಿ ಎಸ್‌ಐ ಎಂ.ಮಾದೇಶ, ಎಎಸ್‌ಐ ಮಹ ದೇವಪ್ಪ, ಪೇದೆಗಳಾದ ಶ್ರೀನಿವಾಸ ಮೂರ್ತಿ, ಶಶಿಧರಮೂರ್ತಿ, ಅಬ್ದುಲ್ ಖಾದರ್ ಪಾಲ್ಗೊಂಡಿದ್ದರು. ಇವರ ಕಾರ್ಯಕ್ಕೆ ಎಸ್‌ಪಿ ಟಿ.ಪಿ.ಶಿವಕುಮಾರ್ ಪ್ರಶಂಸೆ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ ಇದ್ದರು.

ಗುಂಡ್ಲುಪೇಟೆ: ವಿಜೃಂಭಣೆಯ ಪಟ್ಟಲದಮ್ಮ ಜಾತ್ರಾ ಮಹೋತ್ಸವ



ಗುಂಡ್ಲುಪೇಟೆ, ಮೇ 14(ಸೋಮ್.ಜಿ)– ಪಟ್ಟಣದ ಅಧಿದೇವತೆ ಪಟ್ಟಲದಮ್ಮ ಜಾತ್ರಾ ಮಹೋತ್ಸವವು ವಿಜೃಂಭಣೆಯಿಂದ ಶನಿವಾರ ನೆರವೇರಿತು.

ಜಾತ್ರೆಯ ಅಂಗವಾಗಿ ಪಟ್ಟಣದ ಹೊರವಲಯದಲ್ಲಿರುವ ದೇವಸ್ಥಾನದಲ್ಲಿ ಕಳೆದ ಎರಡು ದಿನಗಳಿಂದ ಮಡೆ ಸೇವೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಗಳನ್ನು ನಡೆಸಲಾಯಿತು. ಶನಿವಾರ ಬೆಳಗ್ಗೆ ದೇವರು ತರುವುದು ಹಾಗೂ ಭಕ್ತರಿಂದ ಹರಕೆ ತೀರಿಸುವ ಕಾರ್ಯಕ್ರಮ ನಡೆಯಿತು.

ಅಲಂಕೃತ ಸಾರೋಟಿನಲ್ಲಿ ಅಮ್ಮನವರ ಉತ್ಸವ ಮೂರ್ತಿ ಇರಿಸಿ ಅದ್ಧೂರಿಯಾಗಿ ಮೆರವಣಿಗೆ ಮಾಡಲಾಯಿತು. ಈ ವೇಳೆ ಪೂರ್ಣ ಕುಂಭ ಹೊತ್ತ ಹೆಣ್ಣುಮಕ್ಕಳು, ಬ್ರಹ್ಮ, ವಿಷ್ಣು ಮಹೇಶ್ವರ, ರಾಮ, ಲಕ್ಷ್ಮಣ, ಹನುಮಂತ ವೇಷಧಾರಿಗಳು, ಗೊರವರ ಕುಣಿತ, ಕಂಸಾಳೆ, ಹುಲಿವೇಷ, ರಾಕ್ಷಸ ವೇಷ ಹಾಗೂ ಪಾಳೇಗಾರ ವೇಷಧಾರಿಗಳು, ಗಾರುಡಿ ಗೊಂಬೆಗಳು, ಕೀಲು ಕುದುರೆ ಸವಾರರು ಪಾಲ್ಗೊಂಡಿದ್ದರು. ಜೊತೆಗೆ ಮಂಗಳವಾದ್ಯ, ಡೋಲು, ಸತ್ತಿಗೆ, ಸುರಾಪಾನಿ, ಬಿರುದು, ಬಾವಲಿಗಳು ಮೆರವಣಿಗೆಗೆ ಮೆರುಗು ನೀಡಿತು. ಅಂಗಡಿ ಬೀದಿ ಹಾಗೂ ವಿವಿಧ ಬಡಾವಣೆಗಳ ಮೂಲಕ ಸಾಗಿದ ಶಕ್ತಿ ದೇವತೆ ಪಟ್ಟಲದಮ್ಮನವರ ಉತ್ಸವ ಮೂರ್ತಿಗೆ ಭಕ್ತರು ಪೂಜೆ ಸಲ್ಲಿಸಿದರು. ಶಾಸಕ ಸಿ.ಎಸ್.ನಿರಂಜನಕುಮಾರ್ ಸೇರಿದಂತೆ ಹಲವು ಮುಖಂಡರು ದೇವಿಯ ದರ್ಶನ ಪಡೆದರು.

ಬುದ್ಧ ಪೂರ್ಣಿಮಾ

ನಾಳೆ ಮಾಂಸ ಮಾರಾಟ ನಿಷೇಧ

ಚಾಮರಾಜನಗರ, ಮೇ 14– ಬುದ್ಧ ಪೂರ್ಣಿಮಾ ಹಬ್ಬದ ಹಿನ್ನೆಲೆಯಲ್ಲಿ ಚಾಮರಾಜನಗರ ನಗರಸಭಾ ವ್ಯಾಪ್ತಿಯಲ್ಲಿ ಮೇ 16ರಂದು ಎಲ್ಲಾ ಮಾಂಸ ಮಾರಾಟ ಹಾಗೂ ಪ್ರಾಣಿ ವಧೆಯನ್ನು ನಿಷೇಧಿಸಲಾಗಿದೆ. ಹಬ್ಬದ ದಿನದಂದು ಮಾಂಸ ಮಾರಾಟ, ಪ್ರಾಣಿ ವಧೆ ಮಾಡುವುದು ಕಂಡು ಬಂದಲ್ಲಿ ಕಾನೂನು ಕ್ರಮ ಜರುಗಿಸಲಾಗುವುದು ಎಂದು ನಗರಸಭಾ ಪ್ರಕಟಣೆ ತಿಳಿಸಿದೆ.

ಮನೆ ಬೀಗ ಮುರಿದು ಚಿನ್ನಾಭರಣ ಕಳವು

ಕೊಳ್ಳೇಗಾಲ, ಮೇ 14(ನಾಗೇಂದ್ರಸ್ವಾಮಿ)– ಮನೆಯಲ್ಲಿ ಯಾರೂ ಇಲ್ಲದ ವೇಳೆ ಬೀಗ ಮುರಿದು ಒಳನುಗ್ಗಿದ ಕಳ್ಳರು ಸುಮಾರು 1.40 ಲಕ್ಷ ರೂ. ಮೌಲ್ಯದ 35 ಗ್ರಾಂ. ಚಿನ್ನಾಭರಣವನ್ನು ದೋಚಿ ಪರಾರಿಯಾಗಿರುವ ಘಟನೆ ಕೊಳ್ಳೇಗಾಲ ಪಟ್ಟಣದಲ್ಲಿ ನಡೆದಿದೆ.

ಪಟ್ಟಣದ ಸಾಯಿಬಾಬಾ ದೇವಾಲಯ ಸಮೀಪದ ರಾಮಸ್ವಾಮಿ ಬಡಾವಣೆಯ ಮಹಮ್ಮದ್ ಇಸ್ಮಾಯಿಲ್ ಅವರ ಮನೆಯಲ್ಲಿ ಕಳ್ಳತನವಾಗಿರುವ ಬಗ್ಗೆ ಕೊಳ್ಳೇಗಾಲ ಪಟ್ಟಣ ಠಾಣೆಯಲ್ಲಿ ದೂರು ದಾಖಲಾಗಿದೆ.

ಘಟನೆಯ ವಿವರ: ಮಹಮ್ಮದ್ ಇಸ್ಮಾಯಿಲ್ ಅವರು ಕುಟುಂಬ ಸಮೇತ ಮೇ 11ರಂದು ಚಿಕ್ಕಮಗಳೂರಿಗೆ ತೆರಳಿದ್ದರು. ಶನಿವಾರ ಬೆಳಗ್ಗೆ ಕೊಳ್ಳೇಗಾಲಕ್ಕೆ ಮರಳಿ ಬಂದಾಗ ಮನೆ ಕಳವಾಗಿರುವುದು ಗಮನಕ್ಕೆ ಬಂದಿದೆ.

ಮನೆಯ ಬಾಗಿಲಿನ ಬೀಗ ಮುರಿದಿದ್ದು, ಮನೆಯ ಒಳಗಡೆ ಹೋಗಿ ನೋಡಿದಾಗ ಸಾಮಾನುಗಳು ಚೆಲ್ಲಾಪಿಲ್ಲಿಯಾಗಿರುವುದು ಕಂಡುಬಂದಿದೆ. ರೂಮಿಗೆ ಹೋಗಿ ನೋಡಿದಾಗ ಒಳಗಡೆ ಇರಿಸಿದ್ದ ಬೀರುವಿನ ಬಾಗಿಲು ತೆರೆದಿದ್ದು, ಅದರಲ್ಲಿದ್ದ 5 ಗ್ರಾಂ ತೂಕದ ಗುಂಡು, ಎರಡು ಉಂಗುರ ಹಾಗೂ 24 ಗ್ರಾಂ ತೂಕದ ನೆಕ್ಲೆಸ್ ಸೇರಿದಂತೆ ಒಟ್ಟು 35 ಗ್ರಾಂ ಚಿನ್ನಾಭರಣ ಕಳವಾಗಿರುವುದು ಗಮನಕ್ಕೆ ಬಂದಿದೆ.

ಕೂಡಲೇ ಮನೆ ಮಾಲೀಕ ಮಹಮ್ಮದ್ ಇಸ್ಮಾಯಿಲ್ ಕೊಳ್ಳೇಗಾಲ ಪಟ್ಟಣ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಪಟ್ಟಣ ಪೊಲೀಸ್ ಠಾಣೆಯ ಕ್ರೈಂ ಎಸ್‌ಐ ಉಮಾವತಿ, ಮುಖ್ಯಪೇದೆ ರಘು, ಪೇದೆಗಳಾದ ಪ್ರಕಾಶ್, ಬಿಳಿಗೌಡ, ಶಿವಕುಮಾರ್ ಭೇಟಿ ನೀಡಿ ಪರಿಶೀಲಿಸಿದರು. ಬಳಿಕ ಚಾಮರಾಜನಗರದಿಂದ ಬೆರಳಚ್ಚು ಹಾಗೂ ಶ್ವಾನದಳ ತಂಡವನ್ನು ಕರೆಯಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಬದನಗುಪ್ಪೆ ಪಿಎಸಿಸಿ: ಅಧ್ಯಕ್ಷ ಶಿವಪಾದಪ್ಪ, ಉಪಾಧ್ಯಕ್ಷ ಚಿನ್ನಸ್ವಾಮಿ ಅವಿರೋಧ ಆಯ್ಕೆ



ಬದನಗುಪ್ಪೆ, ಮೇ 14(ಮಲ್ಲಣ್ಣ)– ಚಾಮರಾಜನಗರ ತಾಲೂಕಿನ ಬದನಗುಪ್ಪೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಶಿವಪಾದಪ್ಪ, ಉಪಾಧ್ಯಕ್ಷರಾಗಿ ಚಿನ್ನಸ್ವಾಮಿ ಅವಿರೋಧವಾಗಿ ಆಯ್ಕೆಯಾದರು.

ಸಂಘದ ಕಚೇರಿ ಸಭಾಂಗಣದಲ್ಲಿ ನಡೆದ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲಿ ಇಬ್ಬರೇ ನಾಮಪತ್ರ ಸಲ್ಲಿಸಿದ್ದರು. ಹಾಗಾಗಿ, ಚುನಾವಣಾಧಿಕಾರಿಯಾಗಿದ್ದ ಸಹಕಾರ ಇಲಾಖೆ ಫಣಿರಾಜ ಪಂಡಿತ್ ಅವರು ಅವಿರೋಧ ಆಯ್ಕೆ ಘೋಷಿಸಿದರು.

ಈ ವೇಳೆ ಸಹಕಾರ ಸಂಘದ ನಿರ್ದೇಶಕರಾಗಿ ಜಿ.ನಂಜುಂಡಸ್ವಾಮಿ, ಶಿವಕುಮಾರ್, ಗುರುಪಾದಸ್ವಾಮಿ, ಬಿ.ಆರ್.ಶಿವಕುಮಾರ್, ಪ್ರಕಾಶ್, ಕೆ.ಪಿ.ದೇವರಾಜು, ಸುಶೀಲಾ, ಚಿಕ್ಕದಾಸನಾಯ್ಕ, ಗುರುಸಿದ್ದಯ್ಯ ಹಾಜರಿದ್ದರು.

ಅವಿರೋಧವಾಗಿ ಆಯ್ಕೆಯಾದ ಅಧ್ಯಕ್ಷ ಶಿವಪಾದಪ್ಪ ಹಾಗೂ ಉಪಾಧ್ಯಕ್ಷ ಚಿನ್ನಸ್ವಾಮಿ ಅವರನ್ನು ಗ್ರಾಮದ ಮುಖಂಡರಾದ ಬಿ.ಪಿ.ನಾಗರಾಜಮೂರ್ತಿ, ಜಿ.ಬಸವಣ್ಣ, ಎಂ.ಕುಮಾರ್, ಮುಕುಂದಮೂರ್ತಿ, ಶಿವರಾಮು, ಗೋಪಾಲನಾಯಕ, ಆರ್.ಮಹೇಶ್, ರಾಜಶೇಖರ್, ನಿಂಗಯ್ಯ, ಸಂತೋಷ್ ಹಾಗೂ ಗ್ರಾಮಸ್ಥರು ಅಭಿನಂದಿಸಿದರು.

ಅಪಘಾತದಲ್ಲಿ ಗಾಯಗೊಂಡಿದ್ದ ಯೋಧ ಡಾಲು ಸಾವು

ಸ್ವಗ್ರಾಮ ಯಡವಾರೆಯಲ್ಲಿ ಸಕಲ ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ


ಸೋಮವಾರಪೇಟೆ, ಮೇ 14– ಸೋಮವಾರಪೇಟೆ ಪಟ್ಟಣದ ಸಮೀಪದ ನಗರೂರು ಗ್ರಾಮದ ಹೈವೇಯಲ್ಲಿ ಗುರುವಾರ ಸಂಭವಿಸಿದ್ದ ಬೈಕ್ ಮತ್ತು ಸ್ಕೂಟರ್ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಸಿಆರ್‌ಪಿಎಫ್ ಯೋಧ ಡಾಲು ಶುಕ್ರವಾರ ಸಂಜೆ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದರು. ಅವರ ಅಂತ್ಯಕ್ರಿಯೆ ಸ್ವಗ್ರಾಮ ಯಡವಾರೆಯಲ್ಲಿ ಸಕಲ ಸರ್ಕಾರಿ ಗೌರವದೊಂದಿಗೆ ಶನಿವಾರ ಸಂಜೆ 6 ಗಂಟೆಗೆ ನೆರವೇರಿತು.

ಶನಿವಾರ ಮಧ್ಯಾಹ್ನ ಗ್ರಾಮಕ್ಕೆ ಡಾಲು ಅವರ ಪಾರ್ಥಿವ ಶರೀರವನ್ನು ತರಲಾಯಿತು. ತಾಯಿ, ಮಡದಿ, ಮಕ್ಕಳು ಹಾಗು ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತು. ತಾಯಿ ನಾಗವೇಣಿ, ಪತ್ನಿ ರಾಜೇಶ್ವರಿ, ಏಳು ಮತ್ತು ಎರಡೂವರೆ ವರ್ಷದ ಇಬ್ಬರು ಪುತ್ರಿಯರು ಪಾರ್ಥಿವ ಶರೀರಕ್ಕೆ ಪೂಜೆ ಸಲ್ಲಿಸಿದರು.

ಯೋಧನ ಮನೆಯಲ್ಲಿ ನೂರಾರು ಮಂದಿ ಸಾರ್ವಜನಿಕರು ಅಂತಿಮ ನಮನ ಸಲ್ಲಿಸಿದರು. ಜಿಲ್ಲಾ ನಿವೃತ್ತ ಅರೆಸೇನಾ ಪಡೆಯ ಯೋಧ ಒಕ್ಕೂಟದ ಸದಸ್ಯರು ಪಾರ್ಥಿವ ಶರೀರಕ್ಕೆ ಪುಷ್ಪನಮನ ಸಲ್ಲಿಸಿದರು. ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಎಸ್.ಎಂ.ಚಂಗಪ್ಪ, ಪ್ರಮುಖರಾದ ಮಂಥರ್‌ಗೌಡ, ಲಿಂಗೇರಿ ರಾಜೇಶ್, ಬಾರನ ಪ್ರಮೋದ್ ಮತ್ತಿತರರು ಅಂತಿಮ ನಮನ ಸಲ್ಲಿಸಿದರು.



ಸಿಆರ್‌ಪಿಎಫ್ ಯೋಧ ಡಾಲು ಕುಟುಂಬಸ್ಥರಿಗೆ ಸಿಆರ್‌ಪಿಎಫ್ ಎಎಸ್‌ಐ ಎ.ಪಿ.ಸುಬ್ರಮಣಿ ಸಹಾಯಧನ ನೀಡಿದರು.



ಯೋಧ ಡಾಲಿ

ಜಿಲ್ಲಾ ಸಶಸ್ತ್ರ ಪೊಲೀಸ್ ಪಡೆ ಹಾಗೂ ಸೋಮವಾರಪೇಟೆ ಪೊಲೀಸರಿಂದ ಗಾಳಿಯಲ್ಲಿ ಗುಂಡು ಹಾರಿಸುವ ಮೂಲಕ ಅಂತಿಮ ಸರ್ಕಾರಿ ಗೌರವ ಸಮರ್ಪಿಸಲಾಗಿದೆ. ಬೆಂಗಳೂರು ಯಲಹಂಕ ಸಿಆರ್‌ಪಿಎಫ್ ಗ್ರೂಪ್ ಸೆಂಟರ್‌ನ ಎಎಸ್‌ಐ ಎ.ಪಿ.ಸುಬ್ರಮಣಿ ಅವರು ತುರ್ತು ಕಾರ್ಯಕ್ಕಾಗಿ 50 ಸಾವಿರ ರೂ.ಗಳನ್ನು ಡಾಲು ಕುಟುಂಬಸ್ಥರಿಗೆ ನೀಡಿ, ಗ್ರೂಪ್‌ನ ವತಿಯಿಂದ ಅಂತಿಮ ನಮನ ಸಲ್ಲಿಸಿದರು. 13 ವರ್ಷದಿಂದ ಸಿಆರ್‌ಪಿಎಫ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದ ಡಾಲಿ ಅವರು ಹಾಲಿ ಜಮ್ಮು–ಕಾಶ್ಮೀರದಲ್ಲಿ ಸೇವೆ ಸಲ್ಲಿಸುತ್ತಿದ್ದರು. 20 ದಿನಗಳ ಮಟ್ಟಿಗೆ ರಜೆಯಲ್ಲಿ ಮನೆಗೆ ಅವರು ಬಂದಿದ್ದಾಗ ಅಪಘಾತ ಸಂಭವಿಸಿ ಮೃತಪಟ್ಟಿದ್ದಾರೆ.

ಮಡಿಕೇರಿಯಲ್ಲಿ ಬೆಂಕಿ ಅನಾಹುತ: ಮನೆ, ಕ್ಯಾಂಟೀನ್‌ಗೆ ಹಾನಿ



ಮಡಿಕೇರಿ,ಮೇ14– ಬೆಂಕಿ ಅನಾಹುತದಿಂದ ಕ್ಯಾಂಟೀನ್ ಮತ್ತು ಮನೆಯೊಂದು ಸಂಪೂರ್ಣ ಸುಟ್ಟು ಕರಕಲಾದ ಘಟನೆ ಮಡಿಕೇರಿ ಹೊರವಲಯದಲ್ಲಿ ನಡೆದಿದೆ. ನಗರದ ಹೊರವಲಯದ ಮೆಡಿಕಲ್ ಕಾಲೇಜು ಸಮೀಪದ ನಿವಾಸಿ ಸುನೀಲ್ ಡಿಸೋಜಾ ಎಂಬವರಿಗೆ ಸೇರಿದ ಮನೆ ಹಾಗೂ ಕ್ಯಾಂಟೀನ್‌ನಲ್ಲಿ ಈ ಅನಾಹುತ ಘಟಿಸಿದೆ. ಶನಿವಾರ ಮಧ್ಯಾಹ್ನ 2 ಗಂಟೆ ಸುಮಾರಿನಲ್ಲಿ ಬೆಂಕಿ ಹೊತ್ತಿ ಉರಿದಿದ್ದು, ಮನೆ ಹಾಗೂ ಕ್ಯಾಂಟೀನ್‌ನಲ್ಲಿ ಯಾರೂ ಇಲ್ಲದ ಸಂದರ್ಭ ಬೆಂಕಿ ತಗುಲಿದ ಪರಿಣಾಮ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಈ ಅನಾಹುತ ಸಂಭವಿಸಿರಬಹುದು ಎಂದು ಶಂಕಿಸಲಾಗಿದೆ. ಘಟನಾ ಸ್ಥಳಕ್ಕೆ ಅಗ್ನಿ ಶಾಮಕ ದಳ ಸಿಬ್ಬಂದಿಗಳು ಆಗಮಿಸಿ ಬೆಂಕಿಯನ್ನು ನಂದಿಸಿದರು. ಘಟನೆಯಲ್ಲಿ ಕ್ಯಾಂಟೀನ್ ಮತ್ತು ಮನೆಯಲ್ಲಿದ್ದ ವಸ್ತುಗಳು ಸಂಪೂರ್ಣ ಸುಟ್ಟು ಕರಕಲಾಗಿದ್ದು, ಲಕ್ಷಾಂತರ ರೂ. ನಷ್ಟ ಸಂಭವಿಸಿದೆ.

ರಾಜ್ಯ ಮಟ್ಟದ ನೃತ್ಯ ಸ್ಪರ್ಧೆ : ಮಡಿಕೇರಿಯ ನಾಟ್ಯಕಲಾ ನೃತ್ಯ ಸಂಸ್ಥೆ ಚಾಂಪಿಯನ್

ಮಡಿಕೇರಿ ಮೇ 14– ಕುಶಾಲನಗರದ ಟೈಂ ಬ್ರೇಕರ್ಸ್ ಡ್ಯಾನ್ಸ್ ಸ್ಟುಡಿಯೋ ವತಿಯಿಂದ ಕುಶಾಲನಗರದ ರೈತ ಸಹಕಾರ ಭವನದಲ್ಲಿ ನಡೆದ ರಾಜ್ಯ ಮಟ್ಟದ ನೃತ್ಯ ಸ್ಪರ್ಧೆಯಲ್ಲಿ ಮಡಿಕೇರಿಯ ನಾಟ್ಯಕಲಾ ನೃತ್ಯ ಸಂಸ್ಥೆಯ ವಿದ್ಯಾರ್ಥಿಗಳು ಮೂರು ವಿಭಾಗದಲ್ಲಿ ಭಾಗವಹಿಸಿ ಪ್ರಥಮ ಬಹುಮಾನ ಗೆದ್ದಿದ್ದಾರೆ.

ಸಬ್ ಜೂನಿಯರ್ ವಿಭಾಗದಲ್ಲಿ ಮೊನಾಲಿ, ದಿಯಾ ರೈ, ಸಾನ್ವಿಕಾ, ಧೃತಿ ಗೌಡ, ದಿಶಾ, ಆದ್ಯ, ಅಲಿಶಾ, ಗ್ರಂಥ, ಹಾರ್ದಿಕ್, ಪ್ರೀತಮ್, ಪ್ರೇಕ್ಷಿತ್, ಅಭಿರಾಮ್ ಆರ್ಯ, ಚಾರ್ವಿ ರೈ ಹಾಗೂ ಸಿಂಚನಾ ಸ್ಪರ್ಧಿಸಿ ಪ್ರಥಮ ಸ್ಥಾನ ಪಡೆದರು.

ಜೂನಿಯರ್ ವಿಭಾಗದಲ್ಲಿ ಮನೋಜ್ಞ, ಮಾನ್ವಿ, ಕಿಶಿ ಕಾವೇರಮ್ಮ, ಎಂ.ಕೆ.ಪ್ರೇಕ್ಷ, ಆರಾಧ್ಯ, ಇಂಚರ, ಸಿಂಚನಾ, ಬಿ.ಆರ್. ಪ್ರೇಕ್ಷ, ಶ್ರೇಯಾ, ಮನಿಷಾ, ಸಮೀಕ್ಷ, ಅರ್ಸಲಾನ್, ಅಭಿನವ್ ಕ್ರಿಶ್, ಕುನಾಲ್‌ರಾಜ್, ವೆನಿಶ, ಲಕ್ಷ್ಯ, ತೇಜಸ್, ಜಿಯಾನ್, ಉನ್ನತಿ, ಡೀನಾ, ಚಹನಾ, ಗಗನ್, ಜನನಿ, ಚರ್ವಿತ, ಬಿಂಬಿತ್, ಚಿನ್ಮಯಿ ಪ್ರಥಮ ಬಹುಮಾನ ಗೆದ್ದುಕೊಂಡರು.

ಸೀನಿಯರ್ ವಿಭಾಗದಲ್ಲಿ ಯಾನಶೆಟ್ಟಿ, ಪ್ರಾಚಿ ಮಾದಪ್ಪ ಆರ್ಚ ಕೃಷ್ಣ, ಗ್ರೀಷ್ಮ, ಪ್ರಜ್ಞ, ಮಾನ್ಯ ಆರ್ಯ, ಐಶ್ವರ್ಯ, ಜಾನ್ವಿ ಬೋಜಮ್ಮ, ಅದಿಥಿ, ತಶ್ಮಿತ ಪೂಜಾರಿ, ಆರ್ಯನ್, ಕೀರ್ತನ್, ತೇಜಸ್, ಪ್ರವೀಣ, ಶಿವಕುಮಾರ್, ಸೊನಾಲ್ ಪ್ರಥಮ ಸ್ಥಾನ ಪಡೆದು ಚಾಂಪಿಯನ್ ಪಟ್ಟ ಮುಡಿಗೇರಿಸಿಕೊಂಡರು. ನಾಟ್ಯಕಲಾ ನೃತ್ಯ ಸಂಸ್ಥೆಯ ನೃತ್ಯ ಸಂಯೋಜಕ ಅಭಿಷೇಕ್ ವಿದ್ಯಾರ್ಥಿಗಳಿಗೆ ತರಬೇತಿ ನೀಡಿದ್ದಾರೆ.

ಸಭಾ ಕಾರ್ಯಕ್ರಮದಲ್ಲಿ ಹಿರಿಯ ಮುಖಂಡ ಜಿ.ಎಲ್.ನಾಗರಾಜ್, ಕುಶಾಲನಗರ ಬಿಜೆಪಿ ನಗರಾಧ್ಯಕ್ಷ ವಿ.ಎನ್.ಉಮಾ ಶಂಕರ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರೂ ಆದ ಕಾಂಗ್ರೆಸ್ ಪ್ರಮುಖ ವಿ.ಪಿ.ಶಶಿ ಧರ್, ಜಿಲ್ಲಾ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷೆ ಸವಿತಾ ರೈ, ಸಾಹಿತಿ ಹಂಚೆಟ್ಟಿರ ಫ್ಯಾನ್ಸಿ ಮುತ್ತಣ್ಣ, ಪ್ರಮುಖರಾದ ವಿನೋದ್ ಕರ್ಕೆರಾ ಪಾಲ್ಗೊಂಡು ವಿದ್ಯಾರ್ಥಿಗಳಿಗೆ ಪ್ರೋತ್ಸಾಹದ ನುಡಿಗಳನ್ನಾಡಿದರು.

ಕಾರು–ಬೈಕ್ ಡಿಕ್ಕಿ: ಸವಾರನಿಗೆ ಗಾಯ

ಸೋಮವಾರಪೇಟೆ, ಮೇ 14– ಕಾರು ಮತ್ತು ಬೈಕ್ ನಡುವೆ ಡಿಕ್ಕಿ ಸಂಭವಿಸಿ ಬೈಕ್ ಸವಾರ ಗಾಯಗೊಂಡಿರುವ ಘಟನೆ ಪಟ್ಟಣ ಸಮೀಪದ ನಗರೂರು ಗ್ರಾಮದಲ್ಲಿ ನಡೆದಿದೆ.

ಬಜೆಗುಂಡಿ ಗ್ರಾಮದ ಯಶ್ವಂತ್ ಅವರ ಬೈಕ್ ಹಾಗೂ ನಗರೂರು ಎಸ್ಟೇಟ್‌ನ ವ್ಯವಸ್ಥಾಪಕ ಮಲ್ಲಿಕಾರ್ಜುನ ಅವರ ಕಾರಿನ ನಡುವೆ ಅಪಘಾತ ಸಂಭವಿಸಿದ್ದು, ಬೈಕ್ ಸವಾರ ಯಶ್ವಂತ್ ಗಾಯಗೊಂಡಿದ್ದಾರೆ. ಗಾಯಾಳುವನ್ನು ಸೋಮವಾರಪೇಟೆ ಸರಕಾರಿ ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ಕೊಡಿಸಿದ ನಂತರ ಹೆಚ್ಚಿನ ಚಿಕಿತ್ಸೆಗೆ ಮೈಸೂರಿಗೆ ಸಾಗಿಸಲಾಗಿದೆ.

ಕೇರಳದಲ್ಲಿ ಟೊಮೆಟೋ ಜ್ವರ: ಕೊಡಗಿನಲ್ಲಿ ಮುನ್ನೆಚ್ಚರಿಕೆ

ಮಡಿಕೇರಿ,ಮೇ 14– ಕೇರಳದಲ್ಲಿ ಟೊಮೆಟೋ ಜ್ವರ ಕಂಡು ಬಂದ ಹಿನ್ನೆಲೆ ಕೊಡಗಿನಲ್ಲೂ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಜನರು ಆತಂಕ ಪಡುವ ಅಗತ್ಯವಿಲ್ಲವೆಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಆರ್.ವೆಂಕಟೇಶ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇರಳದಿಂದ ಕೊಡಗಿಗೆ ಬರುವ ವಾಹನಗಳನ್ನು ಗಡಿ ಭಾಗದಲ್ಲಿ ತಪಾಸಣೆಗೆ ಒಳಪಡಿಸಲಾಗುತ್ತಿದ್ದು, ವಿಶೇಷ ತಂಡಗಳನ್ನು ನಿಯೋಜನೆ ಮಾಡಲಾಗಿದೆ ಎಂದರು.

ಟೊಮೆಟೋ ಜ್ವರ 5 ವರ್ಷದ ಒಳಗಿನ ಮಕ್ಕಳಲ್ಲಿ ಕಂಡು ಬರುತ್ತಿದ್ದು, ಕೋವಿಡ್‌ಗೂ ಟೊಮೆಟೋ ಜ್ವರಕ್ಕೂ ಯಾವುದೇ ಸಂಬಂಧವಿಲ್ಲ ಎಂದರು. ಇದುವರೆಗೂ ಕೊಡಗಿನಲ್ಲಿ ಯಾವುದೇ ಪ್ರಕರಣಗಳು ಪತ್ತೆಯಾಗಿಲ್ಲ. ಕೊಡಗಿಗೆ ಸಾಕಷ್ಟು ಪ್ರವಾಸಿಗರು ಬರುತ್ತಿರುವ ಹಿನ್ನೆಲೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಜಿಲ್ಲೆಯ ಜನ ಎಚ್ಚರ ವಹಿಸಬೇಕು. ಈಗಾಗಲೇ ತಾಲೂಕು ವೈದ್ಯಾಧಿಕಾರಿಗಳಿಗೂ ಜವಾಬ್ದಾರಿಯನ್ನು ನೀಡಲಾಗಿದೆ. ಐದು ವರ್ಷದೊಳಗಿನ ಮಕ್ಕಳಲ್ಲಿ ಮೈ–ಕೈ ನೋವು, ಜ್ವರ, ಚರ್ಮದಲ್ಲಿ ಗುಳ್ಳೆಗಳು ಕಂಡು ಬಂದಲ್ಲಿ ಮಾಹಿತಿ ನೀಡುವಂತೆ ಡಾ.ಆರ್.ವೆಂಕಟೇಶ್ ತಿಳಿಸಿದರು.

ಪರಿಶಿಷ್ಟರಿಗೆ ಉಚಿತ 'ಬೆಳಕು'

ಬೆಂಗಳೂರು: ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಎಲ್ಲ ಬಿಪಿಎಲ್ ಕುಟುಂಬಗಳಿಗೆ ನೀಡುತ್ತಿದ್ದ ಉಚಿತ ವಿದ್ಯುತ್ ಪ್ರಮಾಣವನ್ನು 40 ಯುನಿಟ್‌ನಿಂದ 75 ಯುನಿಟ್‌ಗೆ ಹೆಚ್ಚಿಸುವ ಮಹತ್ವದ ನಿರ್ಧಾರವನ್ನು ರಾಜ್ಯ ಸರಕಾರ ತೆಗೆದುಕೊಂಡಿದೆ. ಇದರಿಂದ ಇಂಧನ ಇಲಾಖೆಗೆ ವಾರ್ಷಿಕ 979 ಕೋಟಿ ರೂ. ಹೆಚ್ಚುವರಿ ಹೊರೆ ಬೀಳಲಿದ್ದು, ಇದೇ ತಿಂಗಳಿಂದ ಯೋಜನೆಯ ಲಾಭ ಫಲಾನುಭವಿಗಳಿಗೆ ಲಭ್ಯವಾಗಲಿದೆ. ಇದಕ್ಕೆ ಸಂಬಂಧ ಪಟ್ಟ ಕಡತ ಈಗಾಗಲೇ ಹಣಕಾಸು ಇಲಾಖೆಗೆ ರವಾನೆಯಾಗಿದ್ದು, ಇನ್ನೆರಡು ದಿನದಲ್ಲಿ ಅಧಿಕೃತ ಆದೇಶ ಪ್ರಕಟವಾಗಲಿದೆ. ಆದರೆ ಇದಕ್ಕೆ ಸಂಬಂಧಪಟ್ಟ ಎಲ್ಲ ಪ್ರಕ್ರಿಯೆಗಳನ್ನು ಇಂಧನ ಇಲಾಖೆ ಪೂರ್ಣಗೊಳಿಸಿದ್ದು, ಭಾಗ್ಯಜ್ಯೋತಿ ಹಾಗೂ ಕುಟೀರ ಜ್ಯೋತಿ ಯೋಜನೆ ವ್ಯಾಪ್ತಿಯಲ್ಲಿ ಬರುವವರೂ ಸೇರಿದಂತೆ ಪರಿಶಿಷ್ಟ ಜಾತಿ ಹಾಗೂ ಪಂಗಡದ ಫಲಾನುಭವಿಗಳ ಮನೆಯಲ್ಲಿ ಇನ್ನು ಮುಂದೆ ವಿದ್ಯುತ್ ನಿರಂತರವಾಗಲಿದೆ. ಬಾಬು ಜಗಜೀವನ್ ರಾಮ್ ಅವರ 115ನೇ ಜಯಂತಿ ಸಮಾರಂಭದಲ್ಲಿ ಗ್ರಾಮೀಣ ಪ್ರದೇಶದ ಭಾಗ್ಯ ಜ್ಯೋತಿ ಹಾಗೂ ಕುಟೀರ ಜ್ಯೋತಿ ಯೋಜನೆ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟರಿಗೆ ಹಾಲಿ ಉಚಿತವಾಗಿ ನೀಡುತ್ತಿದ್ದ 40 ಯುನಿಟ್ ವಿದ್ಯುತ್ ಅನ್ನು 75 ಯುನಿಟ್ ಹೆಚ್ಚಿಸಲಾಗುವುದು ಎಂದು ಏ.5ರಂದು ಸಿಎಂ ಬೊಮ್ಮಾಯಿ ಘೋಷಿಸಿದ್ದರು.

ಮೂರನೇ ಪುಟದಿಂದ

ಬಿಜೆಪಿ ಗಾಳ

ಸಿದ್ದರಾಮಯ್ಯ ಮತ್ತು ಡಿಕೆಶಿ ನಡೆಸುತ್ತಿರುವ ಪೈಪೋಟಿಯಿಂದ ಬೇಸತ್ತಿರುವ ಕಾಂಗ್ರೆಸ್ ಮುಖಂಡರು ಬಿಜೆಪಿಯತ್ತ ಮುಖ ಮಾಡಿದ್ದಾರೆ. ನಾಗಮಂಗಲ ಕ್ಷೇತ್ರ ಪ್ರತಿನಿಧಿಸುವ ಮಾಜಿ ಸಚಿವ ಚಲುವರಾಯಸ್ವಾಮಿ, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಹಾಗೂ ಮಾಜಿ ಸಚಿವ ಜಿ.ಟಿ.ದೇವೇಗೌಡ ಅವರಲ್ಲದೆ, ಶ್ರೀರಂಗಪಟ್ಟಣದ ಮಾಜಿ ಶಾಸಕ ರಮೇಶ್ ಬಂಡಿಸಿದ್ದೇಗೌಡ ಸೇರಿದಂತೆ ಇತರರ ಬಿಜೆಪಿ ಸೆಳೆಯಲು ಮುಂದಾಗಿದೆ.

ಸಚಿವರಾದ ಡಾ.ಸಿ.ಎನ್.ಅಶ್ವತ್ಥ ನಾರಾಯಣ, ಡಾ.ಕೆ.ಸುಧಾಕರ್ ಹಾಗೂ ಮಾಜಿ ಸಚಿವ ಸಿ.ಪಿ.ಯೋಗೇಶ್ವರ್ ಅವರು ಈ ಆಪರೇಷನ್ ಕಮಲದ ರೂವಾರಿಗಳಾಗಿದ್ದಾರೆ.

ಈಗಾಗಲೇ ಮಾತುಕತೆ ನಡೆಸಿ ಪಕ್ಷ ಸೇರ್ಪಡೆಗೆ ವೇದಿಕೆ ಅಣಿಗೊಳಿಲಾಗುತ್ತಿದೆ. ಕಾಂಗ್ರೆಸ್, ಜೆಡಿಎಸ್ ತೊರೆದು ಬರುವವರಿಗೆ ಅವರವರ ಕ್ಷೇತ್ರದಲ್ಲಿ ವಿಧಾನಸಭೆ ಚುನಾವಣೆಗೆ ಟಿಕೆಟ್ ನೀಡುವ ಖಾತ್ರಿ ನೀಡಲಾಗಿದೆ. ಅಲ್ಲದೆ, ಚುನಾವಣಾ ಖರ್ಚು-ವೆಚ್ಚಕ್ಕೆ ಪಕ್ಷದಿಂದ ಸಹಾಯ ಮಾಡುವ ಭರವಸೆ ಬಿಜೆಪಿ ಪಕ್ಷಾಂತರಿಗಳಿಗೆ ನೀಡಿದೆ. ಜಿ.ಟಿ.ದೇವೇಗೌಡ ಹಾಗೂ ಅವರ ಪುತ್ರ ಹರೀಶ್‌ಗೌಡರಿಗೂ ಟಿಕೆಟ್ ನೀಡುವ ಭರವಸೆಯನ್ನು ಕಾಂಗ್ರೆಸ್ ನಾಯಕರು ನೀಡಿದ್ದರು. ಹುಣಸೂರು ಕ್ಷೇತ್ರದಲ್ಲಿ ಮುಂದಿನ ಚುನಾವಣೆಯಲ್ಲಿ ಪುತ್ರ ಹರೀಶ್‌ಗೌಡ ಅವರನ್ನು ಸ್ಪರ್ಧೆಗಿಳಿಸುತ್ತಿದ್ದಾರೆ. ಈಗಾಗಲೇ ಮಾಜಿ ಶಾಸಕರಾದ ವರ್ತೂರು ಪ್ರಕಾಶ್, ಮಾಲೂರು ಮಂಜುನಾಥ್‌ಗೌಡ ಹಾಗೂ ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ಬಿಜೆಪಿ ಸೇರ್ಪಡೆಯಾಗಿದ್ದಾರೆ.

ಸಂಸದೆ ಸುಮಲತಾ ಅವರನ್ನು ಸೇರ್ಪಡೆ ಮಾಡಿಕೊಳ್ಳುವ ಬಗ್ಗೆ ಬಿಜೆಪಿ ನಾಯಕರು ಮಾತುಕತೆ ನಡೆಸಿದ್ದಾರೆ. ಇನ್ನೂ ಹಲವು ಪ್ರಮುಖ ನಾಯಕರ ಜತೆ ಬಿಜೆಪಿ ನಾಯಕರು ಸಂಪರ್ಕದಲ್ಲಿದ್ದು, ಚುನಾವಣೆ ಸಮೀಪಿಸುತ್ತಿದ್ದಂತೆ ಸೇರ್ಪಡೆಯ ಸ್ಪಷ್ಟ ಚಿತ್ರಣ ಗೋಚರಿಸಲಿದೆ.

ಘಟಾನುಘಟಿಗಳು ಶೀಘ್ರ ಬಿಜೆಪಿಗೆ

ಯಾವುದೇ ಷರತ್ತಿಲ್ಲದೇ ಬಿಜೆಪಿ ಸೇರಲು ನಿರ್ಧರಿಸಿದ್ದಾರೆ ಎಂದರು. ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರು ಬಿಜೆಪಿ ಸೇರುವ ಬಗ್ಗೆ ಪಕ್ಷದ ಅಧ್ಯಕ್ಷರು ಅಂತಿಮ ತೀರ್ಮಾನ ತೆಗೆದುಕೊಳ್ಳಲಿದ್ದಾರೆ. ಬೇರೆ ಪಕ್ಷದ ನಾಯಕರನ್ನು ಸೇರಿಸಿಕೊಳ್ಳುವ ಬಗ್ಗೆ ಚರ್ಚೆಯಾಗುತ್ತಿದೆ. ಶೀಘ್ರ ಈ ಪ್ರಕ್ರಿಯೆಯ ಫಲಿತಾಂಶ ನಿಮಗೇ ತಿಳಿಯುತ್ತದೆ ಎಂದರು. ಕಾಂಗ್ರೆಸ್‌ನಲ್ಲಿ ಆಂತರಿಕ ಬಿಕ್ಕಟ್ಟು ಉಂಟಾಗಿದೆ. ಎಐಸಿಸಿ ದುರ್ಬಲವಾಗುತ್ತಿದ್ದತೆಯೇ ಕಾಂಗ್ರೆಸ್‌ನಲ್ಲಿ ಎಲ್ಲರೂ ನಾಯಕರಾಗಲು ಹವಣಿಸುತ್ತಿದ್ದಾರೆ. ಒಂದೆಡೆ ಸಿದ್ದರಾಮಯ್ಯ ಬಣ ಮತ್ತೊಂದೆಡೆ ಡಿ.ಕೆ.ಶಿವಕುಮಾರ್ ಗುಂಪು ತದ್ವಿರುದ್ಧ ದಿಕ್ಕಿನಲ್ಲಿ ಸಾಗಿರುವಾಗ ಪಕ್ಷ ಇಬ್ಭಾಗವಾಗುವುದು ಖಚಿತ. ಇಂತಹ ಪರಿಸ್ಥಿತಿಯಲ್ಲಿ ನಾಯಕರಿಗೆ ಉಳಿಗಾಲವಿಲ್ಲ ಎಂಬುದು ಸಾಬೀತಾಗಿರುವುದರಿಂದ ಅವರು ನಮ್ಮ ಪಕ್ಷಕ್ಕೆ ಸೇರಲು ಮುಂದಾಗಿದ್ದಾರೆ ಎಂದರು.

ಮತದಾರರ ತೀರ್ಮಾನದಂತೆ ನನ್ನ ನಿರ್ಧಾರ

ಸೇರುತ್ತಿದ್ದಾರೆ ಎಂಬ ಸಚಿವ ಎಸ್.ಟಿ.ಸೋಮಶೇಖರ್ ಹೇಳಿಕೆಗೆ ಪ್ರತಿಕ್ರಿಯಿಸಿದ ಜಿ.ಟಿ.ದೇವೇಗೌಡರು, ಪಕ್ಷ ಸೇರುವ ಬಗ್ಗೆ ಅವರು ಮಾತನಾಡುತ್ತಿರಬಹುದು. ಆದರೆ ನನ್ನ ಇಷ್ಟು ವರ್ಷಗಳ ರಾಜಕೀಯ ಜೀವನದ ಅನುಭವದಲ್ಲಿ ಎಲ್ಲಾ ಪಕ್ಷಗಳ ವರ್ತನೆ, ನಡವಳಿಕೆಗಳನ್ನು ನೋಡಿದ್ದೇನೆ ಎಂದರು. ನನ್ನಂತಹ ಹಿರಿಯ ರಾಜಕಾರಣಿಗೆ ಯಾವ ಪಕ್ಷದಲ್ಲಿ ಗೌರವ, ಪ್ರೀತಿ ಸಿಗುತ್ತದೋ ಅಲ್ಲಿರುವುದು ನನಗೂ ಗೌರವ. ನಾನೇನು ಮುಖ್ಯಮಂತ್ರಿ ಸ್ಥಾನ ಕೇಳುವವನಲ್ಲ, ಕೇಳಿಯೂ ಇಲ್ಲ. ಅನುಭವಕ್ಕೆ ತಕ್ಕ ಗೌರವವನ್ನು ಬಯಸುತ್ತೇನಷ್ಟೇ. ಚುನಾವಣೆಗೆ ಇನ್ನೂ ಒಂದು ವರ್ಷ ಸಮಯವಿದೆ. ಕ್ಷೇತ್ರದ ಜನರ ಮುಂದೆ ನಿಂತು ಕೇಳುತ್ತೇನೆ. ಅವರು ಯಾವ ಪಕ್ಷ ಹೇಳುತ್ತಾರೋ ಅಲ್ಲಿಗೆ ಸೇರುತ್ತೇನೆಯೇ ಹೊರತು, ಈಗಲೇ ಯಾವುದೇ ತೀರ್ಮಾನ ಕೈಗೊಳ್ಳುವುದಿಲ್ಲ ಎಂದು ಜಿಟಿಡಿ ನುಡಿದರು.

ನಾನು ಕ್ಷೇತ್ರ ತ್ಯಾಗಕ್ಕೂ ಸಿದ್ಧ

ಜಿ.ಟಿ.ದೇವೇಗೌಡರು ಬಿಜೆಪಿಗೆ ಬಂದು 8 ಸ್ಥಾನ ಗೆಲ್ಲಿಸುತ್ತಾರೆ ಎನ್ನುವುದಾದರೆ ನಾನು ಕ್ಷೇತ್ರ ತ್ಯಾಗ ಮಾಡಲು ಸಿದ್ಧ. ಪಕ್ಷ ನನಗೆ ಎಲ್ಲವನ್ನೂ ನೀಡಿದೆ. ಪಕ್ಷಕ್ಕೆ ನಿಷ್ಠಾವಂತನಾಗಿ ಈ ಭಾಗದಲ್ಲಿ 8 ಸ್ಥಾನದಲ್ಲಿ ಬಿಜೆಪಿ ಗೆಲ್ಲಿಸುವುದಾದರೆ ನಾನು ಯಾವುದೇ ತ್ಯಾಗವನ್ನಾದರೂ ಮಾಡುತ್ತೇನೆ ಎಂದ ಅವರು, ನಿಜಕ್ಕೂ ಬೇರೆ ಪಕ್ಷದ ನಾಯಕರು ಬಿಜೆಪಿ ಸೇರುತ್ತಾರಾ ಎಂಬ ಪ್ರಶ್ನೆಗೆ, ಆ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರನ್ನೇ ಕೇಳಿ ಎಂದರು.

20 ಹೆಸರು ಶಿಫಾರಸು

ಪ್ರಮುಖರಾಗಿದ್ದಾರೆ. ನಾಲ್ಕು ಸ್ಥಾನಗಳಲ್ಲಿ ಒಂದನ್ನು ಕಲೆ, ಸಾಹಿತ್ಯ, ಮತ್ತೊಂದನ್ನು ಪತ್ರಕರ್ತರಿಗೆ ನೀಡಲು ಬಿಜೆಪಿ ಮುಂದಾಗಿದೆ. ಹಾಲಿ ರಾಜ್ಯಸಭೆ ಸದಸ್ಯರಾಗಿರುವ ನಿರ್ಮಲಾ ಸೀತಾರಾಮನ್ ಮತ್ತೆ ಅಭ್ಯರ್ಥಿಯಾಗುವುದು ಖಚಿತ. ಮತ್ತೊಂದು ಸ್ಥಾನಕ್ಕೆ ಹಾಲಿ ಸದಸ್ಯ ಕೆ.ಸಿ.ರಾಮಮೂರ್ತಿ ಹಾಗೂ ನಿರ್ಮಲ್‌ಕುಮಾರ್ ಸುರಾನ ಹೆಸರು ಶಿಫಾರಸುಗೊಂಡಿದೆ. ಈ ಹಿಂದೆ ರಾಜ್ಯ ಕೋರ್ ಕಮಿಟಿ ಮಾಡಿದ ಶಿಫಾರಸುಗಳನ್ನು ಸಂಸದೀಯ ಮಂಡಳಿ ತಿರಸ್ಕರಿಸಿ, ಪಕ್ಷಕ್ಕೆ ದುಡಿದ ಕಾರ್ಯಕರ್ತರಿಗೆ ಅವಕಾಶ ಮಾಡಿಕೊಟ್ಟಿತ್ತು. ಈ ಬಾರಿಯು ಸಂಸದೀಯ ಮಂಡಳಿಯ ತೀರ್ಮಾನವೇ ಅಂತಿಮ. ಇಲ್ಲಿ ಹೆಸರು ಶಿಫಾರಸುಗೊಂಡರೂ ಅವರು ಅಭ್ಯರ್ಥಿಯಾಗುವುದು ಸುಲಭವಲ್ಲ.

ನಾಗನ ಕಾಲಿಗೆ ಗುಂಡು

ಬಳಿ ವಾಹನ ನಿಲ್ಲಿಸಿದಾಗ ನಾಗೇಶ್, ಪೊಲೀಸರಿಂದ ತಪ್ಪಿಸಿಕೊಳ್ಳಲು ಮುಂದಾಗಿದ್ದಾನೆ. ಹಿಡಿಯಲು ಹೋದ ಕಾನ್‌ಸ್ಟೇಬಲ್ ಮಹಾದೇವಯ್ಯರ ಮೇಲೆ ಕಲ್ಲಿನಿಂದ ಹಲ್ಲೆ ಮಾಡಿ ಪರಾರಿಯಾಗಲು ಯತ್ನಿಸಿದ್ದಾನೆ. ಈ ವೇಳೆ ಕಾಮಾಕ್ಷಿಪಾಳ್ಯ ಠಾಣೆಯ ಇನ್ಸ್‌ಪೆಕ್ಟರ್ ಪ್ರಶಾಂತ್ ಶರಣಾಗುವಂತೆ ಹೇಳಿ ಒಮ್ಮೆ ಗಾಳಿಯಲ್ಲಿ ಗುಂಡು ಹಾರಿಸಿ ಎಚ್ಚರಿಕೆ ನೀಡಿದರೂ ಆರೋಪಿ ನಾಗೇಶ್ ಅದಕ್ಕೆ ಬಗ್ಗದೆ ಪರಾರಿ ಆಗಲು ಯತ್ನಿಸಿದಾಗ ಆತನ ಬಲಗಾಲಿಗೆ ಗುಂಡು ಹಾರಿಸಿ ಬಂಧಿಸಲಾಗಿದೆ. ಘಟನಾ ಸ್ಥಳಕ್ಕೆ ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ್ ಭೇಟಿ ನೀಡಿದ್ದು, ಪರಿಶೀಲನೆ ನಡೆಸಿದ್ದಾರೆ. ಸದ್ಯ ಆರೋಪಿ ನಾಗೇಶ್ ಹಾಗೂ ಗಾಯಗೊಂಡಿರುವ ಕಾನ್‌ಸ್ಟೇಬಲ್ ಮಹದೇವಯ್ಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಪೊಲೀಸರಿಗೆ 5 ಲಕ್ಷ ಬಹುಮಾನ: ಆರೋಪಿ ನಾಗೇಶ್‌ನನ್ನು ಬಂಧಿಸಿದ ಪೊಲೀಸರಿಗೆ 5 ಲಕ್ಷ ರೂಪಾಯಿ ಬಹುಮಾನ ಧನ ನೀಡುವುದಾಗಿ ಕಮಲ್ ಪಂತ್ ಹೇಳಿದ್ದಾರೆ. ತಮ್ಮ ಕಚೇರಿಯಲ್ಲಿ ಇಂದು ಸುದ್ದಿಗೋಷ್ಠಿ ನಡೆಸಿದ ಅವರು,

ಈ ಪ್ರಕರಣದಲ್ಲಿ ಆರೋಪಿಯನ್ನು ಬಂಧಿಸಲು ಕಳೆದ 15 ದಿನಗಳಿಂದ ಸುಮಾರು ನೂರಕ್ಕೂ ಹೆಚ್ಚು ಪೊಲೀಸರು ಕಾರ್ಯಾಚರಣೆಯಲ್ಲಿ ತೊಡಗಿದ್ದರು. ಅಲ್ಲದೇ 50 ಮಂದಿ ಪೊಲೀಸ್ ಅಧಿಕಾರಿಗಳು ಎಲ್ಲೆಡೆ ಓಡಾಡುವ ಮೂಲಕ ಸತತವಾಗಿ ಕೆಲಸ ಮಾಡುತ್ತಿದ್ದರು. ಅವರ ಪರಿಶ್ರಮಕ್ಕೆ 5 ಲಕ್ಷ ರೂ.ಗಳನ್ನೂ ಅಭಿನಂದನೆಯ ರೂಪದಲ್ಲಿ ನೀಡಲಾಗುತ್ತದೆ ಎಂದು ತಿಳಿಸಿದರು. ಆರೋಪಿಯ ಮೇಲೆ ಎಂಟು ದಿನಗಳ ಒಳಗೆ ಚಾರ್ಜ್‌ಶೀಟ್ ಹಾಕಲಾಗುವುದು. ಆದಷ್ಟು ಬೇಗ ಯುವತಿಗೆ ನ್ಯಾಯ ದೊರಕಿಸುವ ಕೆಲಸ ಮಾಡಲಾಗುವುದೆಂದು ಹೇಳಿದರು.

ಆಶ್ರಮದಲ್ಲಿ ಅಡಗಿದ್ದ ಕಳ್ಳ ಸ್ವಾಮಿ: ನಾಗೇಶ್ ಆಸಿಡ್ ದಾಳಿ ನಡೆಸಿ ತಕ್ಷಣ ಅವನ ಸ್ನೇಹಿತ ಹಾಗೂ ಅಣ್ಣನಿಗೆ ಕರೆ ಮಾಡಿ ವಿಷಯ ತಿಳಿಸಿದ್ದಾನೆ. ಅವರು ಪೊಲೀಸರಿಗೆ ಶರಣಾಗುವಂತೆ ಹೇಳಿದ್ದಾರೆ. ಆದರೆ ನಾಗೇಶ್ ಯಾರ ಮಾತನ್ನು ಕೇಳದೆ ಅಲ್ಲಿಂದ ನೇರವಾಗಿ ತಿರುವಣ್ಣಾಮಲೈ ಆಶ್ರಮಕ್ಕೆ ಹೋಗಿ ಕಾವಿ ಬಟ್ಟೆ ತೊಟ್ಟು ಸ್ವಾಮೀಜಿ ಎಂದು ಪೂಜೆ ಹಾಗೂ ಧ್ಯಾನದಲ್ಲಿ ಮಗ್ನನಾಗಿದ್ದ ಎಂದು ಕಮಲ್ ಪಂತ್ ಮಾಹಿತಿ ನೀಡಿದರು.

ಸಾರ್ವಜನಿಕರಿಂದ ಮಾಹಿತಿ: ಆರೋಪಿ ಸೆರೆಗೆ ಎಲ್ಲಾ ಕಡೆಗಳಲ್ಲಿ ಅವನ ಚಿತ್ರಗಳನ್ನು ಅಂಟಿಸಲಾಗಿತ್ತು. ಅದರಂತೆಯೇ ತಿರುವಣ್ಣಾಮಲೈ ಆಶ್ರಮದಲ್ಲಿ ಇದ್ದ ಕಾರಣ ಅದನ್ನು ಗಮನಿಸಿದ ಸಾರ್ವಜನಿಕರು ಕರೆ ಮಾಡಿ ಮಾಹಿತಿ ನೀಡಿದ್ದಾರೆ. ಅವರು ನೀಡಿದ ಮಾಹಿತಿ ಹಾಗೂ ಚಿತ್ರದ ಆಧಾರದಲ್ಲಿ ತಕ್ಷಣ ಸಮೀಪದಲ್ಲಿಯೇ ಇದ್ದ ಪೊಲೀಸರು ಸ್ಥಳಕ್ಕೆ ತೆರಳಿ ನೋಡಿದಾಗ ಅವನನ್ನು ಆರೋಪಿ ನಾಗೇಶ್ ಎಂದು ಖಚಿತಪಡಿಸಿಕೊಂಡು ಆತನನ್ನು ಬಂಧಿಸಿದ್ದಾರೆ ಎಂದರು. ಆಸಿಡ್ ದಾಳಿ ನಡೆಸಿ ತಲೆಮರೆಸಿಕೊಂಡಿದ್ದ ಆರೋಪಿ ನಾಗೇಶ್ ಬಂಧನ ಬಳಿಕ ಸಂತ್ರಸ್ತ ಯುವತಿಯ ಕುಟುಂಬಸ್ಥರು ನಿಟ್ಟುಸಿರು ಬಿಟ್ಟಿದ್ದು, ನಮ್ಮ ಪ್ರಾರ್ಥನೆಗೆ ಫಲ ಸಿಕ್ಕಿದೆ ಎಂದು ಹೇಳಿದ್ದಾರೆ.

ಈಗಲೂ ಅವಳನ್ನೇ ಮದುವೆ ಆಗ್ತೀನಿ!

ಸರ್. ಅವಳನ್ನೇ ಮದುವೆಯಾಗುತ್ತೇನೆ ಎಂದು ಪೊಲೀಸರ ಮುಂದೆಯೇ ಹೇಳಿದ್ದಾನೆ. ಘಟನೆ ಬಳಿಕ ಹೊಸಕೋಟೆ ಬಳಿಯ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳಬೇಕು ಎಂದು ನಿರ್ಧರಿಸಿ ಆಟೋ ಹತ್ತಿ ಹೋಗಿದ್ದೆ. ಆದರೆ ಕೊನೆ ಕ್ಷಣದಲ್ಲಿ ನಿರ್ಧಾರ ಬದಲಿಸಿರುವುದಾಗಿ ತಿಳಿಸಿದ್ದಾನೆ. ಅಲ್ಲದೇ ಆಸಿಡ್ ಎರಚುವ ವೇಳೆ ನಾಗೇಶನ ಕೈಗೂ ಗಾಯಗಳಾಗಿದ್ದು, ತನ್ನ ಕೈ ನೋಡಿದಾಗಲೆಲ್ಲ ಅವಳು ಅಳುವುದೇ ನೆನಪಾಗುತ್ತದೆ ಎಂದು ವಿಕೃತ ಮನಸ್ಸಿನ ಭಾವನೆಯನ್ನು ಹೊರಹಾಕಿದ್ದಾನೆ ಎಂದು ಮೂಲಗಳು ತಿಳಿಸಿವೆ.

ದಕ್ಷಿಣ ಪದವೀಧರ ಕ್ಷೇತ್ರದಿಂದ ಪರಿಷತ್ ಚುನಾವಣೆ

ಗೆಲುವಿಗೆ ಕೆ.ಆರ್.ಕ್ಷೇತ್ರ ಮಹತ್ವದ ಕೊಡುಗೆ: ಉಸ್ತುವಾರಿ ಸಚಿವರ ವಿಶ್ವಾಸ

ಮೈಸೂರು, ಮೇ 14(ಎಸ್‌ಬಿಡಿ)– ಮೈಸೂರಿನ ಕೃಷ್ಣರಾಜ ಕ್ಷೇತ್ರದಲ್ಲಿ ಹೆಚ್ಚು ಪದವೀಧರ ಮತದಾರರ ನೋಂದಣಿಯಾಗಿದ್ದು, ಇದು ಬಿಜೆಪಿ ಅಭ್ಯರ್ಥಿ ಗೆಲುವಿಗೆ ಸಹಕಾರಿಯಾಗಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಹೇಳಿದರು.



ಸಭೆಯಲ್ಲಿ ಶಾಸಕ ಎಸ್.ಎ.ರಾಮದಾಸ್ ಮಾತನಾಡುತ್ತಿರುವುದು

ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ ಹಿನ್ನೆಲೆಯಲ್ಲಿ ಮೈಸೂರಿನ ಕೃಷ್ಣರಾಜ ಕ್ಷೇತ್ರದ ಬಿಜೆಪಿ ಕಚೇರಿಯಲ್ಲಿ ಶನಿವಾರ ನಡೆದ ಸಭೆಯಲ್ಲಿ ಮಾತ ನಾಡಿದ ಅವರು, ದಕ್ಷಿಣ ಪದವೀಧರ ಕ್ಷೇತ್ರದ ಮೈಸೂರು ಜಿಲ್ಲೆಯಲ್ಲಿ ಸುಮಾರು 60 ಸಾವಿರ ಮತದಾರರ ನೋಂದಣಿಯಾಗಿದ್ದು, ಇದರಲ್ಲಿ ಮೈಸೂರು ನಗರದ ಪಾಲು ಹೆಚ್ಚಿದೆ. ಅದರಲ್ಲೂ ಶಾಸಕ ಎಸ್.ಎ.ರಾಮದಾಸ್ ಅವರ ಪ್ರಾಮಾಣಿಕ ಪ್ರಯತ್ನ ಹಾಗೂ ಬದ್ಧತೆಯುಳ್ಳ ಕಾರ್ಯಕರ್ತರ ಪರಿಶ್ರಮದಿಂದ ಕೃಷ್ಣರಾಜ ಕ್ಷೇತ್ರದಲ್ಲಿ ಅತೀ ಹೆಚ್ಚು ಮತದಾರರ ನೋಂದಣಿಯಾಗಿದೆ. ಇದು ಪಕ್ಷದ ಅಭ್ಯರ್ಥಿ ಮೈ.ವಿ.ರವಿಶಂಕರ್ ಗೆಲುವಿಗೆ ಸಹಕಾರಿಯಾಗಲಿದೆ ಎಂದರು.

ಅಭ್ಯರ್ಥಿ ರವಿಶಂಕರ್, ಕ್ಷೇತ್ರದ 4 ಜಿಲ್ಲೆಗಳ ಎಲ್ಲಾ ಕಾರ್ಯಕರ್ತರನ್ನು ವಿಶ್ವಾಸದಲ್ಲಿಟ್ಟುಕೊಂಡು ಸಂಘಟನೆಯಲ್ಲಿ ತೊಡಗಿದ್ದಾರೆ. ಕಳೆದ ಚುನಾವಣೆಯಲ್ಲಿ ಅಲ್ಪ ಮತಗಳ ಅಂತರದಲ್ಲಿ ಪರಾಭವಗೊಂಡರು. ನಂತರದಲ್ಲೂ ಮತದಾರರೊಂದಿಗೆ ನಿರಂತರ ಸಂಪರ್ಕದಲ್ಲಿದ್ದಾರೆ. ಈ ಚುನಾವಣೆಯಲ್ಲಿ ಗೆಲುವು ಸಾಧಿಸುವುದು ಬಹಳ ಮುಖ್ಯ. ಈ ನಿಟ್ಟಿನಲ್ಲಿ ಪದವೀಧರರಿಗೆ ಅನುಕೂಲವಾಗಿರುವಂತಹ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕಾರ್ಯಕ್ರಮ ಹಾಗೂ ಯೋಜನೆಗಳ ಬಗ್ಗೆ ತಿಳಿಸಿ, ಬೆಂಬಲ ಕೋರಬೇಕೆಂದು ಸಭೆಯಲ್ಲಿ ನೆರೆದಿದ್ದ ಪ್ರಮುಖರಿಗೆ ಮನವಿ ಮಾಡಿದರು.

ಮೇ 18ಕ್ಕೆ 'ಮಹಾ ಸಂಪರ್ಕ': ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, ಮೇ 18ರಂದು ದಿನವಿಡೀ ಕೆ.ಆರ್.ಕ್ಷೇತ್ರದ ಸಂಚಾರ ನಡೆಸಿ, ಮತದಾರರ ಮಹಾ ಸಂಪರ್ಕ ಕೈಗೊಳ್ಳಲಿದ್ದೇವೆ. ಚುನಾವಣೆಗಳ ಬಗ್ಗೆ ಅನುಭವವಿರುವವರು ಹಾಗೂ ಹೊಸಬರು ಒಟ್ಟಾಗಿ ಚುನಾವಣಾ ಪ್ರಚಾರ ಕಾರ್ಯದಲ್ಲಿ ತೊಡಗಿದ್ದಾರೆ. ಪಕ್ಷದ ನಾಯಕರು ನೀಡುವ ಆದೇಶ, ಸೂಚನೆಯ ಪಾಲನೆಯೊಂದಿಗೆ ಪ್ರಚಾರ ನಡೆಸಿ, ಮೈ.ವಿ.ರವಿಶಂಕರ್ ಅವರಿಗೆ ಮೊದಲ ಪ್ರಾಶಸ್ತ್ಯದ ಮತ ನೀಡುವಂತೆ ಮನವಿ ಮಾಡೋಣ. ಹಿಂದಿನ ಚುನಾವಣೆಗಳಂತೆ ಕ್ಷೇತ್ರದ ಹೆಚ್ಚು ಮತ ಪಡೆಯುವ ನಿಟ್ಟಿನಲ್ಲಿ ಶ್ರಮಿಸೋಣ ಎಂದು ಉತ್ಸಾಹ ತುಂಬಿದರು.

ತಪ್ಪು ಮರುಕಳಿಸಬಾರದು: ದಕ್ಷಿಣ ಪದವೀಧರ ಚುನಾವಣಾ ಉಸ್ತುವಾರಿಯೂ ಆಗಿರುವ ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್ ಮಾತನಾಡಿ, ಚುನಾವಣೆಗೆ ಇನ್ನು ಹೆಚ್ಚು ದಿನ ಉಳಿದಿಲ್ಲ. ದೊರಕಿರುವ ಸಮಯದಲ್ಲೇ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು. ಕಳೆದ ಚುನಾವಣೆಯಲ್ಲಾದ ತಪ್ಪು ಮರುಕಳಿಸದಂತೆ ಎಚ್ಚರವಹಿಸಬೇಕು. ನಮ್ಮ ಅಭ್ಯರ್ಥಿ ಗೆಲುವಿನೊಂದಿಗೆ ಪಕ್ಷವನ್ನು ಬಲಪಡಿಸಲು ಜವಾಬ್ದಾರಿಯನ್ನು ಎಲ್ಲರೂ ಸಮರ್ಥವಾಗಿ ನಿರ್ವಹಿಸೋಣ ಎಂದರು.

ಮತದಾನದ ಬಗ್ಗೆ ತಿಳಿಸಿಕೊಡಿ: ಮೈಸೂರು ನಗರ ಪ್ರಭಾರಿ ಹೀರೇಂದ್ರ ಶಾ ಮಾತನಾಡಿ, ಈ ಬಾರಿ ಪದವೀ ಧರರ ನೋಂದಣಿ ಅಭಿಯಾನ ತುಂಬಾ ಅಚ್ಚುಕಟ್ಟಾಗಿ ನಡೆಯಿತು. ಹಾಗೆಯೇ ಮತದಾನದ ಬಗ್ಗೆಯೂ ಹೊಸ ಮತದಾರ ರಿಗೆ ಜಾಗೃತಿ ಮೂಡಿಸುವುದು ಬಹಳ ಮುಖ್ಯ. ಮತಪತ್ರ(ಬ್ಯಾಲೆಟ್ ಪೇಪರ್) ಮೂಲಕ ಪ್ರಾಶಸ್ತ್ಯದ ಮತ ಚಲಾಯಿಸುವ ಬಗ್ಗೆ ಮಾಹಿತಿ ನೀಡಬೇಕಿದೆ. ಇದಕ್ಕಾಗಿ ಮತದಾರರನ್ನು ನೇರವಾಗಿ ಸಂಪರ್ಕಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬಿಜೆಪಿ ಮೈಸೂರು ನಗರಾಧ್ಯಕ್ಷ ಶ್ರೀವತ್ಸ, ಜಿಲ್ಲಾಧ್ಯಕ್ಷೆ ಮಂಗಳ ಸೋಮಶೇಖರ್, ಕೆ.ಆರ್.ಕ್ಷೇತ್ರದ ಅಧ್ಯಕ್ಷ ಎಂ.ವಡಿವೇಲು, ಪ್ರಧಾನ ಕಾರ್ಯದರ್ಶಿ ಓಂ ಶ್ರೀನಿವಾಸ್, ನಗರ ಪಾಲಿಕೆ ಸದಸ್ಯರಾದ ರೂಪಾ ಯೋಗೇಶ್, ಛಾಯಾದೇವಿ ಮತ್ತಿತರರು ಪಾಲ್ಗೊಂಡಿದ್ದರು.

ಧ್ವನಿವರ್ಧಕ ಸಂಬಂಧ ಕೋರ್ಟ್ ಆದೇಶ, ಸರ್ಕಾರದ ಮಾರ್ಗಸೂಚಿ ಪಾಲನೆಗೆ ಸಮ್ಮತಿ

● ಪೊಲೀಸ್ ಅಧಿಕಾರಿಗಳಿಂದ ಪ್ರತ್ಯೇಕ ಸಭೆ ● ಕೋರ್ಟ್ ಆದೇಶ, ಸರ್ಕಾರದ ಮಾರ್ಗಸೂಚಿ ಬಗ್ಗೆ ಮಾಹಿತಿ ● ಎಲ್ಲಾ ಧಾರ್ಮಿಕ ಮುಖಂಡರಿಂದ ಸಹಮತ



ಧ್ವನಿವರ್ಧಕಕ್ಕೆ ಪೊಲೀಸ್ ಅನುಮತಿ ಪಡೆಯಲು ಅರ್ಜಿ ಸ್ವೀಕರಿಸುತ್ತಿರುವುದು

ಮೈಸೂರು, ಮೇ 14– ಧ್ವನಿವರ್ಧಕ ಬಳಕೆ ಸಂಬಂಧ ನ್ಯಾಯಾಲಯ ಆದೇಶ ಪಾಲಿಸುವುದರೊಂದಿಗೆ ರಾಜ್ಯ ಸರ್ಕಾರದ ನೂತನ ಮಾರ್ಗಸೂಚಿಯನ್ನು ಅನುಸರಿಸಲು ಮೈಸೂರಿನ ಹಿಂದೂ ಹಾಗೂ ಮುಸ್ಲಿಂ ಮುಖಂಡರು ಸಮ್ಮತಿಸಿದ್ದಾರೆ.

ಧ್ವನಿವರ್ಧಕ ಸಂಬಂಧ ನ್ಯಾಯಾಲಯದ ಆದೇಶವನ್ನು ಪಾಲಿಸಬೇಕೆಂದು ಇತ್ತೀಚೆಗೆ ರಾಜ್ಯ ಸರ್ಕಾರ ಆದೇಶಿಸಿರುವ ಹಿನ್ನೆಲೆಯಲ್ಲಿ ಮೈಸೂರಿನ ನರಸಿಂಹರಾಜ ಉಪ ವಿಭಾಗದ ಎಸಿಪಿ ಎಂ.ಶಿವಶಂಕರ್ ಹಾಗೂ ದೇವರಾಜ ಉಪ ವಿಭಾಗದ ಎಸಿಪಿ ಶಶಿಧರ್ ನೇತೃತ್ವದಲ್ಲಿ ಎರಡು ಪ್ರತ್ಯೇಕ ಸಭೆ ನಡೆಸಲಾಗಿದೆ. ಮುಸ್ಲಿಂ ಮುಖಂಡರು ಮತ್ತು ಮಸೀದಿಗಳ ಪ್ರತಿನಿಧಿಗಳೊಂದಿಗೆ ಇಂದು ಖಾಸಗಿ ಸಭಾಂಗಣದಲ್ಲಿ ಸಭೆ ನಡೆಸಲಾಯಿತು. ನಿನ್ನೆ ಹಿಂದೂ ಮುಖಂಡರು ಹಾಗೂ ದೇವಾಲಯಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿದ್ದರು.

ಸಭೆಯಲ್ಲಿ ನ್ಯಾಯಾಲಯ ಆದೇಶ ಹಾಗೂ ಧ್ವನಿವರ್ಧಕಗಳ ಅಳವಡಿಕೆಗಾಗಿ ರಾಜ್ಯ ಸರ್ಕಾರ ಹೊರಡಿಸಿರುವ ನೂತನ ಮಾರ್ಗಸೂಚಿ ಬಗ್ಗೆ ತಿಳಿವಳಿಕೆ ನೀಡಲಾಯಿತು. ಧ್ವನಿವರ್ಧಕಗಳ ಅಳವಡಿಕೆ ಮತ್ತು ಬಳಕೆಯ ಬಗ್ಗೆ ಚರ್ಚಿಸಿ ಗೊಂದಲಗಳನ್ನು ನಿವಾರಿಸಲಾಯಿತು.

ಸಭೆಯಲ್ಲಿ ಭಾಗವಹಿಸಿದ್ದ ಹಂಗಾಮಿ ಉಪ ಮೇಯರ್ ಅನ್ವರ್ ಬೇಗ್(ಅಫ್ತಾಬ್) ಅವರು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ನ್ಯಾಯಾಲಯದ ಆದೇಶ ಮುಸ್ಲಿಂ ಸಮುದಾಯಕ್ಕೆ ಮಾತ್ರವಲ್ಲ ಎಲ್ಲರಿಗೂ ಅನ್ವಯವಾಗುತ್ತದೆ. ಹಾಗಾಗಿ ನ್ಯಾಯಾಲಯದ ಆದೇಶಕ್ಕೆ ತಲೆ ಬಾಗಲೇಬೇಕು ಎಂದರು.

ಈ ನಿಟ್ಟಿನಲ್ಲಿ ಬೆಳಗ್ಗೆ 6ರಿಂದ ನಿಗದಿತ ಡೆಸಿಬಲ್ ಅನ್ವಯ ಧ್ವನಿವರ್ಧಕ ಬಳಕೆಗೆ ಅವಕಾಶವಿದೆ. ಹಾಗಾಗಿ ಮುಂಜಾನೆ 5 ಗಂಟೆಯ ಆಜಾನ್ ವೇಳೆ ಧ್ವನಿವರ್ಧಕ ಬಳಸದಿರಲು ಎಲ್ಲರೂ ಸಮ್ಮತಿಸಿದ್ದಾರೆ. ಇನ್ನು 15 ದಿನಗಳಲ್ಲಿ ಪೊಲೀಸರಿಂದ ಅನುಮತಿ ಪಡೆಯಲಾಗುತ್ತದೆ. ವಲಯವಾರು ಶಬ್ದ ಡೆಸಿಬಲ್ ನಿಗದಿಪಡಿಸಿರುವುದರಿಂದ ಒಂದಷ್ಟು ಗೊಂದಲವಿದ್ದು, ಇನ್ನು ಐದಾರು ದಿನಗಳಲ್ಲಿ ಸ್ಪಷ್ಟನೆ ಸಿಗಲಿದೆ ಎಂದು ಅವರು ಹೇಳಿದರು.

ಬೆಂಗಳೂರಿನ ಧಾರ್ಮಿಕ ಮುಖಂಡರಾದ ಅಮೀರ್ ಇ-ಷರಿಯತ್ ಅವರೂ ನ್ಯಾಯಾಲಯದ ಆದೇಶ ಪಾಲಿಸಲು ನಿರ್ಧರಿಸಿ ಫತ್ವಾ ಹೊರಡಿಸಿದ್ದು, ವಾಟ್ಸಾಪ್ ಮೂಲಕ ಮಾಹಿತಿ ರವಾನಿಸಿದ್ದಾರೆ. ಅವರು ತಿಳಿಸಿರುವಂತೆ ಮೈಸೂರಿನಲ್ಲಿಯೂ ಸಹ ನ್ಯಾಯಾಲಯದ ಆದೇಶ ಮತ್ತು ರಾಜ್ಯ ಸರ್ಕಾರದ ನೂತನ ಮಾರ್ಗಸೂಚಿಯನ್ನು ಅನುಸರಿಸುತ್ತೇವೆ ಎಂದು ತಿಳಿಸಿದರು.

ಮೈಸೂರಿನ ಬೀಡಿ ಮಜ್ದೂರ್ ಕಾರ್ಯದರ್ಶಿ ಹಾಗೂ ಪಾಲಿಕೆ ಮಾಜಿ ಸದಸ್ಯ ಶೌಕತ್ ಪಾಷಾ ಮಾತನಾಡಿ, ದೇಶದ ಕಾನೂನಿಗೆ ಎಲ್ಲರೂ ತಲೆಬಾಗಲೇಬೇಕು. ಆದರೆ ಸರ್ಕಾರ ಮತ್ತು ಪೊಲೀಸ್ ಇಲಾಖೆ, ಸುಪ್ರೀಂ ಕೋರ್ಟ್ ಆದೇಶ ಮತ್ತು ನೂತನ ಮಾರ್ಗಸೂಚಿ ಬಗ್ಗೆ ಯಾವುದೇ ಗೊಂದಲಗಳು ಸೃಷ್ಟಿಯಾಗದಂತೆ ನೋಡಿಕೊಳ್ಳಬೇಕು ಎಂದರು.

ನೂತನ ಮಾರ್ಗಸೂಚಿ ಅನುಸಾರ ಇಂದು ನಡೆದ ಸಭೆಯಲ್ಲಿ ಎಲ್ಲಾ ಮಸೀದಿಗಳ ಮುಖಂಡರಿಗೂ ಧ್ವನಿವರ್ಧಕಗಳ ಅಳವಡಿಸಿಕೊಳ್ಳಲು ಅನುಮತಿಗಾಗಿ ಅರ್ಜಿಯನ್ನು ವಿತರಿಸಿದ್ದಾರೆ. ಮೇ 25ರೊಳಗೆ ಆಯಾ ವ್ಯಾಪ್ತಿಯ ಠಾಣೆಗಳಲ್ಲಿ ನೀಡಿ ಅನುಮತಿ ಪಡೆಯುವಂತೆ ತಿಳಿಸಿದ್ದಾರೆ. ಅದು ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿದ್ದು, ಅದನ್ನು ಉರ್ದುಗೆ ಅನುವಾದಿಸಲು ಸೆಂಟ್ರಲ್ ಇಂಡಿಯನ್ ಲಾಂಗ್ವೇಜ್‌ಗೆ ಕಳುಹಿಸಲಾಗಿದೆ. ಅದರಿಂದ ಮತ್ತಷ್ಟು ಜನರಿಗೆ ಜಾಗೃತಿ ಮೂಡಿಸಬಹುದು ಎಂಬ ಉದ್ದೇಶವಿದೆ ಎಂದರು.

ಸಭೆಯಲ್ಲಿ ಮಾಜಿ ಮೇಯರ್ ಅಯೂಬ್ ಖಾನ್, ಪಾಲಿಕೆ ಸದಸ್ಯರಾದ ಆಯಜ್ ಪಾಷ ಪಂಡು, ಬಷೀರ್ ಅಹಮ್ಮದ್, ಧರ್ಮಗುರುಗಳು, ಮುಸ್ಲಿಂ ಮುಖಂಡರು, ನರಸಿಂಹರಾಜ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಅಜರುದ್ದೀನ್, ಉದಯಗಿರಿ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಅರ್ಜುನ್, ಮಂಡಿ ಮೊಹಲ್ಲಾ ಇನ್ಸ್‌ಪೆಕ್ಟರ್ ರಘು ಹಾಗೂ ನರಸಿಂಹರಾಜ ವ್ಯಾಪ್ತಿಯ ಎಲ್ಲಾ ಠಾಣೆಗಳ ಇನ್ಸ್‌ಪೆಕ್ಟರ್‌ಗಳು ಹಾಗೂ ಸಿಬ್ಬಂದಿ ಸಭೆಯಲ್ಲಿ ಭಾಗವಹಿಸಿದ್ದರು.



ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಅರವಿಂದ ಅವರ ಹುಟ್ಟುಹಬ್ಬಕ್ಕೆ ನಗರ ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ರವಿ ರಾಜಕೀಯ, ಎ.ಮಂಚಪ್ಪ ಎಸ್.ಆರ್.ರವಿ, ಚಾಮರಾಜ ಕ್ಷೇತ್ರ ಬಿಜೆಪಿ ಉಪಾಧ್ಯಕ್ಷ ಕುಮಾರ್‌ಗೌಡ, ಕಾಂಗ್ರೆಸ್‌ನ ಮೈಸೂರು ನಗರ ಎಸ್‌ಟಿ ಘಟಕದ ಅಧ್ಯಕ್ಷ ರೋಹಿತ್, ಮಹದೇವ್ ಶುಭಾಶಯ ಕೋರಿದರು.



ಮೈಸೂರಿನ ಕುಂಬಾರ ಕೊಪ್ಪಲಿನಲ್ಲಿ ಮಾ.16ರಂದು ನಡೆಯಲಿರುವ ಶ್ರೀ ಮಹದೇಶ್ವರ ಕೋಟಿ ಜಪ ಯಜ್ಞ ಕಾರ್ಯಕ್ರಮಕ್ಕೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರನ್ನು ಆಹ್ವಾನಿಸಲಾಯಿತು. ಈ ಸಂಧರ್ಭದಲ್ಲಿ ಶ್ರೀ ಮಹದೇಶ್ವರ ಜಯಂತ್ಯೋತ್ಸವದ ನೂತನ ಸಮಿತಿ ಕಾರ್ಯಾಧ್ಯಕ್ಷರೂ ಆದ ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ಸಮಿತಿ ಅಧ್ಯಕ್ಷ, ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ಶಿವಮೂರ್ತಿ ಕಾನ್ಯ, ಉಪಾಧ್ಯಕ್ಷರಾದ ಯು.ಎಂ. ಪ್ರಭುಸ್ವಾಮಿ, ಕಾರ್ಯದರ್ಶಿ ಮಹದೇವಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ದಟ್ಟಗಳ್ಳಿಯಲ್ಲಿರುವ ಬಸವ ಬಳಗದ ಕಚೇರಿಯಲ್ಲಿ ಬಸವ ಜಯಂತಿ ಆಚರಿಸಲಾಯಿತು. ಈ ವೇಳೆ ಬುದ್ಧ ಬಳಗದ ಅಧ್ಯಕ್ಷ ಸಿ. ಮಲ್ಲಿಕಾರ್ಜುನ ಮತ್ತು ಪದಾಧಿಕಾರಿಗಳು ಇದ್ದರು.

ಮೈಸೂರು ಜಿಲ್ಲೆಯಲ್ಲೂ ಶಾಲೆ ಆರಂಭಕ್ಕೆ ಸಿದ್ಧತೆ

ಮೈಸೂರು, ಮೇ 14(ಎಂಕೆ)– ರಾಜ್ಯಾದ್ಯಂತ ನಾಳೆ(ಮೇ 16)ಯಿಂದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳು ಆರಂಭಗೊಳ್ಳಲಿದ್ದು, ಪೋಷಕರು ಹಾಗೂ ವಿದ್ಯಾರ್ಥಿಗಳಲ್ಲಿ ಕೊರೊನಾ ಆತಂಕ ದೂರವಾಗಿಸಲು ಶಿಕ್ಷಣ ಇಲಾಖೆಯಿಂದ ಅಗತ್ಯ ಪೂರ್ವ ತಯಾರಿ ಮಾಡಿಕೊಳ್ಳಲಾಗಿದೆ.



ಮೈಸೂರು ಜಿಲ್ಲೆಯಲ್ಲಿ ಸರ್ಕಾರಿ (ಕೇಂದ್ರ ಮತ್ತು ರಾಜ್ಯ), ಅನುದಾನಿತ ಹಾಗೂ ಅನುದಾನ ರಹಿತ ಸೇರಿ ಒಟ್ಟು 3363 ಶಾಲೆಗಳಿದ್ದು, ಎಲ್ಲೆಡೆ ದಾಖಲಾತಿ ಪ್ರಕ್ರಿಯೆ ಚುರುಕಾಗಿ ನಡೆಯುತ್ತಿದೆ. ಹೆಚ್.ಡಿ.ಕೋಟೆ ತಾಲೂಕಿನಲ್ಲಿ 413 ಶಾಲೆಗಳು, ಹುಣಸೂರು 416, ಕೆ.ಆರ್.ನಗರ 343, ಮೈಸೂರು ಉತ್ತರ 379, ಮೈಸೂರು ಗ್ರಾಮಾಂತರ 482, ಮೈಸೂರು ದಕ್ಷಿಣ 239, ನಂಜನಗೂಡು 383, ಪಿರಿಯಾಪಟ್ಟಣ 370 ಹಾಗೂ ಟಿ.ನರಸೀಪುರ ತಾಲೂಕಿನಲ್ಲಿ 338 ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿವೆ.

679 ಮಂದಿ ಅತಿಥಿ ಶಿಕ್ಷಕರ ಹಂಚಿಕೆ: ಶಾಲೆಗಳ ಆರಂಭಕ್ಕೆ ಬೇಕಾದ ಎಲ್ಲಾ ಸಿದ್ಧತೆಗಳು ನಡೆದಿದ್ದು, ಜಿಲ್ಲೆಯಲ್ಲಿ ಶಿಕ್ಷಕರ ಕೊರತೆ ಇದ್ದ ಶಾಲೆಗಳಿಗೆ 679 ಮಂದಿ ಅತಿಥಿ ಶಿಕ್ಷಕರನ್ನು ಹಂಚಿಕೆ ಮಾಡಿದ್ದು, ಆಯಾ ಶಾಲೆಯ ಎಸ್‌ಡಿಎಂಸಿ ಸಮಿತಿ ನೇಮಕ ಮಾಡಿಕೊಳ್ಳಲಿದೆ. ಪುಸ್ತಕಗಳು ಬಂದಿದ್ದು, ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ. ಕೊರೊನಾ ಆತಂಕ ದೂರವಾಗಿಸಲು ಶಾಲೆಯಲ್ಲಿ ಶುಚಿ ವಾತಾವರಣ ನಿರ್ಮಾಣ ಮಾಡುವ ಪ್ರಯತ್ನ ಮಾಡುತ್ತಿದ್ದೇವೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರ ರಾಜೇ ಅರಸ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಜೂ.30ರವರೆಗೆ ಬಸ್‌ಪಾಸ್ ಅವಧಿ ವಿಸ್ತರಣೆ: ಹೊಸದಾಗಿ ಬಸ್‌ಪಾಸ್ ಮಾಡಿಸುವ ಕುರಿತು ಸರ್ಕಾರದಿಂದ ಯಾವುದೇ ಸೂಚನೆ ಬಂದಿಲ್ಲ. ಬದಲಿಗೆ ಕಳೆದ ವರ್ಷ ಮಾಡಿಸಿದ್ದ ಬಸ್‌ಪಾಸ್ ಅವಧಿಯನ್ನು ಜೂನ್ 30ರವರೆಗೆ ವಿಸ್ತರಣೆ ಮಾಡಿದ್ದು, ವಿದ್ಯಾರ್ಥಿಗಳು ಅಲ್ಲಿಯವರೆಗೂ ಬಸ್‌ಗಳಲ್ಲಿ ಸಂಚರಿಸಬಹುದು ಎಂದು ಕೆಎಸ್‌ಆರ್‌ಟಿ ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್ ಮಾಹಿತಿ ನೀಡಿದರು.

ಭಾರತದ ಸಂಸ್ಕೃತಿಯನ್ನು ಯಾರಿಂದಲೂ ಅಲುಗಾಡಿಸಲಾಗದು

● ಆರ್‌ಎಸ್‌ಎಸ್ ಮುಖಂಡ ವಿ.ನಾಗರಾಜ್ ವಿಶ್ವಾಸ ● ಪ್ರಪಂಚದ ಅನೇಕ ಸಂಸ್ಕೃತಿ ಬದಲಾಗಿವೆ

ಮೈಸೂರು, ಮೇ 14(ಎಂಕೆ)– ಭಾರತೀಯ ಸಂಸ್ಕೃತಿ ಹೊರತು ಜಗತ್ತಿನ ಬೇರೆ ಯಾವ ದೇಶದ ಸಂಸ್ಕೃತಿಗೂ ನಿರಂತರತೆ ಇಲ್ಲ. ವಿದೇಶಿಯರ ದಾಳಿ, ಪರಕೀಯರ ದಬ್ಬಾಳಿಕೆ ನಡೆದಿದ್ದರೂ ನಮ್ಮ ಸಂಸ್ಕೃತಿ, ಭಾಷೆ ನಶಿಸಿಲ್ಲ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕ್ಷೇತ್ರೀಯ ಸಂಘಚಾಲಕ ವಿ.ನಾಗರಾಜ್ ಪ್ರತಿಪಾದಿಸಿದರು.



ಕರ್ನಾಟಕ ರಾಜ್ಯ ಮುಕ್ತ ವಿವಿ(ಕೆಎಸ್‌ಒಯು) ಘಟಿಕೋತ್ಸವ ಸಭಾಂಗಣದಲ್ಲಿ ಆಯೋಜಿಸಿದ್ದ ಎರಡು ದಿನಗಳ ವಿದ್ಯಾರ್ಥಿ ಸಂಸ್ಕೃತಿ ಚಳುವಳಿ-3 ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಜಗತ್ತಿನಲ್ಲಿ ಸಾಂಸ್ಕೃತಿಕ ನಿರಂತರತೆಯ ಗುಣ ಹೊಂದಿರುವುದು ಭಾರತೀಯ ಸಂಸ್ಕೃತಿ ಮಾತ್ರ. ಇಲ್ಲಿಗೆ ಬಂದ ಪ್ರತಿ ಪೀಳಿಗೆಯೂ ಸಂಸ್ಕೃತಿಯನ್ನು ರಕ್ಷಿಸಿಕೊಂಡು, ಮುಂದಿನ ತಲೆಮಾರಿಗೆ ಹಸ್ತಾಂತರಿಸಿದೆ. ಕನ್ನಡ ಭಾಷೆಗೆ 2 ಸಾವಿರ ವರ್ಷಗಳ ಇತಿಹಾಸ ಇದೆ. ಹಳಗನ್ನಡ ಓದುವವರು, ಬರೆಯುವರು ಈಗಲೂ ಇದ್ದಾರೆ. ಸಂಸ್ಕೃತ ಭಾಷೆ, ವೇದ, ಉಪನಿಷತ್ ನಿರಂತರವಾಗಿ ಹರಿದುಕೊಂಡು ಬಂದಿದೆ ಎಂದರು.

ಇರಾಕ್‌ನಲ್ಲಿ ಇಂದು ಮೆಸಪಟೋಮಿಯಾ ಸಂಸ್ಕೃತಿ ಮತ್ತು ಈಜಿಪ್ಟ್‌ನಲ್ಲಿ ಅಲ್ಲಿನ ಮೂಲ ಸಂಸ್ಕೃತಿ ಕಾಣಲು ಸಾಧ್ಯವಿಲ್ಲ. ಅರಬ್ ದಾಳಿಯ ಬಳಿಕ ಅಲ್ಲಿ ಈಗ ಅರಬ್ ಸಂಸ್ಕೃತಿ ನೆಲೆಯೂರಿದೆ. ಪ್ರಾಚೀನ ಈಜಿಪ್ಟ್ ಭಾಷೆಯನ್ನಾಡುವ ಜನರೂ ಅಲ್ಲಿಲ್ಲ. ಅದೇ ರೀತಿ ಗ್ರೀಕ್ ಸಂಸ್ಕೃತಿ ನಾಶವಾಗಿ ಕ್ರೈಸ್ತ ಸಂಸ್ಕೃತಿ ಆವರಿಸಿಕೊಂಡಿದೆ. ಭಾರತ, ತನ್ನ ಸಂಸ್ಕೃತಿಯನ್ನು ಯಾರಿಗೂ ಬಿಟ್ಟುಕೊಟ್ಟಿಲ್ಲ ಎಂದು ಹೇಳಿದರು.

ಸಂಸ್ಕೃತಿ ಉತ್ಸವ ಎಂದರೆ ಕೇವಲ ಸಿನಿಮಾ ಹಾಡುಗಳು, ನೃತ್ಯ ಮಾತ್ರವಲ್ಲ. ಸಹಸ್ರಾರು ವರ್ಷಗಳಿಂದ ಬೆಳೆದು ಬಂದಿರುವ ಸಂಸ್ಕೃತಿಯ ಉದ್ದೇಶ ಮನುಷ್ಯನಿಗೆ ಒಳ್ಳೆಯ ಗುಣಗಳನ್ನು ಕಲಿಸುವುದು. ನಮ್ಮ ಜಾನಪದ, ನಾಟಕಗಳು ಒಮ್ಮೆ ಬಳಸಿ ಬಿಸಾಕುವ ಸಂಗತಿಗಳಲ್ಲ. ಜನರಲ್ಲಿ ಭಾವನಾತ್ಮಕ, ಬೌದ್ಧಿಕ ಉದಾತ್ತತೆಯನ್ನು ಬೆಳೆಸುವುದಾಗಿದೆ. ಇಂದು ಹೆಚ್ಚಿನ ಕಡೆ ಸಂಸ್ಕೃತಿ ಉತ್ಸವ ಎಂದರೆ ಸಿನಿಮಾ ಗೀತೆ ಗಾಯನ, ಕುಣಿತಕ್ಕೆ ಸೀಮಿತವಾಗಿದೆ. ಗಣೇಶೋತ್ಸವ ಕೂಡಾ ಅಷ್ಟಕ್ಕೆ ಸೀಮಿತವಾಗಿರುವುದನ್ನು ನೋಡಬಹುದು. ಸಾವಿರಾರು ವರ್ಷಗಳಿಂದ ಬೆಳೆದುಕೊಂಡು ಬಂದ ಸಂಸ್ಕೃತಿಯನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಮುಖ್ಯ ಎಂದು ಕಿವಿಮಾತು ಹೇಳಿದರು.

ಪಾಶ್ಚಾತ್ಯೀಕರಣದ ಭ್ರಮೆ: ಆಧುನಿಕತೆ ಎಂದರೆ ಪಾಶ್ಚಾತ್ಯೀಕರಣ ಎಂಬ ಭ್ರಮೆ ನಮ್ಮಲ್ಲಿ ಮೂಡಿದೆ. ಆದರೆ ಪಾಶ್ಚಾತ್ಯೀಕರಣವು ಆಧುನೀಕರಣ ಅಲ್ಲ. ನಮ್ಮ ದೇಶ, ಸಂಸ್ಕೃತಿ ಯಾವಾಗಲೂ ಅಧುನಿಕವಾಗಿಯೇ ಇರುತ್ತದೆ. ಬದಲಾವಣೆ ನಿರಂತರವಾಗಿರಬೇಕು ಎಂಬುದನ್ನು ನಾವು ಒಪ್ಪಿಕೊಂಡು ಬಂದಿದ್ದೇವೆ. ಭಾರತ ವಿಶ್ವಗುರುವಾಗಲು ಯುವಜನರ ಪಾತ್ರ ನಿರ್ಣಾಯಕ. ಆದ್ದರಿಂದ ಯುವಕರು ನೈತಿಕ ಪ್ರಜ್ಞೆ, ಆಧ್ಯಾತ್ಮಿಕ ಗುಣಗಳನ್ನು ಬೆಳೆಸಿಕೊಳ್ಳಬೇಕು. ನೈತಿಕ ದಿಕ್ಸೂಚಿಯನ್ನೊಳಗೊಂಡ ಭಾರತೀಯ ತತ್ವಶಾಸ್ತ್ರವನ್ನು ಹಿಂಬಾಲಿಸಿದರೆ ಸಾಕು ವಿಶ್ವವೇ ಉಳಿಯುತ್ತದೆ ಎಂದು ಹಲವರು ಪ್ರತಿಪಾದಿಸಿದ್ದಾರೆ ಎಂದರು.

ಬಹುಮಾನ ವಿತರಣೆ: ಬಳಿಕ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವೈಯಕ್ತಿಕ ಮತ್ತು ಸಮೂಹ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಗಂಗೂಬಾಯಿ ಹಾನಗಲ್ ಸಂಗೀತ ವಿ.ವಿ ತಂಡ ಸಮಗ್ರ ಪ್ರಶಸ್ತಿ ಜಯಿಸಿತು. ಕಲಾವಿದರ ಮಾಸಾಶನ ಸಮಿತಿ ಅಧ್ಯಕ್ಷ ಪಾಪು ಶ್ರೀನಿವಾಸ್, ಎಬಿವಿಪಿ ಕ್ಷೇತ್ರೀಯ ಸಂಘಟನಾ ಕಾರ್ಯದರ್ಶಿ ಸ್ವಾಮಿ ಮರಳಾಪುರ, ರಾಮದಾಸ್ ರೆಡ್ಡಿ ನಿರಂಜನ್, ಶ್ರೀರಾಮ್ ಮತ್ತಿತರರು ಉಪಸ್ಥಿತರಿದ್ದರು.

> ನೂತನ ರಾಷ್ಟ್ರೀಯ ಶಿಕ್ಷಣ ನೀತಿಯು ಲಲಿತಕಲೆಗೆ ಉತ್ತೇಜನ ನೀಡುತ್ತದೆ. ಇಷ್ಟು ವರ್ಷ ನಾಟಕ, ನೃತ್ಯ ಒಳಗೊಂಡಂತೆ ಎಲ್ಲ ಕಲೆಗಳು ಪಠ್ಯೇತರ ಚಟುವಟಿಕೆಗೆ ಸೀಮಿತವಾಗಿತ್ತು. ಆದರೆ ಹೊಸ ಶಿಕ್ಷಣ ನೀತಿಯು ಕಲೆಯನ್ನು ಪಠ್ಯವನ್ನಾಗಿ ಮಾಡಿದೆ. ವಿದ್ಯಾರ್ಥಿಗಳಲ್ಲಿ ಕಲೆಯನ್ನು ಪ್ರೋತ್ಸಾಹಿಸಲು ಅವಕಾಶ ಮಾಡಿಕೊಟ್ಟಿದೆ.
>
> – ಡಾ.ನಾಗೇಶ್ ವಿ. ಬೆಟ್ಟಕೋಟೆ, ಕುಲಪತಿ, ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ

ಪುಟ 8
ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಸ್ಥಾಪನೆ: 1980
43ನೇ ವರ್ಷ
ಅತ್ಯುತ್ತಮ ಪತ್ರಿಕೋದ್ಯಮ
ಭಾನುವಾರ
15-05-2022

ಸ್ತ್ರೀ ಎಂದರೆ ಅಷ್ಟೇ ಸಾಕೆ..!



.ಹೆಚ್.ಜಿ.ಎನ್.ಪ್ರಸಾದ್.

ಮಗಳೇ ನಿನ್ನ ವಿದ್ಯಾಭ್ಯಾಸ ಮುಗಿಯಿತು. ಕೆಲಸಕ್ಕೂ ಸೇರಿದ್ದೀಯ. ಇನ್ನು ನಿನ್ನ ಮದ್ವೆಗೆ ಯೋಚ್ನೆ ಮಾಡ್ತಿದ್ದೀ ನಮ್ಮ' ತಾಯಿ ದೀಪಾಶ್ರೀ ಕೇಳಿದಾಗ, ಮಗಳಿಗೆ ಆಶ್ಚರ್ಯವಾಯಿತು.

'ಅಲ್ಲಮ್ಮ ನೀನೇನಾ ಈ ರೀತಿ ಯೋಚ್ನೆ ಮಾಡ್ತಿರೋದು?! ಇಷ್ಟು ಬೇಗ ನಿನ್ನ ಮಗಳಿಗೆ ಮದ್ವೆ ಮಾಡ್ತೀಯಾ? ನೀನು ಮಾತ್ರ ಎಷ್ಟು ನಿಧಾನವಾಗಿ ಮದ್ವೆ ಆಗಿದ್ದೆ?!' ವಿದ್ಯಾಶ್ರೀ ಕೇಳಿದಳು.

'ಹೌದು ವಿದ್ಯಾ, ನಾನು ಹಿಂದೆ ತೊಗೊಂಡಂಥ ನಿರ್ಧಾರ ಈಗ ನಂಗೆ ತಪ್ಪು ಅಂತ ಅನ್ನಿಸುತ್ತಿದೆ! ಲೇಟ್ ಮ್ಯಾರೇಜ್ ಆಗಿದ್ದರಿಂದ ಈಗ ನಮಗೆ ವಯಸ್ಸಾಗಿ ಬಿಟ್ಟಿದೆ. ಆದ್ರೆ ನಿನಗೆ ಇನ್ನೂ ಚಿಕ್ಕ ವಯಸ್ಸು. ನಿನ್ನ ಮದ್ವೆ ಆದ್ರೆ ನಮಗೆ ಅರ್ಧ ಜವಾಬ್ದಾರಿ ಮುಗಿದ ಹಾಗೆ. ಆಮೇಲೆ ನಿನ್ನ ತಮ್ಮನ ಓದು, ಮದುವೆ ಎಲ್ಲಾ ಆಗಬೇಕು'.

'ಊಂಹು ಇಲ್ಲಮ್ಮ, ನಾನು ಇಷ್ಟು ಬೇಗ ಮದ್ವೆ ಆಗಲ್ಲ ಅಪ್ಪ ಅಮ್ಮನ ಜೊತೆ ಇದ್ದ ಹಾಗೇ ಅನ್ನಲ್ಲ. ಇಷ್ಟು ದಿನ ಬರೀ ಓದೋದ್ರಲ್ಲೇ ಕಾಲ ಕಳೀತು. ಕೊನೇ ಪಕ್ಷ ಒಂದು ವರ್ಷವಾದ್ರೂ ಕೆಲ್ಸ ಮಾಡಕ್ಕೆ ಬಿಡು. ನಂಗೆ ಡಬ್ಬಿ ಕೊಡು. ಕಂಪನಿ ಬಸ್ ಬರುತ್ತೆ ಹೊರ್ಡ್ತೀನಿ.' ದೀಪಶ್ರೀ ಡಬ್ಬಿಯನ್ನು ತಂದು ಮಗಳ ಕೈಗೆ ಕೊಟ್ಟರು. 'ನಾ ಬರ್ತೀನಮ್ಮ' ಎನ್ನುತ್ತಾ ವಿದ್ಯಾಶ್ರೀ ಬಸ್ ಸ್ಟಾಪ್ ಕಡೆಗೆ ಹೊರಟಳು.

ದೀಪಶ್ರೀ ಕುಳಿತು ಯೋಚಿಸಲು ಶುರು ಮಾಡಿದಳು. 'ಅಲ್ಲ ಇದೇ ಇಪ್ಪತ್ನಾಲ್ಕು ವರ್ಷಗಳ ಹಿಂದೆ, ನನಗೂ ನನ್ನ ತಾಯಿಗೂ ಇದೇ ವಾಗ್ವಾದ ನಡೆಯುತ್ತಿತ್ತು! ಈಗ ನನ್ನ ಮಗಳು ಹೇಳಿದಂತೆಯೇ ಆಗ ನಾನೂ ಮದ್ವೆ ಆಗಲ್ಲಂತ ಹಠ ಹಿಡಿದಿದ್ದೆ! ನನಗೆ ಮದ್ವೆಗಿಂತ ಹೆಚ್ಚಾಗಿ, ಜೀವನದಲ್ಲಿ ಏನೇನೋ ಸಾಧನೆಗಳನ್ನು ಮಾಡುವುದಿತ್ತು. ಭರತನಾಟ್ಯ ಕಲಾವಿದೆಯಾದ ನಾನು, ದೊಡ್ಡ ಹೆಸರು ಮಾಡಬೇಕೆಂಬ ಹಂಬಲವಿತ್ತು. ಮದುವೆ ಅದಕ್ಕೆಲ್ಲಾ ತಡೆಗೋಡೆ ಆಗುವುದೆಂದು ತಿಳಿದಿತ್ತು. ಅದಕ್ಕಾಗೇ ಮದ್ವೆ ಬೇಡವೆಂದು ಹಠ ಹಿಡಿದಿದ್ದೆ. ಆಗ ಮಗಳ ಸ್ಥಾನದಲ್ಲಿದ್ದ ನಾನು, ಈಗ ತಾಯಿ ಸ್ಥಾನದಲ್ಲಿದ್ದೇನೆ!

ನಾನು ಮಗಳು ಯೋಚಿಸುವಂತೆ ಯೋಚಿಸಬೇಕೋ? ಇಲ್ಲ ತಾಯಿ ಯೋಚಿಸಿದಂತೆ ಯೋಚಿಸಬೇಕೋ?! ಕಾಲಚಕ್ರ ಉರುಳಿದಂತೆ ಭಾವನೆಗಳು ಎಷ್ಟು ವ್ಯತ್ಯಾಸವಾಗುತ್ತದೆ. ಅಂದು ಅಮ್ಮ ಹೇಳಿದ್ದೆಲ್ಲಾ ಇಂದು ನನಗೆ ಸರಿಯೆನಿಸುತ್ತಿದೆ! ಆಗ ನಾನು, ನಾನೇನು ಅಮ್ಮನಿಗೆ ಹೊರೆಯೇ? ಅಮ್ಮ ಏಕೆ ಹೀಗಾಡುತ್ತಾಳೆ ಎಂದು ಬೇಸರಪಟ್ಟುಕೊಳ್ಳುತ್ತಿದ್ದೆ. ಆದರೆ ಅಮ್ಮ ಹೇಳಿದ್ದು, ಚಿಂತಿಸಿದ್ದು ನೂರಕ್ಕೆ ನೂರು ಸರಿ ಅನ್ನಿಸುತ್ತಿದೆ! ಬೇಸರದಿಂದ ಹೊರಟ ನನ್ನ ಮಗಳನ್ನು ಹೇಗೆ ಸಮಾಧಾನಪಡಿಸುವುದು?' ಎಂದು ಚಿಂತಿಸುತ್ತಾ ಕುಳಿತೇ ಇದ್ದಳು ದೀಪಶ್ರೀ.

ಬಸ್‌ನಲ್ಲಿ ಕುಳಿತ ವಿದ್ಯಾಶ್ರೀ ಅಮ್ಮನ ಬಗ್ಗೆಯೇ ಯೋಚಿಸುತ್ತಿದ್ದಳು. 'ಹಿಂದೆ ಅಮ್ಮ ಮದುವೆ ಮಾಡಿಕೊಳ್ಳುವುದಿಲ್ಲ ಎಂದಿದ್ದಕ್ಕೆ, ಅಜ್ಜಿ ಹಠ ಹಿಡಿದು, ಕೊನೆಗೆ ಖಾಯಿಲೆ ಬಿದ್ದುಬಿಟ್ಟರಂತೆ. ಆಗ ಅಮ್ಮ ವಿಧಿ ಇಲ್ಲದೇ ಮದುವೆಗೆ ಒಪ್ಪಿದ್ದರಂತೆ! ಅಮ್ಮ ಎಷ್ಟೊಂದು ಪ್ರತಿಭಾವಂತೆಯಾಗಿದ್ದರು! ಮದುವೆಯಿಂದಾಗಿಯೇ ಅಮ್ಮನ ಆಸೆಗಳೆಲ್ಲಾ ಹಾಳಾಯಿತು. ಸಂಸ್ಕೃತ ಓದಿ ಕಾಲೇಜಿನಲ್ಲಿ ಉಪನ್ಯಾಸಕಿ ಆಗಿದ್ರು. ಅಮ್ಮನಿಗೆ ಪಾಠ ಮಾಡುವುದೆಂದರೆ ಬಹಳ ಇಷ್ಟ. ಯಾವತ್ತೂ ಕೆಲಸ ಬಿಡಬಾರದೆಂದುಕೊಂಡಿದ್ದರಂತೆ. ಹಾಗೇ ಭರತನಾಟ್ಯ ಕಲಾವಿದೆಯಾಗಿ ಹೆಸರು ಮಾಡಿದ್ದರು. ನನ್ನಮ್ಮ ಆ ದಿನಗಳಲ್ಲಿ ತುಂಬಾ ಚೆನ್ನಾಗಿ ಇದ್ದರಂತೆ. ಈಗಲೂ ಹಾಗೇ ಅಂದವಾಗಿ ಕಾಣುತ್ತಾರೆ! ಆದರೆ ಮದುವೆಯಿಂದಾಗಿ ಅಮ್ಮ ಎಷ್ಟೆಲ್ಲಾ ತ್ಯಾಗ ಮಾಡಬೇಕಾಯಿತು. ಅವರ ಹೆಸರಿನಂತೆಯೇ ದೀಪವಾಗಿ ಬೆಳಗಿ, ದೀಪದಡಿಯ ಕತ್ತಲಿನಲ್ಲಿ ತಾವು ಬದುಕು ಕಳೆದುಬಿಟ್ಟರು'. ಒಮ್ಮೆ ಜೋರಾಗಿ ನಿಟ್ಟುಸಿರಿಟ್ಟಳು ವಿದ್ಯಾಶ್ರೀ.

'ಸಿಟಿಯಲ್ಲಿ ಬೆಳೆದ ಅಮ್ಮ ಮದುವೆಯಾದ ಮೇಲೆ ಹಳ್ಳಿಗೆ ಬರಬೇಕಾಯಿತು. ಅಪ್ಪ ಹಳ್ಳಿಯಲ್ಲಿ ವ್ಯವಸಾಯ ಮಾಡುತ್ತಿದ್ದರು. ವಿದ್ಯಾಭ್ಯಾಸ ಮಾಡಿದ್ದರೂ, ಭೂಮಿ ತಾಯಿಯ ಸೇವೆಯಲ್ಲೇ ಕೃತಾರ್ಥರಾಗಿದ್ದರು. ಅಜ್ಜಿಯ ಆಸೆಯಂತೆ ಮದುವೆಯಾಗಿ, ತಮಗಿಷ್ಟವಾದ ಕೆಲಸವನ್ನೂ ಬಿಟ್ಟು ಅಮ್ಮ ಗಂಡನ ಮನೆಗೆ ಬಂದಿದ್ದರು. ಹಳ್ಳಿಯಲ್ಲಿ ಮನೆಗೆಲಸದ ಮಧ್ಯೆ ಬಂಧಿಯಾದರು. ಅಲ್ಲಿಯ ನಾಲ್ಕು ಗೋಡೆಗಳ ಮಧ್ಯೆ ಭರತನಾಟ್ಯ ಎಲ್ಲೋ ಮಾಯವಾಗಿತ್ತು! ತನಗಿಷ್ಟವಾದ ವೃತ್ತಿ-ಪ್ರವೃತ್ತಿ ಎರಡನ್ನೂ ಬಿಟ್ಟು ಅಮ್ಮ ಅಲ್ಲಿನ ವಾತಾವರಣಕ್ಕೆ ಹೇಗೆ ಹೊಂದಿಕೊಂಡರೋ? ಅಪ್ಪ ಏನೂ ನೃತ್ಯವನ್ನು ಮಾಡಬೇಡ ಎಂದಿರಲಿಲ್ಲ. ಆದರೆ ಅಮ್ಮನಿಗೇ ಪುರುಸೊತ್ತಾಗಲಿಲ್ಲವಂತೆ! ಜೊತೆಗೆ ಅಮ್ಮ ತಾವು ಕಲಿತ ವಿದ್ಯೆ ನಶಿಸಿಹೋಗಬಾರದೆಂದು, ನಂಗೆ ಮನೆಯಲ್ಲೇ ನೃತ್ಯ ಹೇಳಿಕೊಟ್ಟರು. ನಾನು ಭರತನಾಟ್ಯದಲ್ಲಿ ರ್‍ಯಾಂಕ್ ಪಡೆದು ಉತ್ತೀರ್ಣಳಾದೆ. ನನ್ನ ರಂಗಪ್ರವೇಶವೂ ಅಮ್ಮನ ಕನಸಾಗಿದೆ. ಬರೀ ತಮ್ಮ ಆಸೆಗಳನ್ನು ಮಾತ್ರ ಬಿಟ್ಟರೇ? ಅಮ್ಮ ಜೀವನದಲ್ಲಿ ಎಷ್ಟೆಷ್ಟೋ ಕಷ್ಟಗಳನ್ನು ಅನುಭವಿಸಿದರು.

ವ್ಯವಸಾಯದಿಂದ ಸಾಕು-ಬೇಕು ಎಂಬಂತೆ ಉತ್ಪತ್ತಿ ಬರುತ್ತಿತ್ತು. ಒಮ್ಮೆ ನೆರೆ ಹಾವಳಿಯಾಗಿ ಇರುವುದೆಲ್ಲಾ ಕೊಚ್ಚಿಕೊಂಡು ಹೋಗಿತ್ತು. ಪುಣ್ಯವಶಾತ್ ಆ ಸಮಯದಲ್ಲಿ ನಾವೆಲ್ಲಾ ಹಳ್ಳಿಯಲ್ಲಿರದೇ, ಹತ್ತಿರದವರ ಮದುವೆ ಎಂದು ತಾತನ ಮನೆಯಲ್ಲಿದ್ದೆವು. ಹಾಗಾಗಿ, ಜೀವ ಮಾತ್ರ ಉಳಿದಿತ್ತು, ಜೀವನ ಮೂರಾಬಟ್ಟೆಯಾಗಿತ್ತು. ನಾವು ಬದುಕಿರುವುದೇ ದೇವರ ದಯೆ ಎಂದು, ಇರುವುದನ್ನೆಲ್ಲಾ ಮಾರಿ ಪಟ್ಟಣಕ್ಕೆ ಬಂದೆವು. ಮತ್ತೆ ಅಮ್ಮ ಕೆಲಸ ಹುಡುಕಿದರು. ಅವರು ಪಾಠ ಮಾಡುತ್ತಿದ್ದ ಕಾಲೇಜಿನಲ್ಲೇ ನಮ್ಮನ್ನು ಶಾಲೆಗೆ ಸೇರಿಸಿದರು. ಅಪ್ಪ ದೊಡ್ಡ ಮಾಲ್‌ನಂಥ ಅಂಗಡಿಯಲ್ಲಿ ಬಿಲ್ ಹಾಕಲು ನಿಂತರು. ನನಗಿಷ್ಟವಾದ ಭೂತಾಯಿ ಸೇವೆ ಬಿಟ್ಟು ಬೇರೆ ಕಡೆ ಜೀತ ಮಾಡಬೇಕಾಯಿತು. ಇದಕ್ಕಿಂತ ನಾನು ಸತ್ತಿದ್ದರೇ ಚೆನ್ನಾಗಿರ್ತಿತ್ತು ಅಂತ ಬಹಳ ಚಿಂತಾಕ್ರಾಂತರಾಗಿದ್ದರಂತೆ. ಆದರೆ ಅಮ್ಮನಿಗಿದ್ದ ಜೀವನೋತ್ಸಾಹ ಬಹಳ ಉನ್ನತವಾದದ್ದು! ಅವರು ಸಂಸ್ಕೃತ ಕಲಿತು ಭಗವದ್ಗೀತೆ ಓದಿದ್ದರಿಂದಲೇ ಆ ರೀತಿ ಸ್ಥಿತಪ್ರಜ್ಞೆ ಬಂದಿತ್ತೇನೋ?! ನೀವು ಹಾಗೆಲ್ಲಾ ನೊಂದುಕೊಳ್ಳಬೇಡಿ, ನೀವು ಬದುಕಿದ್ದರೇನೇ ನನಗೆ ಮಾನಸಿಕವಾಗಿ ಧೈರ್ಯವಿರುತ್ತೆ. ನಾನೇ ದುಡಿದು ಎಲ್ಲವನ್ನೂ ನಿಭಾಯಿಸುತ್ತೇನೆ. ನಿಮಗೆ ಬೇರೆ ಕಡೆ ಕೆಲಸ ಮಾಡಲು ಇಷ್ಟವಾಗದೇ ಇದ್ರೆ ಬಿಟ್ಟುಬಿಡಿ ಎಂದಿದ್ದರಂತೆ. ಆಗ ಅಪ್ಪನೂ ಧೈರ್ಯ ತಂದುಕೊಂಡು, ದೇವರು ಇಟ್ಟ ಹಾಗಿರಲಿ ಜೀವನ ಎಂದಿದ್ದರಂತೆ.

ಅಮ್ಮ ದುಡಿಯುತ್ತಿದ್ದದ್ದು ಖಾಸಗಿ ಶಾಲೆಯಲ್ಲಿ. ಹಾಗಾಗಿ ಹೆಚ್ಚಿಗೆ ಸಂಬಳವೇನೂ ಬರುತ್ತಿರಲಿಲ್ಲ. ನಮಗೆ ಕಷ್ಟದಲ್ಲೂ ಹೇಗೆ ನಗುನಗುತ್ತಾ ಜೀವಿಸಬಹುದೆಂಬ ಪಾಠವನ್ನು ಹೇಳಿಕೊಡುತ್ತಿದ್ದರು. ಅಮ್ಮ ಚಿಕ್ಕ ಪುಟ್ಟ ಸನ್ನಿವೇಶಗಳಲ್ಲೇ ಸಂತೋಷವಾಗಿರುವಂತೆ ನೋಡಿಕೊಳ್ಳುತ್ತಿದ್ದರು. ತನ್ನ ಆಸೆ ಆಕಾಂಕ್ಷೆಗಳನ್ನೆಲ್ಲಾ ಮರೆತು, ಮಕ್ಕಳು ಸಂತೋಷವಾಗಿರುವಂತೆ ನೋಡಿಕೊಳ್ಳಲು ಹರಸಾಹಸ ಪಡುತ್ತಿದ್ದರು. ಎಷ್ಟರ ಮಟ್ಟಿಗೆ ಹಣವನ್ನು ಕೂಡಿಡುತ್ತಿದ್ದರೆಂದರೆ ನಮಗಿಂದು ಆಶ್ಚರ್ಯವಾಗುತ್ತದೆ. ಆಸ್ತಿ ಮಾರಿದ ಹಣದಲ್ಲಿ ಚಿಕ್ಕ ಸೈಟೊಂದನ್ನು ಕೊಂಡುಕೊಂಡು ಪುಟ್ಟ ಮನೆಯೊಂದನ್ನು ಕಟ್ಟಿಸಿದ್ದರು ಅಪ್ಪ. ಮನೆಗೆ ಬೇಕಾದ ಒಂದೊಂದೇ ಪದಾರ್ಥಗಳನ್ನು ವರ್ಷಕ್ಕೊಂದರಂತೆ ಜೋಡಿಸಿ, ಇವತ್ತಿಗೆ ಮನೆ ಪರಿಪೂರ್ಣವೆನಿಸುವಂತೆ ಮಾಡಿದ್ದಾರೆ ಅಮ್ಮ!

ಮನೆಗೆ ಬಂದ ಸ್ನೇಹಿತರಾಗಲೀ, ನೆಂಟರಾಗಲೀ, ನಮ್ಮನ್ನು ನೋಡಿ 'ಎಷ್ಟು ಸಂಸ್ಕಾರ ಕೊಟ್ಟು ಬೆಳೆಸಿದ್ದೀರ ಮಕ್ಕಳನ್ನ' ಎಂದಾಗ, ಅಮ್ಮನಿಗೆ ತೃಪ್ತಿಯೆನಿಸುತ್ತದೆ. ಈಗ ಮದುವೆ ಮಾಡಲು ಹೊರಟಿದ್ದಾರೆ. ಮತ್ತೆ ಎಲ್ಲಿ ಸಾಲ ತಲೆಯ ಮೇಲೆ ಹೇರಿಕೊಳ್ಳುತ್ತಾರೋ ಎಂಬ ಭಯ ನನಗೆ. ಅದಕ್ಕೇ ಸ್ವಲ್ಪ ವರ್ಷವಾದರೂ ದುಡಿದು ಅಮ್ಮ, ಅಪ್ಪನಿಗೆ ನೆರವಾಗೋಣವೆಂಬ ಆಸೆ ನನಗೆ. ಅಷ್ಟರಲ್ಲಿ ಕಂಪನಿ ಬಂದಿದ್ದರಿಂದ ಯೋಚನೆ ಬಿಟ್ಟು ಕೆಳಗಿಳಿದು ಹೊರಟಳು ವಿದ್ಯಾಶ್ರೀ.

ಸಂಜೆ ಕಂಪನಿಯಿಂದ ಬಂದಾಗ ತಮ್ಮ ಕೀಟಲೆ ಎಬ್ಬಿಸಿದ 'ಅಕ್ಕ ಅಮ್ಮ ಎಲ್ಲಾ ವಿಷಯಾನೂ ನಂಗೆ ಹೇಳಿದ್ರು ನೀನು ಬೇಗ ಮದ್ವೆ ಆಗು, ನಂಗೂ ಲೈನ್ ಕ್ಲಿಯರ್ ಆಗುತ್ತೆ'

'ಏ ಹೋಗೋ! ನಿಂದು ಒಳ್ಳೆ ತಮಾಷೆ ಆಯ್ತು! ನನ್ನ ಕಷ್ಟ ನಂಗೆ. ಅಮ್ಮ ನಂಗೆ ಒಂದು ವರ್ಷವಾದ್ರೂ ಕೆಲಸ ಮಾಡಕ್ಕೆ ಅವಕಾಶ ಕೊಡು. ನಂಗಿನ್ನೂ ಚಿಕ್ಕವಯಸ್ಸು. ಇಷ್ಟು ಬೇಗ ಮದ್ವೆ ಮಾಡಬೇಡ' ಎಂದು ಅಮ್ಮನ ಬಳಿ ಗೋಗರೆದಳು ವಿದ್ಯಾಶ್ರೀ.

'ಅಂಗೆ್ಯೀ, ಈಗ ಹುಡುಕಲು ಹೊರಟರೆ, ಈಗ್ಲೇ ಮದ್ವೆ ಆಗುತ್ಯೇ? ಅದೇ ವರ್ಷದ ತನಕ ಎಳೆಯಬಹುದು' ದೀಪಶ್ರೀ ಅವಲತ್ತುಕೊಂಡರು.

'ಇಲ್ಲಮ್ಮ ಅಪ್ಪಿ ತಪ್ಪಿ ಮೊದಲನೇ ಗಂಡೇ ಒಪ್ಪಿಗೆ ಆಗಿಬಿಟ್ರೆ?! ನಂಗೆ ಈಗಲೇ ಮದ್ವೆ ಬೇಡ' ಎಂದು ಖಡಾಖಂಡಿತವಾಗಿ ನುಡಿದಳು.

ನಾನು ಮಗಳು ಯೋಚಿಸುವಂತೆ ಯೋಚಿಸಬೇಕೋ? ಇಲ್ಲ ತಾಯಿ ಯೋಚಿಸಿದಂತೆ ಯೋಚಿಸಬೇಕೋ?! ಕಾಲಚಕ್ರ ಉರುಳಿದಂತೆ ಭಾವನೆಗಳು ಎಷ್ಟು ವ್ಯತ್ಯಾಸವಾಗುತ್ತದೆ. ಅಂದು ಅಮ್ಮ ಹೇಳಿದ್ದೆಲ್ಲಾ ಇಂದು ನನಗೆ ಸರಿಯೆನಿಸುತ್ತಿದೆ! ಆಗ ನಾನು, ನಾನೇನು ಅಮ್ಮನಿಗೆ ಹೊರೆಯೇ? ಅಮ್ಮ ಏಕೆ ಹೀಗಾಡುತ್ತಾಳೆ ಎಂದು ಬೇಸರಪಟ್ಟುಕೊಳ್ಳುತ್ತಿದ್ದೆ. ಆದರೆ ಅಮ್ಮ ಹೇಳಿದ್ದು, ಚಿಂತಿಸಿದ್ದು ನೂರಕ್ಕೆ ನೂರು ಸರಿ ಅನ್ನಿಸುತ್ತಿದೆ!

'ಈಗ ಹೇಗೋ ಸುಧಾರಿಸಿದ್ದೀವಿ, ಮತ್ತೆ ಮದ್ವೆ ಅಂತ ಸಾಲ ಮಾಡಬೇಕಾದ್ರೆ?' ವಿದ್ಯಾಶ್ರೀ ಕೇಳಿದಳು.

'ಅದಕ್ಕೆಲ್ಲಾ ವ್ಯವಸ್ಥೆ ಮಾಡಿಕೊಂಡಿದ್ದೀವಿ. ನೀನೇನೂ ಚಿಂತಿಸಬೇಕಾಗಿಲ್ಲ' ಎಂದರು. 'ಆಗಲಿ ಒಂದು ವರ್ಷ ಸುಮ್ಮನಿರುತ್ತೇನೆ.' 'ಸದ್ಯ ಬೀಸೋ ದೊಣ್ಣೆ ತಪ್ಪೀತು! ಅಮ್ಮ ನೀನಂತೂ ಮದ್ವೆ ಆದ ಮೇಲೆ ನೃತ್ಯ ಬಿಟ್ಟೆ ಆದ್ರೆನಾನು ಅದಕ್ಕೆಲ್ಲಾ ತಯಾರಾಗಿಲ್ಲ! ಮೊದಲೇ ಹೇಳೀನೇ ಮದ್ವೆ ಆಗೋದು' ಮತ್ತೆ ಕಂಡೀಷನ್ ಹಾಕಿದಳು.

'ಆಯ್ತು ಮಗಳೇ ಈಗ ಕಾಲ ಬದಲಾಗಿದೆ. ಖಂಡಿತ ನಿನ್ನ ಕಲೆಗೆ ಪ್ರೋತ್ಸಾಹ ಕೊಡೋರನ್ನೇ ಹುಡುಕೋಣ' ಎಂದರು. ಆಗ ವಿದ್ಯಾಶ್ರೀಗೆ ಸ್ವಲ್ಪ ಸಮಾಧಾನವಾಯಿತು.

ನಮ್ಮ ಕಸಿನ್ ಅಣ್ಣನಿಗೆ ಮದುವೆ ಮಾಡಲು ಹೋದಾಗ ಆದ ಅನುಭವ ನೆನೆಸಿಕೊಂಡ್ರೆ, ಹೆಣ್ಣು ಮಕ್ಕಳಿಗಿಂತ, ಗಂಡು ಮಕ್ಕಳಿಗೆ ಮದ್ವೆ ಮಾಡೋದೇ ಕಷ್ಟ ಎನ್ನುತ್ತಿದ್ದರು. ಅಮ್ಮನ ಅಕ್ಕ ಅವರು ಅಣ್ಣನಿಗೆ ಹುಡುಗಿ ನೋಡಲು ಹೋದಾಗಲೆಲ್ಲಾ ವಿಚಿತ್ರ ಅನುಭವ ಆಗುತ್ತಿತ್ತು. ಹುಡುಗಿ-ಹುಡುಗ ಮಾತನಾಡಲು ಹೊರಟರೆ, ಹುಡುಗಿಯರ ಕಂಡೀಷನ್ ಕೇಳಿ, ಕಣ್ ಬಾಯಿ ಬಿಡುವಂತಾಗಿತ್ತು. 'ಸ್ವಂತ ಮನೆ ಇದ್ಯಾ? ಸಂಬಳ ಎಷ್ಟು? ಓಡಾಡಲು ಕಾರಿದ್ಯಾ? ನಾನು ಕೆಲ್ಸ ಬಿಡಲ್ಲ, ನನ್ನ ಸಂಬಳ ನನ್ನ ಖರ್ಚಿಗೆ, ರಾಹು ಕೇತುಗಳು (ಅತ್ತೆ, ಮಾವ) ನಮ್ಮ ಜೊತೆ ಇರಲ್ಲ ತಾನೇ?!' ಎಂದು ಕೇಳುತ್ತಿದ್ದರು. ಇದನ್ನೆಲ್ಲಾ ಕೇಳಿ ಅಣ್ಣನಿಗೆ ಬೇಜಾರಾಗಿ, ಒಂಟಿಯಾಗೇ ಇದ್ದುಬಿಡುವುದು ಕ್ಷೇಮ ಎನ್ನುತ್ತಿದ್ದ.

ಇದನ್ನೆಲ್ಲಾ ನೋಡಿದಾಗ ಅಮ್ಮ, 'ನನ್ನ ಮಕ್ಕಳು ಹೀಗೆಲ್ಲಾ ಜೋರಿಲ್ಲ. ದೇವ್ರೆ ಇಬ್ಬರಿಗೂ ಒಳ್ಳೆ ಸಂಬಂಧ ಸಿಗುವ ಹಾಗೆ ಮಾಡು ಕೃಷ್ಣಾ!' ಎಂದು ದೇವರಲ್ಲಿ ಮೊರೆ ಹೋಗುತ್ತಿದ್ದರು.

'ರಾತ್ರಿ ಎಲ್ಲಾ ಎದ್ದು, ಕಣ್ಣು ಮುಚ್ಚಿ ಕೈ ಮುಗಿದು ಕುಳಿತೇ ಇರ್‍ತಾಳೆ ನಿಮ್ಮ ಅಮ್ಮ. ರಾತ್ರೀನೂ ದೇವ್ರಲ್ಲಿ ಬೇಡಿಕೆ ಇಡ್ತಾಳೆ ಅನ್ಸುತ್ತೆ ನಿನ್ನನ್ನು ಒಂದು ಒಳ್ಳೆ ಮನೆತನಕ್ಕೆ ಸೇರಿಸುವ ತನಕ ಅವಳು ವಿರಮಿಸುವುದಿಲ್ಲ' ಎಂದು ಅಪ್ಪ ಹೇಳಿದರೆ, ನನಗೂ, ತಮ್ಮನಿಗೂ ಆಶ್ಚರ್ಯವಾಗುತ್ತಿತ್ತು ಒಂದು ವರ್ಷ ಎಂಬುದು ಬಹಳ ಬೇಗ ಓಡಿ ಬಂದಿತ್ತು. ಅಮ್ಮ ಮತ್ತೆ ಮದುವೆ ಮಾಡಿಕೋ ಎಂದು ದುಂಬಾಲು ಬಿದ್ದರು.

'ಅಮ್ಮ ಈಗ್ತಾನೆ ಟ್ರೈನಿಂಗ್ ಪಿರಿಯಡ್ ಮುಗಿದಿದೆ, ಇನ್ನು ಕಂಪನಿಲಿ ಕೆಲ್ಸ ಕಂಟಿನ್ಯೂ ಆದ ಮೇಲೆ ಮದ್ವೆ ಆಗ್ತೀನಿ!' ಎಂದೆ.

ಅಮ್ಮನಿಗೆ ತುಂಬಾ ಕೋಪ ಬಂದಿತ್ತು 'ನಿನ್ನ ಪಾಡಿಗೆ ನೀನು ಕೆಲ್ಸಕ್ಕೆ ಹೋಗ್ತಾ ಇರು. ನನ್ನ ಪಾಡಿಗೆ ನಾನು ವರನ ಹುಡುಕಾಟ ಶುರು ಮಾಡ್ತೀನಿ!' ಎಂದರು.

ಅಮ್ಮ ಹೇಳಿದಂತೆ, ಅನುರೂಪನಾದ ವರನ **ಹುಡುಕಾಟದಲ್ಲಿ ಮತ್ತೆ ಒಂದು ವರ್ಷ ಕಳೆದಿತ್ತು. ಹುಡುಗ ಕೊಯಮತ್ತೂರಿನಲ್ಲಿ ಇರುವುದುತೆ. ನನ್ನ ಕಂಪನಿ ಅಲ್ಲೂ ಇದ್ದಿದ್ದರಿಂದ, ಕೆಲ್ಸ ಬಿಡಬೇಕಾಗಿಲ್ಲ ಎಂದು ಸಮಾಧಾನಪಟ್ಟುಕೊಂಡೆ. ಹುಡುಗನ ಬಳಿ ನಾನು ಮೊದಲು ಕೇಳಿದ್ದು 'ನಾನು ಭರತನಾಟ್ಯ ಕಲಾವಿದೆ. ನನ್ನ ಕಲೆಗೆ ಮುಂದೆಯೂ ಪ್ರೋತ್ಸಾಹ ಕೊಡಬೇಕು' ಎಂದು. ಹುಡುಗ ಅದಕ್ಕೆ ಒಪ್ಪಿದ್ದ. 'ತಮಿಳುನಾಡಾದ್ದರಿಂದ ನಿಮಗೆ ನೃತ್ಯದಲ್ಲಿ ಮುಂದು ವರೆಯಲು ಅನುಕೂಲವಿದೆ. ನಿಮ್ಮ ಕಂಪನಿ ಕೆಲ್ಸ, ನಾಟ್ಯ ಎಲ್ಲವನ್ನೂ ಮಾಡುವುದಾದ್ರೆ ನನ್ನ ಅಭ್ಯಂತರವೇನಿಲ್ಲ ಹಾಗೇ ಮನೆಗೆಲಸದಲ್ಲೂ ಸಹಾಯ ಮಾಡುತ್ತೇನೆ!' ಎಂದಾಗ ನನಗೆ ತುಂಬಾ ಖುಷಿ ಆಗಿತ್ತು ಮದುವೆ ಆದ ಮೇಲೆ ಊರಿನಲ್ಲೇ ಕೆಲಸ ಮುಂದುವರೆಸಲು ಕಂಪನಿಯವರು ಒಪ್ಪಿಕೊಂಡಿದ್ದರು. ಹುಡುಗನ ಮನೆಯವರೆಲ್ಲಾ ತುಂಬಾ ಸಂಸ್ಕಾರವಂತರು. ಹಾಗಾಗಿ ಹೂ ಎತ್ತಿದಷ್ಟು ಸುಲಭವಾಗಿ ನನ್ನ ಮದುವೆ ನಡೆದು ಹೋಯಿತು!**

ಮದುವೆಯಾಗಿ ಒಂದು ಸಂಸಾರದ ಜವಾಬ್ದಾರಿ ತೆಗೆದುಕೊಂಡಾಗ ನಂಗೆ ಅನ್ನಿಸುತ್ತೆ ಅಮ್ಮ ನಮಗೆ ಕಲಿಸಿದ ಪಾಠ, ಕಷ್ಟದಲ್ಲೂ ಜೀವನ ನಡೆಸಿದ್ದ ರೀತಿ, ಅವರ ಆತ್ಮಸ್ಥೈರ್ಯ, ಪ್ರತಿಯೊಂದು ಸನ್ನಿವೇಶವನ್ನೂ ಎದುರಿಸುತ್ತಿದ್ದ ರೀತಿ, ಎಲ್ಲಾ ನನಗೆ ವೇದ್ಯವಾಗಿತ್ತು. ಅದರಿಂದಾಗಿ ಒಂದು ಸಂಸಾರವನ್ನು ತೂಗಿಸುವುದು ಎಷ್ಟು ಸುಲಭ ಎನಿಸುತ್ತಿತ್ತು!

'ಅಮ್ಮ ನೀನು ಮದ್ವೆ ಆದ ಮೇಲೆ, ನಿನ್ನ ಎಲ್ಲಾ ಆಸೆ, ಕನಸುಗಳನ್ನು ತ್ಯಾಗ ಮಾಡಿದೆಯಲ್ಲ, ನಿಂಗೆ ಒಂದು ಸಾರೀನಾದ್ರೂ ಬೇಜಾರಾಗಲಿಲ್ಲವಾ?!' ಎಂದು ಹಿಂದೆ ಒಂದು ಸಾರಿ ಕೇಳಿದ್ದೆ.

'ತ್ಯಾಗಾನಾ? ಯಾರಿಗೋಸ್ಕರ ಮಾಡಿದೆ ಮಗಳೆ? ನನ್ನ ಗಂಡ ಮಕ್ಕಳಿಗಾಗಿ! ಬೇರೆ ಯಾರಿಗೋ ಅಲ್ಲವಲ್ಲ? ಇದನ್ನು ತ್ಯಾಗ ಅಂತ ಅನ್ನಬಾರದು, ಕರ್ತವ್ಯ ಅನ್ನಬೇಕು. ನಿಮ್ಮೆಲ್ಲರ ಸಂತೋಷವೇ ನನ್ನ ಸಂತೋಷ. ಎಲ್ಲಾ ತಾಯಂದಿರೂ ಇದನ್ನೇ ಮಾಡೋದು. ಇದರಲ್ಲಿ ನನ್ನ ಒಬ್ಬಳ ವಿಶೇಷತೆ ಏನೂ ಇಲ್ಲ!' ಎಂದಿದ್ದರು.


'ಎಂಥಾ ಉನ್ನತ ವಿಚಾರ! ನಿಜ. ಇದೇ ನಮ್ಮ ಭಾರತೀಯ ಸಂಸ್ಕೃತಿ ಅಲ್ಲವೇ? ಅಮ್ಮ ತನ್ನ ಇಬ್ಬರು ಮಕ್ಕಳಿಗೂ ಕೋಟೆಯಾಗಿ ನಿಂತು ಬೆಳೆಸಿದರು. ಅವರು ಮಾಡಿದ್ದು ತ್ಯಾಗ ಅಂತ ನಮಗೆಗೊತ್ತು ಆದರೆ ಅದಕ್ಕೆ ಅವರು ಕರ್ತವ್ಯ ಅಂತ ಹೆಸರಿಟ್ಟರು. ನನಗೆ ಇಷ್ಟು ಒಳ್ಳೆ ಸಂಸ್ಕಾರ ಕೊಟ್ಟು ಬೆಳೆಸಿದ್ದರಿಂದ, ಗಂಡನ ಮನೆಯಲ್ಲೂ ಹೊಗಳಿಸಿಕೊಳ್ಳುವಂತಾಯಿತು. ಇಷ್ಟೆಲ್ಲಾ ಮಾಡಿದ ಅಮ್ಮನನ್ನು ಏನೆಂದು ಕರೆಯಬೇಕು? ಅವಳ ಪ್ರೀತಿ, ಮಮತೆ, ತ್ಯಾಗ, ವಾತ್ಸಲ್ಯಕ್ಕೆ ಯಾವ ಹೆಸರು ಹೊಂದಿಕೆಯಾಗುತ್ತೆ? ಇಲ್ಲಿ ಇದಕ್ಕೆ ಯಾವುದೇ ಪದವಿಲ್ಲ' ಆಗ ಕವಿಯೊಬ್ಬರು ಬರೆದ ಕವನದ ಸಾಲು ನೆನಪಾಯಿತು. 'ನಿನಗೆ ಬೇರೆ ಹೆಸರು ಬೇಕೇ? ಸ್ತ್ರೀ.... ಎಂದರೆ ಅಷ್ಟೇ ಸಾಕೆ' ವಿದ್ಯಾಶ್ರೀ ಮನಸ್ಸು ತೃಪ್ತಿಯಿಂದ ನಗುತ್ತಿತ್ತು. ■

ವಾರ್ಷಿಕ ಕಥಾ ಸ್ಪರ್ಧೆಯಲ್ಲಿ ಸಮಾಧಾನಕರ ಬಹುಮಾನ ಪಡೆದ ಕಥೆ



ಕಥೆಗಾರ್ತಿ : ಆರ್.ಸಿ.ಅನುರಾಧ
ಕಥೆ : ಸ್ತ್ರೀ ಎಂದರೆ ಅಷ್ಟೇ ಸಾಕೆ...!
ಮೊಬೈಲ್ 9242157590

ವಾರ ಭವಿಷ್ಯ



15.05.2022 ರಿಂದ 21.05.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ
ರವಿ-ವೃಷಭ, ಚಂದ್ರ-ತುಲಾ, ವೃಶ್ಚಿಕ, ಧನಸ್ಸು, ಮಕರ, ಕುಜ-ಕುಂಭ, ಮೀನ, ಬುಧ-ವೃಷಭ, ಗುರು-ಮೀನ, ಶುಕ್ರ-ಮೀನ, ಶನಿ-ಕುಂಭ, ರಾಹು-ಮೇಷ ಮತ್ತು ಕೇತು-ತುಲಾ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು". ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ. ವಿಳಾಸ : 533, 6ನೇ ಕ್ರಾಸ್, ಬೋಗಾದಿ ಉತ್ತರ 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ. ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ವಾರದಾರಂಭಕ್ಕೆ ವಿಲಾಸಿ ವಸ್ತುಗಳ ಖರೀದಿಯ ಜೊತೆಗೆ ದೇಹ ಸೌಖ್ಯ. ಜನಸೇವಾ ಕೆಲಸಗಳಿಂದ ಕೀರ್ತಿ, ಸನ್ಮಾನಗಳು. ಶ್ರೀಮತಿಯೊಂದಿಗೆ ಸರಸ-ವಿರಸಗಳು ಸಮವಾಗಿ ನಡೆದೀತು. ಗುರು ಮಾರ್ಗದರ್ಶನ ದೊರೆತು ಜೀವನೋಪಾಯ ಸುಗಮವಾಗಲಿದೆ. ಸಾಲಕೊಟ್ಟು ಕಳೆದುಕೊಳ್ಳಬೇಡಿ. ಬೇಡದಕ್ಕೆ ಹಣ ಅಪವ್ಯಯವಾಗುವುದು. ಮನೆಯಲ್ಲಿ ಹಿರಿಯರ ಆರೋಗ್ಯಕ್ಕೆ ಕುಂದು. ನಿಮಗೆ ಸ್ನಾಯು ಸೆಳೆತ ಕಾಡಬಹುದು. - ಶ್ರೀ ಅರಳಿವೃಕ್ಷ ಪ್ರದಕ್ಷಿಣೆ, ಶುಭಸಂಖ್ಯೆ-1.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಧನ-ಧಾನ್ಯ ವೃದ್ಧಿ, ನೂತನ ವಸ್ತ್ರಲಾಭ, ಪ್ರಿಯ ಜನರ ಸಹವಾಸ. ಮನಸ್ಸಿಗೆ ಉಲ್ಲಾಸ. ಮಹತ್ವಾಕಾಂಕ್ಷೆ ಯೋಜನೆಗಳು ಕಾರ್ಯರೂಪಕ್ಕೆ ಬರುವಲ್ಲಿ ಗುರುಗ್ರಹದ ಕೃಪೆಯಿದೆ. ನೌಕರವರ್ಗದವರಿಗೆ ವರ್ಗಾವಣೆ ಭೀತಿ. ಹಿರಿಯ ಅಧಿಕಾರಿಗಳ ಅವಕೃಪೆ. 'ಮಾತೇ ಮುತ್ತು-ಮಾತೇ ಮೃತ್ಯು' ಇದನ್ನರಿತು ನಡೆಯಿರಿ. ವಾರಾಂತ್ಯಕ್ಕೆ ಕುಟುಂಬ ಸಮೇತ ಪುಣ್ಯಕ್ಷೇತ್ರ ಸಂದರ್ಶನ. ನೀರಿನ ಹತ್ತಿರ ಹುಡುಗಾಟ ಬೇಡ.
- ಶ್ರೀಚಾಮುಂಡೇಶ್ವರಿ ದರ್ಶನ, ಶುಭಸಂಖ್ಯೆ-3.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ವಾರದಾರಂಭಕ್ಕೆ ಧನಾಗಮವೂ, ಆರೋಗ್ಯದಲ್ಲಿ ಸುಧಾರಣೆಯೂ, ಸ್ತ್ರೀ ಸೌಖ್ಯವು ಕಾಣಬರುತ್ತದೆ. ದೂರ ಪ್ರಯಾಣಗಳು ಉಂಟಾದೀತು. ಪುಣ್ಯ ಕೆಲಸಗಳಲ್ಲಿ ಭಾಜನರಾಗುವಿರಿ. ರಾಜಕಾರಿಣಿಗಳಿಗೆ ಅಪವಾದಗಳು ತಟ್ಟುವುದು. ನ್ಯಾಯಾಲಯ ವಿಚಾರಗಳಲ್ಲಿ ಹಿನ್ನಡೆ ಉಂಟಾಗುವುದು. ಬಂಧು ಜನರಲ್ಲಿ ಕಲಹದಿಂದ ಮನಸ್ಸಿಗೆ ಕಸಿವಿಸಿ. ವಾರದ ಕಡೆಗೆ ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯುವುದು. ಪಿತ್ತಜನಿತ ಕಾಯಿಲೆ ಕಾಡುವುದು. - ಶ್ರೀ ವಿಷ್ಣು ಪೂಜನ, ಶುಭಸಂಖ್ಯೆ-6.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)
ಮನೆ-ಮನಗಳಲ್ಲಿ ಸಂತಸದ ವಾತಾವರಣ. ಮಂಗಳ ಕಾರ್ಯಕ್ಕೆ ನಾಂದಿ. ನಿರೀಕ್ಷಿತ ಹಣ ಕೈ ಸೇರುವುದರೊಂದಿಗೆ ವಾರಕ್ಕೆ ಸ್ವಾಗತ. ಕಚೇರಿ ಕೆಲಸಗಳು ಸುಸೂತ್ರವಾಗಿ ಸಾಗುವುದು. ವಧು-ವರ ಅನ್ವೇಷಣೆ ಫಲಪ್ರದವಾಗುವುದು. ವಾರಮಧ್ಯೆ ಸಂಬಂಧಿಕರ ಮಿಲನ, ಸಂತೋಷ ಕೂಟಗಳು ಜರುಗಲಿದೆ. ಮಕ್ಕಳ ಸಾಧನೆಯಿಂದ ಹೆಮ್ಮೆ ಪಡುವಿರಿ. ದೀನರಿಗೆ ಸಹಾಯ ಮಾಡಿ ಆತ್ಮಸಂತೋಷ, ಪುಣ್ಯಸ್ಥಳ ಭೇಟಿಯೊಂದಿಗೆ ವಾರಕ್ಕೆ ತೆರೆ. - ಶ್ರೀ ಲಕ್ಷ್ಮೀ ಉಪಾಸನೆ, ಶುಭಸಂಖ್ಯೆ-7.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ಸಪ್ತಾಹದ ಆರಂಭಕ್ಕೆ ಮನಸ್ಸಿಗೆ ಮುದ ನೀಡುವ ಸಂಗತಿಗಳು. ಗಣ್ಯವ್ಯಕ್ತಿಗಳ ಸಂಪರ್ಕದಿಂದ ಕಾರ್ಯಸಾಧನೆ. ಸರ್ಕಾರಿ ನೌಕರರು ಅಕ್ರಮ ವ್ಯವಹಾರಗಳಿಂದ ದೂರವಿದ್ದರೆ ಕ್ಷೇಮ. ಗುರು-ಶನಿ ಅಶುಭರಿದ್ದಾರೆ. ನಿಮ್ಮ ಆರೋಗ್ಯದ ಕಡೆ ಎಚ್ಚರವಹಿಸಿ. ಗೃಹಶಾಂತಿಗೆ ಭಂಗವಾಗದಂತೆ ಪರಸ್ಪರ ಸೋತು-ಗೆಲ್ಲಿ, ಹಣಕಾಸು ವ್ಯವಹಾರಗಳನ್ನು ಅನುಭವಿಗಳ ಮಾರ್ಗದರ್ಶನದಲ್ಲಿ ಮಾಡಿ.
- ಶ್ರೀ ಆಂಜನೇಯ ಮೂಲಮಂತ್ರ ಜಪಿಸಿ, ಶುಭಸಂಖ್ಯೆ-8

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ವಾರದಾರಂಭಕ್ಕೆ ಹಲವು ಮೂಲಗಳಿಂದ ಧನ ಸಂಪಾದನೆಯಾಗುವ ಅವಕಾಶವಿದೆ. ಕೈಗೊಂಡ ಕೆಲಸ ಕಾರ್ಯಗಳು ಪ್ರಗತಿಯ ಹಾದಿಯಲ್ಲಿ ಸಾಗುವುದು. ಮಹತ್ವದ ಯೋಜನೆಗೆ ಬ್ಯಾಂಕ್ ಸಾಲಕ್ಕೆ ಪ್ರಯತ್ನಿಸಬಹುದು. ಅಧ್ಯಾಪಕ ವೃತ್ತಿಯಲ್ಲಿರುವವರಿಗೆ ಗೌರವ, ಪ್ರಶಸ್ತಿಗಳು ದೊರೆಯುವುದು. ರಾಜಕಾರಿಣಿಗಳಿಗೆ ಕಾನೂನಾತ್ಮಕ ತೊಡಕುಗಳು ಎದುರಾಗುವುದು. ಉಷ್ಣಜನಿತ ಕಾಯಿಲೆ ಕಾಡಬಹುದು.
- ಶ್ರೀಸೂರ್ಯನಾರಾಯಣ ಸ್ತುತಿ, ಶುಭಸಂಖ್ಯೆ-9.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಸಪ್ತಾಹದ ಆದಿಗೆ ನಿಮ್ಮ ರಾಶಿಗೆ ಪ್ರವೇಶ ಮಾಡುವ ಚಂದ್ರನಿಂದ ಇಷ್ಟ ಕಾರ್ಯ ಸಿದ್ಧಿ. ಉತ್ತಮ ಆಹಾರ-ವಿಹಾರಗಳಿಂದಾಗಿ ಉಲ್ಲಸಿತರಾಗಿರುತ್ತೀರ. ಆಕಸ್ಮಿಕ ಧನ ಪ್ರಾಪ್ತಿ ಆಗಬಹುದು. ಜನಸೇವಾ ಕಾರ್ಯಗಳಿಂದ ಮೆಚ್ಚುಗೆಗೆ ಪಾತ್ರರಾಗುವಿರಿ. ರಾಜಕೀಯ ರಂಗದವರು ಗುಪ್ತ ಕಾರ್ಯವೆಸಗಿ ಹಿನ್ನಡೆ ಅನುಭವಿಸುವರು. ದುಡುಕು ನಿರ್ಧಾರಗಳಿಂದ ಧನ ನಷ್ಟ ಅನುಭವಿಸಬೇಕಾದೀತು.
- ಶ್ರೀರಾಜರಾಜೇಶ್ವರಿ ಅಷ್ಟಕ ಪಠಿಸಿ, ಶುಭಸಂಖ್ಯೆ-5.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ)
ಸಾಮಾಜಿಕ ಆಗು ಹೋಗುಗಳು ನಿಮಂದುಕೊಂಡಂತೆ ಸಾಗುತ್ತವೆ. ಸಂಪತ್ತು, ಸೌಭಾಗ್ಯಗಳನ್ನು ಹೊಂದಲು ಶ್ರೀಗುರುವಿ ಕೃಪೆಯಿಂದ ಹಳೆಯ ಆಪ್ತಮಿತ್ರರ ಭೇಟಿಯಿಂದ ಸಂತಸ. ಪಂಚಮ ಶನಿಯಿಂದ ಶತ್ರುಗಳ ಉಪಟಳ, ನ್ಯಾಯಾಲಯ ವ್ಯವಹಾರದಲ್ಲಿ ಹಿನ್ನಡೆಯಾದೀತು. ಸ್ಪರ್ಧಾತ್ಮಕ ಪರೀಕ್ಷೆ ವಿಷಯದಲ್ಲಿ ಮರಳಿಯತ್ನವನ್ನು ಮಾಡಬೇಕಾದೀತು. ಅನ್ಯ ಸ್ತ್ರೀಯರನ್ನು ಗೌರವದಿಂದ ಕಾಣಿ. - ಶ್ರೀ ನೃಸಿಂಹ ಸ್ತೋತ್ರ ಪಠಿಸಿ, ಶುಭಸಂಖ್ಯೆ-4.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಧನಾತ್ಮಕವಾಗಿ ಚಿಂತಿಸುವವರಿಗೆ ಅಭಿವೃದ್ಧಿಯ ಪಥ ತೆರೆದುಕೊಳ್ಳುತ್ತದೆ. ನೂತನ ಉದ್ಯಮ, ಗೃಹಾರಂಭ ಕೆಲಸಗಳನ್ನು ಆರಂಭಿಸಲು ಗ್ರಹಾನುಕೂಲವಿದೆ. ವಾರಪೂರ್ತಿ ಚಟುವಟಿಕೆಯಿಂದ ಕೂಡಿರುವಿರಿ. ಅದರಿಂದ ದೇಹಕ್ಕೆ ಬಳಲಿಕೆಯೂ ಆಗುವುದು. ವಯಸ್ಸಿಗೆ ಬಂದ ಮಕ್ಕಳು ಸಮಾಜ ಘಾತುಕ ಶಕ್ತಿಗಳಿಂದ ದೂರವಿದ್ದರೆ ಕ್ಷೇಮ, ವಾರಾಂತ್ಯಕ್ಕೆ ಮನೆ ದೇವರ ದರ್ಶನದಿಂದ ಮಾನಸಿಕ ಶಾಂತಿ.
-ಶ್ರೀಶಿರಡಿಸಾಯಿ ಸೇವೆ, ಶುಭಸಂಖ್ಯೆ-2.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ವಾರದ ಆದಿಗೆ ಸಾಮಾಜಿಕ ಚಟುವಟಿಕೆಗಳಿಂದ ಜನಮನ್ನಣೆಗೆ ಪಾತ್ರರಾಗುವಿರಿ. 'ಬೆಳ್ಳಗಿರುವುದೆಲ್ಲಾ ಹಾಲಲ್ಲ', ಅಪರಿಚಿತರನ್ನು ನಂಬಿ ಮೋಸಹೋಗಬೇಡಿ. ಸಜ್ಜನರ ಸಂಗ ನಿಮ್ಮ ಶ್ರೇಯಸ್ಸಿಗೆ ಪೂರಕವಾಗುವುದು. ಖರ್ಚುಗಳು ಕೈ ಮೀರಿದರೂ ಸಮಯಕ್ಕೆ ಹಣ ಒದಗುತ್ತದೆ. ಆರೋಗ್ಯದ ಕಡೆ ಗಮನಕೊಡದಷ್ಟು ಬ್ಯೂಸಿಯಾಗಬೇಡಿ, ಶ್ರೀಮತಿಯೊಂದಿಗೆ ವಿವಾದಗಳು ಬೇಡವೇ ಬೇಡ.
- ಶಿವ ಪಂಚಾಕ್ಷರಿ ಜಪಿಸಿ, ಶುಭಸಂಖ್ಯೆ-4.


ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ವಾರದಾರಂಭಕ್ಕೆ ಸುಖ ಸಾಧನಗಳು ಪ್ರಾಪ್ತವಾಗುತ್ತದೆ. ಮಾಡುವ ಕೆಲಸಕ್ಕೆ ಸರಿಯಾದ ಪ್ರತಿಫಲ ದೊರೆಯುವುದು. ಅಧಿಕಾರಿಗಳ ದರ್ಶನದಿಂದ ಮನೋಭೀಷ್ಟಗಳು ಈಡೇರುವುದು. ನಿವೇಶನ, ಗೃಹ ಹೊಂದಲು ಗುರುಬಲವಿದೆ. ಪ್ರಯತ್ನಿಸಬಹುದು. ವಿವಾಹಾಕಾಂಕ್ಷಿಗಳಿಗೆ ಸೂಕ್ತ ಜೋಡಿ ಲಭಿಸುವ ಸಾಧ್ಯತೆ ಇದೆ. ವೈಯಕ್ತಿಕ ಕೆಲಸ ಕಾರ್ಯಗಳಲ್ಲಿ ಸಮಯ ಪಾಲನೆ ಮಾಡಿ. ವಾತ ಸಂಬಂಧಿ ಕಾಯಿಲೆ ಕಾಡಬಹುದು.
- ಶ್ರೀ ವೆಂಕಟೇಶ್ವರ ದರ್ಶನ, ಶುಭಸಂಖ್ಯೆ-1.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ದೇವರು ವರ ಕೊಟ್ಟರೂ ಪೂಜಾರಿ ಕೊಡ ಎಂಬಂತೆ ಆಗಿದೆ ನಿಮ್ಮ ಪರಿಸ್ಥಿತಿ. ಆದಾಯಕ್ಕೇನು ಕೊರತೆ ಇರದು. ಚಿಂತಿಸಬೇಡಿ. ಸಾಗರೋತ್ಪನ್ನ ವಸ್ತು ವ್ಯಾಪಾರಿಗಳಿಗೆ ಕೈ ತುಂಬ ಹಣ ಬರುವುದು. ವ್ಯಯಸ್ಥಿತ ಶನಿ ದೇವನಿಂದ ಮನೆಯಲ್ಲಿ ಅಸಮಾಧಾನದ ವಾತಾವರಣ ಉಂಟಾಗುವುದು. ಸಂಯಮದಿಂದ ನಿಭಾಯಿಸಿ. ಹಿರಿಯರ ಮಾರ್ಗದರ್ಶನ ಪಡೆಯಿರಿ. 'ಗುಲಾಬಿ ಇದ್ದಲ್ಲಿ ಮುಳ್ಳು ಇದ್ದೇ ಇರುತ್ತದೆ'.
- ಶ್ರೀ ಮಂತ್ರಾಲಯ ಪ್ರಭುಗಳ ಸೇವೆ, ಶುಭಸಂಖ್ಯೆ-3.

ಮಕ್ಕಳ ಚಿತ್ರ ಕಥೆ

'ನಗುವಿನ ಮಹತ್ವ'...!


-ಹೆಚ್.ಜಿ.ಎನ್.ಪ್ರಸಾದ್, ಮೊ: 9845376199



ಮೈಸೂರು ಮಿತ್ರ ಭಾನುವಾರ 15 ಮೇ 2022

ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ

ಹೆಚ್.ಡಿ.ಕೋಟೆಯಲ್ಲಿ ಉಸ್ತುವಾರಿ ಸಚಿವರಿಂದ ಬಿರುಸಿನ ಪ್ರಚಾರ



ಹೆಚ್.ಡಿ.ಕೋಟೆ, ಮೇ 14(ಮಂಜು)– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ ರಂಗೇರಿದ್ದು, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಬಿಜೆಪಿ ಅಭ್ಯರ್ಥಿ ಪರ ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಶನಿವಾರ ಬಿರುಸಿನ ಪ್ರಚಾರ ನಡೆಸಿದರು.

ಆಲನಹಳ್ಳಿ, ಹೆಚ್.ಡಿ.ಕೋಟೆ, ಸರಗೂರು, ಮಾದಾಪುರ, ಅಂತರಸಂತೆ ಸೇರಿದಂತೆ ಹಲವೆಡೆ ಪದವೀಧರರು, ಶಿಕ್ಷಕರು, ಸಂಘಟನೆಗಳ ಮುಖಂಡರ ಜೊತೆ ಸಭೆ ನಡೆಸಿದ ಸಚಿವರು, ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರನ್ನು ಬೆಂಬಲಿಸುವಂತೆ ಮನವಿ ಮಾಡಿದರು.

ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ನಡೆಯಲಿರುವ ಚುನಾವಣೆಯಲ್ಲಿ ನಮ್ಮ ಅಭ್ಯರ್ಥಿ ಮೈ.ವಿ.ರವಿಶಂಕರ್ ಗೆಲುವು ನೂರಕ್ಕೆ ನೂರರಷ್ಟು ನಿಶ್ಚಿತ. ಇದೂ ಸೇರಿದಂತೆ ರಾಜ್ಯದಲ್ಲಿ ಶಿಕ್ಷಕರ ಮತ್ತು ಪದವೀಧರರ ಕ್ಷೇತ್ರದ ಒಟ್ಟು ನಾಲ್ಕು ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು, ಎಲ್ಲಾ ಕ್ಷೇತ್ರದಲ್ಲೂ ಬಿಜೆಪಿ ಗೆಲುವು ದಾಖಲಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಜಿಲ್ಲೆಯ ಎಲ್ಲಾ ಪದಾಧಿಕಾರಿಗಳು ಒಮ್ಮತದಿಂದ ಮೈ.ವಿ.ರವಿಶಂಕರ್ ಅವರನ್ನು ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಲಾಗಿದೆ. ಪಕ್ಷದ ನಿಷ್ಠಾವಂತ ಮುಖಂಡ ರವಿಶಂಕರ್, ಕಳೆದ ಚುನಾವಣೆಯಲ್ಲಿ ಅಲ್ಪ ಮತಗಳಿಂದ ಪರಾಭವಗೊಂಡಿದ್ದರು. ನಂತರ ಹತಾಶರಾಗದೆ ನಾಲ್ಕು ಜಿಲ್ಲೆಗಳ ಮುಖಂಡರು ಹಾಗೂ ಕಾರ್ಯಕರ್ತರು, ಜನಸಾಮಾನ್ಯರೊಂದಿಗೆ ಉತ್ತಮ ಒಡನಾಟ ಉಳಿಸಿಕೊಂಡು, ಸಂಘಟನೆ ಮಾಡಿದ್ದಾರೆ. ಪದವೀಧರರ ಸಮಸ್ಯೆಗಳ ಬಗ್ಗೆ ಅರಿತು, ವಿಧಾನಪರಿಷತ್‌ನಲ್ಲಿ ಧ್ವನಿ ಎತ್ತುವ ಜೊತೆಗೆ ಸರ್ಕಾರದಿಂದ ಪರಿಹಾರ ಕಲ್ಪಿಸುವ ಸಾಮರ್ಥ್ಯ ರವಿಶಂಕರ್‌ಗಿದೆ ಎಂದರು.

ಮೈಸೂರು ಜಿಲ್ಲೆಯಲ್ಲಿ ಪಕ್ಷದಿಂದ 60 ಸಾವಿರಕ್ಕಿಂತ ಹೆಚ್ಚು ಪದವೀಧರ ಮತದಾರ ನೋಂದಣಿ ಮಾಡಲಾಗಿದೆ. ಪಕ್ಷದ ಸ್ಪಷ್ಟ ಸೂಚನೆ ಹಿನ್ನೆಲೆ ಒಂದು ವರ್ಷದಿಂದಲೇ ನೋಂದಣಿ ಕಾರ್ಯ ನಡೆಸಲಾಗಿದೆ. ಈ ವೇಳೆ ಶಿಕ್ಷಕರು ಕೆಲವು ಸಮಸ್ಯೆಗಳನ್ನು ಗಮನಕ್ಕೆ ತಂದಿದ್ದಾರೆ. ಮೇ 23 ಹಾಗೂ 24ಕ್ಕೆ ಶಿಕ್ಷಣ ಸಚಿವರು ಮೈಸೂರಿಗೆ ಭೇಟಿ ನೀಡಲಿದ್ದು, ಆ ವೇಳೆ ಶಿಕ್ಷಕರ ಸಮಸ್ಯೆಗಳ ಪರಿಹಾರಕ್ಕೆ ಕ್ರಮ ವಹಿಸುವ ಬಗ್ಗೆ ಮಾತನಾಡಲಿದ್ದಾರೆ ಎಂದು ತಿಳಿಸಿದರು.

ಹಾಸನದಲ್ಲಿ ಶಾಸಕ ಪ್ರೀತಂ ಜಿ.ಗೌಡ, ಮಂಡ್ಯದಲ್ಲಿ ಸಚಿವರಾದ ಗೋಪಾಲಯ್ಯ, ನಾರಾಯಣಗೌಡ, ಚಾಮರಾಜನಗರದಲ್ಲಿ ಸಚಿವ ವಿ.ಸೋಮಣ್ಣನವರು ಪ್ರಚಾರ ನಡೆಸುತ್ತಿದ್ದಾರೆ. ಕಳೆದ ಚುನಾವಣೆ ವೇಳೆ ರಾಜ್ಯ ಹಾಗೂ ಕೇಂದ್ರದಲ್ಲಿ ಬಿಜೆಪಿ ಅಧಿಕಾರದಲ್ಲಿ ಇರಲಿಲ್ಲ. ಈ ಬಾರಿ ಎರಡು ಕಡೆ ನಮ್ಮ ಪಕ್ಷವೇ ಜನಪರ ಆಡಳಿತ ನೀಡುತ್ತಿದೆ. ಹಾಗಾಗಿ ಮೈ.ವಿ.ರವಿಶಂಕರ್ ಗೆಲುವು ನಿಶ್ಚಿತ ಎಂದು ವಿಶ್ವಾಸದಿಂದ ನುಡಿದರು.

ಗೋ.ಮಧುಸೂದನ್ ಬರಲಿದ್ದಾರೆ: ಮೈ.ವಿ.ರವಿಶಂಕರ್ ಅವರ ಗೆಲುವಿಗಾಗಿ ಎಲ್ಲರೂ ಪ್ರಚಾರ ಕಾರ್ಯದಲ್ಲಿ ತೊಡಗಿಕೊಳ್ಳಲಿದ್ದಾರೆ. ಗೋ. ಮಧುಸೂದನ್ ಕೂಡ ಪ್ರಚಾರದಲ್ಲಿ ಭಾಗವಹಿಸಲಿದ್ದಾರೆ. ಅವರನ್ನು ವೈಯಕ್ತಿಕವಾಗಿ ನಾನು ಭೇಟಿ ಮಾಡಿದ್ದು, ರವಿಶಂಕರ್ ಪರ ಮತಯಾಚನೆ ಮಾಡಲಿದ್ದಾರೆ ಎಂದು ಸಚಿವ ಎಸ್.ಟಿ.ಸೋಮಶೇಖರ್ ಇದೇ ವೇಳೆ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಆಕಸ್ಮಿಕ ಬೆಂಕಿಯಿಂದ ತೆಂಗಿನಮಟ್ಟೆ ಭಸ್ಮ; ತಪ್ಪಿದ ಭಾರೀ ಅನಾಹುತ

ಪಿರಿಯಾಪಟ್ಟಣ, ಮೇ 14(ವೀರೇಶ್)– ಆಕಸ್ಮಿಕ ಬೆಂಕಿ ತಗುಲಿ ಮನೆಯ ಮಹಡಿಯ ಮೇಲೆ ಸಂಗ್ರಹಿಸಿದ್ದ ತೆಂಗಿನ ಮಟ್ಟೆ ರಾಶಿ ಭಸ್ಮವಾಗಿದ್ದು, ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕಾಗಮಿಸಿ ಬೆಂಕಿ ನಂದಿಸಿ ನೆರೆ ಮನೆಗಳಿಗೆ ಹಾನಿಯಾಗುವುದನ್ನು ತಪ್ಪಿಸಿದ್ದಾರೆ.

ಪಟ್ಟಣದ ಟ್ಯಾಂಕ್ ಬಡಾವಣೆ ನಿವಾಸಿ ಇರ್ಷಾದ್ ಬಾನು ಅವರ ಆರ್‌ಸಿಸಿ ಮನೆಯ ಮೇಲೆ ತೆಂಗಿನಮಟ್ಟೆಗಳನ್ನು ಸಂಗ್ರಹಿಸಿ ಇಡಲಾಗಿತ್ತು. ಬುಧವಾರ ಬೆಳಗ್ಗೆ ಸ್ನಾನದ ಮನೆಯ ಹೊಗೆಯ ಪೈಪ್‌ನ ಕಿಡಿ ಹಾರಿ ತೆಂಗಿನಮಟ್ಟೆ ರಾಶಿಗೆ ಬಿದ್ದಿದೆ. ಇದರಿಂದ ಬೆಂಕಿ ಆವರಿಸಿ ಕೆಲಕಾಲ ಆತಂಕದ ವಾತಾವರಣ ಸೃಷ್ಟಿಯಾಯಿತು.

ವಿಷಯ ತಿಳಿದು ತಕ್ಷಣ ಸ್ಥಳಕ್ಕಾಗಮಿಸಿದ ಪಟ್ಟಣದ ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸಿ ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಅಗ್ನಿ ಶಾಮಕ ಠಾಣಾಧಿಕಾರಿ ಅಜಯ್‌ಕುಮಾರ್, ಸಿಬ್ಬಂದಿ ರಮೇಶ್, ಮಂಜುನಾಥ್, ಚಂದ್ರಶೇಖರ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಹುಲಿ ದಾಳಿಗೆ ಎತ್ತು ಬಲಿ

ಹೆಚ್.ಡಿ.ಕೋಟೆ, ಮೇ 14(ಮಂಜು)– ಹುಲಿ ದಾಳಿಗೆ ಎತ್ತು ಬಲಿಯಾಗಿರುವ ಘಟನೆ ತಾಲೂಕಿನ ಮೇಟಿಕುಪ್ಪೆ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಕಾಂತರಾಜು ಆಚಾರಿ ಅವರು ತಮ್ಮ ಜಮೀನಿನಲ್ಲಿ ಕಟ್ಟಿಗಿದ್ದ ಉಳುಮೆ ಮಾಡುವ ಎತ್ತಿನ ಮೇಲೆ ಶನಿವಾರ ಬೆಳಗ್ಗೆ ಹುಲಿ ದಾಳಿ ಮಾಡಿ ಕೊಂದಿದ್ದು, ಅರೆಬರೆ ತಿಂದು ಪರಾರಿಯಾಗಿದೆ. ಗ್ರಾಮಸ್ಥರು ಭಯ ಭೀತರಾಗಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ತಕ್ಷಣ ಹುಲಿಯನ್ನು ಸೆರೆ ಹಿಡಿಯಬೇಕು ಎಂದು ಒತ್ತಾಯಿಸಿದ್ದಾರೆ. ಗ್ರಾಮದಲ್ಲಿ ನಿತ್ಯವೂ ಜಾನುವಾರುಗಳು ಬಲಿಯಾಗುತ್ತಿವೆ. ಆದರೆ ಅರಣ್ಯ ಇಲಾಖೆ ಸೂಕ್ತ ಕ್ರಮ ಕೈಗೊಳ್ಳದೇ ಕಣ್ಣು ಮುಚ್ಚಿ ಕುಳಿತಿದೆ ಎಂದು ವಕೀಲ ರಾಜಾಚಾರಿ ಆರೋಪಿಸಿದ್ದಾರೆ. ಮೇಟಿಕುಪ್ಪೆ ವಲಯ ಅರಣ್ಯಾಧಿಕಾರಿ ಸಿದ್ದರಾಜು ಪ್ರತಿಕ್ರಿಯಿಸಿ, ಹುಲಿ ಕಾಡಿನಿಂದ ಹೊರ ಬರುತ್ತಿರುವ ಬಗ್ಗೆ ಮಾಹಿತಿ ದೊರೆತಿದೆ. ಈಗಾಗಲೇ ಜಾನುವಾರುಗಳು ಬಲಿಯಾಗಿರುವ ಹಿನ್ನೆಲೆಯಲ್ಲಿ ಅಲ್ಲಲ್ಲಿ ಕ್ಯಾಮೆರಾ ಅಳವಡಿಸಿ ಟ್ರಾಪ್ ಮಾಡಲಾಗುತ್ತಿದೆ. ತಕ್ಷಣವೇ ಹುಲಿ ಸೆರೆಬಗ್ಗೆ ಮೇಲಧಿಕಾರಿಗಳ ಅನುಮತಿ ಪಡೆದು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಧಾರಾಕಾರ ಮಳೆ : ಮೂಗೂರು ಮೋಳೆಯಲ್ಲಿ ಮನೆ ಗೋಡೆ ಕುಸಿತ

ಮೂಗೂರು, ಮೇ 14–ಕಳೆದ ಕೆಲ ದಿನಗಳಿಂದ ಎಡೆಬಿಡದೆ ಸುರಿದ ಧಾರಾಕಾರ ಮಳೆಯಿಂದಾಗಿ ಮನೆ ಗೋಡೆ ಕುಸಿದಿದ್ದು, ಮನೆಯವರು ಪ್ರಾಣಾಪಾಯದಿಂದ ಪಾರಾದ ಘಟನೆ ತಿ.ನರಸೀಪುರ ತಾಲೂಕಿನ ಮೂಗೂರುಮೋಳೆ ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ವೃದ್ಧೆ ರಾಜಮ್ಮ ಅವರ ವಾಸದ ಮನೆಯ ಗೋಡೆ ತಡರಾತ್ರಿ ಕುಸಿದು ಬಿದ್ದಿದೆ. ವೃದ್ಧೆ ರಾಜಮ್ಮ ಸೇರಿದಂತೆ 5 ಮಂದಿ ಮನೆಯಲ್ಲಿ ವಾಸವಿದ್ದು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಗೋಡೆ ಕುಸಿತದಿಂದ ವಾಸಕ್ಕೆ ಸೂರಿಲ್ಲದಂತಾಗಿದೆ ಎಂದು ಸಂತ್ರಸ್ತ ಕುಟುಂಬದವರು ತಮ್ಮ ಅಳಲು ತೋಡಿಕೊಂಡಿದ್ದು, ಸೂಕ್ತ ಪರಿಹಾರಕ್ಕೆ ಸಂಬಂಧಪಟ್ಟವರಿಗೆ ಮನವಿ ಮಾಡಿದ್ದಾರೆ.



ಹೆಚ್.ಡಿ.ಕೋಟೆ ತಾಲೂಕು ಡಾ. ಬಿ.ಆರ್.ಅಂಬೇಡ್ಕರ್ ಆದರ್ಶ ಕಲಾವಿದರ ಸಂಘದಿಂದ ಕಲಾವಿದರಾದ ಪುಟ್ಟರಾಜು ಕೋಟೆ ಅವರ ಸುಪುತ್ರ ದಿ। ಶಿವಪ್ರಸಾದ್ ಸ್ಮರಣಾರ್ಥ 3 ದಿನಗಳ ಪೌರಾಣಿಕ ನಾಟಕೋತ್ಸವವನ್ನು ಮೈಸೂರಿನ ಕಲಾಮಂದಿರದಲ್ಲಿ ಏರ್ಪಡಿಸಲಾಗಿದೆ. ಬೀರಿಹುಂಡಿ ಗೋವಿಂದರಾಜ್ ನಿರ್ದೇಶನದಲ್ಲಿ 'ದಕ್ಷಯಜ್ಞ' ಪೌರಾಣಿಕ ನಾಟಕ ಪ್ರದರ್ಶನವನ್ನು ಡಿಸಿಸಿ ಕಾರ್ಯದರ್ಶಿ ಹಾಗೂ ಮಾಜಿ ಗ್ರಾಪಂ ಸದಸ್ಯ ಹುಯಿಲಾಳು ರಾಮಸ್ವಾಮಿ ಶನಿವಾರ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಕುರ್ಗಳ್ಳಿ ಬೋರೇಗೌಡ, ನಾಗೇಂದ್ರ ಪ್ರಸಾದ್, ಮಡುವಿನ ಕೋಡಿ ಸತೀಶ್, ಗೆಜ್ಜಗಹಳ್ಳಿ ನಂಜಪ್ಪ, ಶೆಟ್ಟನಾಯಕನಹಳ್ಳಿ ಸಿದ್ಧಾರ್ಥ, ದಾಸನಕೊಪ್ಪಲು ಬೋರೇಗೌಡ ಉಪಸ್ಥಿತರಿದ್ದರು.

ಹೋಟೆಲ್ ಮೇಲೆ ಆರೋಗ್ಯಾಧಿಕಾರಿಗಳ ದಾಳಿ; 5 ಸಾವಿರ ರೂ. ದಂಡ

ತಿ.ನರಸೀಪುರ, ಮೇ 14–ತಿ.ನರಸೀಪುರ ಪಟ್ಟಣದ ಹೋಟೆಲ್‌ವೊಂದರ ಮೇಲೆ ದಾಳಿ ನಡೆಸಿದ ಪುರಸಭಾ ಆರೋಗ್ಯಾಧಿಕಾರಿಗಳು, ಹೋಟೆಲ್ ಮಾಲೀಕನಿಗೆ 5 ಸಾವಿರ ರೂ. ದಂಡ ವಿಧಿಸಿ, ನೋಟಿಸ್ ಜಾರಿ ಮಾಡಿದ್ದಾರೆ.

ಪಟ್ಟಣದ ಖಾಸಗಿ ಬಸ್ ನಿಲ್ದಾಣದ ಸಮೀಪವಿರುವ ಎಸ್‌ಆರ್ ಹೋಟೆಲ್‌ನಲ್ಲಿ ನಾಲ್ಕೈದು ದಿನಗಳ ಹಳಸಿದ ಆಹಾರ ನೀಡಲಾಗುತ್ತಿದೆ ಎಂದು ಸಾರ್ವಜನಿಕರಿಂದ ಬಂದ ದೂರನ್ನು ಆಧರಿಸಿ ಅಧಿಕಾರಿಗಳು ಹೋಟೆಲ್ ಮೇಲೆ ದಾಳಿ ನಡೆಸಿ, ಅಡುಗೆ ಮನೆ ಮುಂತಾದೆಡೆ ಅಶುಚಿತ್ವವಿದ್ದದ್ದು ಕಂಡು ಬಂದಿದೆ. ಆದರೆ ಹಳಸಿದ ಆಹಾರವಿದ್ದದ್ದು ಕಂಡು ಬಂದಿಲ್ಲ. ಈ ಹಿನ್ನೆಲೆಯಲ್ಲಿ ಹೋಟೆಲ್ ಮಾಲೀಕನಿಗೆ 5 ಸಾವಿರ ರೂ. ದಂಡ ವಿಧಿಸಿ, 3 ದಿನಗಳ ಒಳಗಾಗಿ ಶುಚಿತ್ವ ಕಾಪಾಡಿಕೊಳ್ಳಬೇಕು ಎಂದು ನೋಟಿಸ್ ನೀಡಿದ್ದಾರೆ.

ಶ್ರೀ ಚಿಕ್ಕದೇವಮ್ಮನಿಗೆ ವಿಶೇಷ ಪೂಜೆ



ಶ್ರೀಚಿಕ್ಕದೇವಮ್ಮ ಬೆಟ್ಟದಲ್ಲಿ ನಡೆದ ವಿಶೇಷ ಪೂಜಾ ಕಾರ್ಯಕ್ರಮದಲ್ಲಿ 24 ಮನೆ ತೆಲುಗುಶೆಟ್ಟರ ಜನಾಂಗದ ಅಧ್ಯಕ್ಷ ವಿ.ಮಂಜುನಾಥ್ ಮಾತನಾಡಿದರು.

ನಂಜನಗೂಡು, ಮೇ 14–ತಾಲೂಕಿನ ಕಳಲೆ ಗ್ರಾಮದ 24 ಮನೆ ತೆಲುಗುಶೆಟ್ಟರ ಜನಾಂಗದಿಂದ ಸರಗೂರು ತಾಲೂಕಿನ ಶ್ರೀಚಿಕ್ಕದೇವಮ್ಮಬೆಟ್ಟದಲ್ಲಿ ವಿಶೇಷ ಪೂಜೆ, ಅಭಿಷೇಕ ನೆರವೇರಿಸಲಾಯಿತು.

ಮಧ್ಯಾಹ್ನ ಮಹಾಮಂಗಳಾರತಿ ನೆರವೇರಿಸಿ ಭಕ್ತಾದಿಗಳಿಗೆ ಅನ್ನದಾಸೋಹ ನಡೆಯಿತು. ರಾಜ್ಯದ ವಿವಿಧ ಭಾಗಗಳಿಂದ 24 ಮನೆ ತೆಲುಗುಶೆಟ್ಟರ ಜನಾಂಗದ ಕುಲಬಾಂಧವರು ಆಗಮಿಸಿ ದೇವರಿಗೆ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಶಾಸಕರಾದ ಹರ್ಷವರ್ಧನ್, ಶಾಸಕ ಅನಿಲ್ ಚಿಕ್ಕಮಾದು, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಮೈವಿವಿ ಕುಲಪತಿ ಪ್ರೊ.ಜಿ.ಹೇಮಂತ ಕುಮಾರ್, ಬಿಜೆಪಿ ರಾಷ್ಟ್ರೀಯ ಪರಿಷತ್ ಸದಸ್ಯ ಬೂದಬಾಳು ವೆಂಕಟಸ್ವಾಮಿ, ಜನಾಂಗದ ರಾಜ್ಯಾಧ್ಯಕ್ಷ ವಿ.ಮಂಜುನಾಥ್, ಜಿಪಂ ಮಾಜಿ ಸದಸ್ಯ ಕಳಲೆ ಎನ್.ಮಹದೇವು, ಜನಾಂಗದ ಮುಖಂಡರಾದ ವಿಶ್ವಾಶೆಟ್ಟಿ, ಮಹದೇವುಶೆಟ್ಟಿ, ವೀರಭದ್ರಶೆಟ್ಟಿ, ಜೆ.ರಾಜುಶೆಟ್ಟಿ, ತೋಟಪ್ಪಶೆಟ್ಟಿ, ಪುಷ್ಪಶೆಟ್ಟಿ, ನಾಗರಾಜಶೆಟ್ಟಿ, ವೆಂಕಟರಾಮಣ್ಣ ಶೆಟ್ಟಿ, ಕೃಷ್ಣಶೆಟ್ಟಿ, ನಾಗರಾಜಶೆಟ್ಟಿ, ಕೆ.ಸಿ.ರಾಘವೇಂದ್ರ, ಬಸವರಾಜಶೆಟ್ಟಿ, ಉಮೇಶ್, ಶ್ರೀನಿವಾಸ್, ಮಂಜು, ಎಸ್.ವಿ.ವಸಂತಕುಮಾರ್ ಸೇರಿದಂತೆ ಮತ್ತಿತರರಿದ್ದರು.

ನಾಳೆಯಿಂದ ಉಚಿತ ಸಿಇಟಿ ತರಬೇತಿ

ನಂಜನಗೂಡು, ಮೇ 14– ಮೈಸೂರಿನ ಮಹಾರಾಜ ತಾಂತ್ರಿಕ ಮಹಾ ವಿದ್ಯಾಲಯ ತಾಂಡವಪುರ ಕಾಲೇಜಿನಲ್ಲಿ ಪ್ರತಿ ವರ್ಷ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಮೇ 16ರಿಂದ 27ರವರೆಗೆ ಉಚಿತ ಸಿಇಟಿ ತರಬೇತಿ ಆಯೋಜಿಸಲಾಗಿದೆ.

ಮೇ 16ರಂದು ತರಬೇತಿ ಕಾರ್ಯಕ್ರಮವನ್ನು ಹೊಸಕೋಟೆಯ ಮೊರಾರ್ಜಿ ದೇಸಾಯಿ ಕಾಲೇಜಿನ ಪ್ರಾಂಶುಪಾಲೆ ನಂದಿನಿ.ಸಿ.ಎಸ್ ಉದ್ಘಾಟಿಸುವರು. ಚಾಮರಾಜನಗರ, ನಂಜನಗೂಡು, ಪಾಂಡವಪುರ, ಮೈಸೂರಿನಿಂದ ಬಸ್ ಸೌಲಭ್ಯವಿದ್ದು, ತರಬೇತಿ ಅವಧಿಯಲ್ಲಿ ಮಧ್ಯಾಹ್ನದ ಊಟ ನೀಡಲಾಗುವುದು.

ಆಸಕ್ತ ವಿದ್ಯಾರ್ಥಿಗಳು ಪ್ರೊ.ಪ್ರದೀಪ್ (8310854887) ರನ್ನು ಸಂಪರ್ಕಿಸಬಹುದು ಎಂದು ಕಾಲೇಜು ಪ್ರಾಂಶುಪಾಲ ಡಾ.ವೈ.ಟಿ. ಕೃಷ್ಣೇಗೌಡ ತಿಳಿಸಿದ್ದಾರೆ.

ತಿ.ನರಸೀಪುರ: ಮೈ.ವಿ.ರವಿಶಂಕರ್ ಪರ ಮತಯಾಚನೆ



ವಿಧಾನಪರಿಷತ್ ಚುನಾವಣೆ ಹಿನ್ನೆಲೆ ಮೆಲ್ಲಹಳ್ಳಿಯಲ್ಲಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಬಿಜೆಪಿ ಕ್ಷೇತ್ರಾಧ್ಯಕ್ಷ ಕಲ್ಮಳ್ಳಿ ವಿಜಯಕುಮಾರ್ ಮತಯಾಚಿಸಿದರು.

ತಿ.ನರಸೀಪುರ, ಮೇ 14(ಎಸ್‌ಕೆ)– ಪ್ರಾದೇಶಿಕ ಭಾಷೆಗಳಿಗೆ ಪ್ರಾಮುಖ್ಯತೆ ನೀಡಿ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ರಾಷ್ಟ್ರೀಯ ಶಿಕ್ಷಣ ನೀತಿಯ ಮಹತ್ವವನ್ನು ಅರಿತಿರುವ ಪದವೀಧರ ಮತದಾರರು ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರು ಸಾಮಾಜಿಕ ಬದ್ಧತೆ ಪರಿಗಣಿಸಿ ವಿಧಾನ ಪರಿಷತ್‌ನ ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿಸಿ ಗೆಲ್ಲಿಸಲಿದ್ದಾರೆ ಎಂದು ವರುಣಾ ವಿಧಾನ ಸಭಾ ಕ್ಷೇತ್ರದ ಅಧ್ಯಕ್ಷ ಕಲ್ಮಳ್ಳಿ ವಿಜಯಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ವರುಣಾ ವಿಧಾನಸಭಾ ಕ್ಷೇತ್ರದ ಮೆಲ್ಲಹಳ್ಳಿ, ಹಾರೋಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ನೋಂದಾಯಿತ ಪದವೀಧರ ಮತದಾರರನ್ನು ಭೇಟಿಯಾಗಿ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಮತ ಯಾಚಿಸಿ ಮಾತನಾಡಿದರು. ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಮೆಚ್ಚಿರುವ ಪ್ರಜ್ಞಾವಂತ ಮತದಾರರು ರವಿಶಂಕರ್ ಅವರು ಕಳೆದ ಚುನಾವಣೆಯಲ್ಲಿ ಪರಾಭವಗೊಂಡಿರುವುದರಿಂದ ಈ ಬಾರಿ ಕೈ ಹಿಡಿಯಲಿದ್ದಾರೆ ಎಂಬ ನಂಬಿಕೆ ಇದೆ. ಚುನಾವಣೆ ಘೋಷಣೆಗೂ ಮೊದಲು 5 ಜಿಲ್ಲೆಗಳಲ್ಲಿನ 27 ತಾಲೂಕು ಕೇಂದ್ರಗಳಲ್ಲಿಯೂ ಕಾರ್ಯಪ್ರವೃತ್ತರಾಗಿದ್ದ ಪಕ್ಷದ ಕಾರ್ಯಕರ್ತರು ಮತದಾರರ ಮನವೊಲಿಸಿದ್ದಾರೆ. ಬಿಜೆಪಿ ಗೆಲ್ಲುವುದು ಖಚಿತ ಎಂದು ಕಲ್ಮಳ್ಳಿ ವಿಜಯಕುಮಾರ್ ತಿಳಿಸಿದರು.

ವರುಣಾ ಕ್ಷೇತ್ರದ ಹಾರೋಹಳ್ಳಿ, ಮೆಲ್ಲಹಳ್ಳಿ, ವರಕೂಡು ಹಾಗೂ ಕೀಳನಪುರ ಗ್ರಾಪಂ ವ್ಯಾಪ್ತಿಯಲ್ಲಿ ಅಭ್ಯರ್ಥಿ ಪರ ಮತ ಯಾಚಿಸಲಾಯಿತು. ಪ್ರಧಾನ ಕಾರ್ಯದರ್ಶಿ ಗಣದ ಎ.ಎನ್.ರುಗುನಾಯಕ, ವರುಣಾ ಮಂಜುನಾಥ್, ಸಂಚಾಲಕರಾದ ಲಲಿತಾದ್ರಿಪುರ ಮಹದೇವ, ಮಹಾಶಕ್ತಿ ಕೇಂದ್ರ ಅಧ್ಯಕ್ಷ ಸ್ವಾಮಿ, ಪಿಜಿಹುಂಡಿ ಮಹೇಶ, ಬಡಗಲಹುಂಡಿ ರಮೇಶ, ಮೂಡಲಹುಂಡಿ ರಾಜು, ಮೆಲ್ಲಹಳ್ಳಿ ನಾಗೇಶಗೌಡರು ಇತರರಿದ್ದರು.

ಯುವತಿ ನಾಪತ್ತೆ



ಹುಣಸೂರು, ಮೇ 14(ಕೆಕೆ)– ಕಾಲೇಜಿಗೆ ಹೋಗಿ ಬರುವುದಾಗಿ ಮನೆಯಿಂದ ಹೊರ ಹೋದ ಯುವತಿಯೊಬ್ಬಳು ನಾಪತ್ತೆಯಾಗಿರುವ ಪ್ರಕರಣ ಬಿಳಿಕೆರೆ ಠಾಣಾ ವ್ಯಾಪ್ತಿಯಲ್ಲಿ ಜರುಗಿದೆ.

ಯುವತಿಯ ತಂದೆ ಸೋಮಯ್ಯ ಬಿಳಿಕೆರೆ ಠಾಣೆಗೆ ಬಂದು ನನ್ನ ಮಗಳು ಪ್ರಿಯಾಂಕ(19) ಹುಣಸೂರಿನ ಬಾಲಕಿಯರ ಕಾಲೇಜಿನಲ್ಲಿ ಪ್ರಥಮ ಬಿ.ಎ ವ್ಯಾಸಂಗ ಮಾಡುತ್ತಿದ್ದು, ಏ.18 ರಂದು ಕಾಲೇಜಿಗೆ ಹೋಗಿ ಬರುವುದಾಗಿ ಮನೆಯಿಂದ ಹೊರ ಹೋದವಳು ಮನೆಗೆ ಹಿಂತಿರುಗಿ ಬಂದಿಲ್ಲ ಎಂದು ದೂರು ನೀಡಿದ್ದಾರೆ. ಈಕೆಯ ಬಗ್ಗೆ ಮಾಹಿತಿ ತಿಳಿದಲ್ಲಿ ಬಿಳಿಕೆರೆ ಠಾಣೆಯ ದೂರವಾಣಿ ಸಂಖ್ಯೆ–82222 40002 ಅಥವಾ 9480805057 ನಂಬರಿಗೆ ತಿಳಿಸಲು ಕೋರಲಾಗಿದೆ.

ಹುಣಸೂರು ಬಾಲ್ಯವಿವಾಹ ಮುಕ್ತ ತಾಲೂಕನ್ನಾಗಿಸಲು ಕ್ರಮ

● ಜಾಗೃತಿ ಸಭೆಯಲ್ಲಿ ತಹಸೀಲ್ದಾರ್ ಡಾ. ಅಶೋಕ್ ಭರವಸೆ ● ಬಾಲ್ಯವಿವಾಹ, ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ಜಾಗೃತಿ ಸಭೆ ನಡೆಸಲು [illegible] ಸೂಚನೆ



ಹುಣಸೂರು, ಮೇ 14(ಕೆಕೆ)–ಹುಣಸೂರು ತಾಲೂಕನ್ನು ಬಾಲ್ಯವಿವಾಹ ಮುಕ್ತ ತಾಲೂಕನ್ನಾಗಿ ಮಾಡಲು ಎಲ್ಲಾ ರೀತಿಯ ಕ್ರಮ ಕೈಗೊಳ್ಳಲಾಗುವುದು ಎಂದು ತಹಸೀಲ್ದಾರ್ ಡಾ.ಅಶೋಕ್ ಭರವಸೆ ನೀಡಿದ್ದಾರೆ.

ನಗರದ ತಾಪಂ ಸಭಾಂಗಣದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಆಯೋಜಿಸಿದ್ದ ಜಾಗೃತಿ ಸಭೆಯಲ್ಲಿ ಬೆಳಕು ಸೇವಾ ಸಂಸ್ಥೆ ಪರವಾಗಿ ಸಂಸ್ಥೆಯ ಮುಖಂಡ ನಿಂಗರಾಜ್ ಮಲ್ಲಾಡಿ, ತಾಲೂಕಲ್ಲಿ ಬಾಲ್ಯವಿವಾಹ ಹೆಚ್ಚಾಗುತ್ತಿರುವ ಬಗ್ಗೆ ಗಮನ ಸೆಳೆದರು.

ತಾಲೂಕಿನ ಹಲವಾರು ಗ್ರಾಮಗಳಲ್ಲಿ ಕೋವಿಡ್ ಸಂದರ್ಭದಿಂದ ಇಲ್ಲಿಯವರೆಗೂ ಬಾಲ್ಯವಿವಾಹಗಳು ಹೆಚ್ಚು ನಡೆದಿದೆ. ಇದನ್ನು ಶೀಘ್ರದಲ್ಲೇ ತಡೆಗಟ್ಟಬೇಕು ಹಾಗೂ ನಗರದಲ್ಲಿ ಚಿಂದಿ ಆಯುವ ಮಕ್ಕಳ ರಕ್ಷಣೆಗೆ ತಾಲೂಕು ಆಡಳಿತ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಪೊಲೀಸ್ ಇಲಾಖೆ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಹುಣಸೂರು ನಗರದಲ್ಲಿ ಗುಜರಿ ಕೇಂದ್ರಗಳಲ್ಲಿ 25ಕ್ಕೂ ಹೆಚ್ಚು ನಿರ್ಗತಿಕ ಅಲೆಮಾರಿ ಹಾಗೂ ಚಿಂದಿ ಆಯುವ ಮಕ್ಕಳು ಕೆಲಸ ಮಾಡುತ್ತಿದ್ದು, ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಕೆಲ ಮಕ್ಕಳಿಗೆ ಪೋಷಕರಿದ್ದರೂ ಮಕ್ಕಳ ಜವಾಬ್ದಾರಿ ತೆಗೆದುಕೊಳ್ಳುತ್ತಿಲ್ಲ ಎಂದು ದೂರಿದರು.

ದಲಿತ ಮುಖಂಡ ಡಿ.ಕುಮಾರ್ ಮಾತನಾಡಿ, ಬಾಲ್ಯವಿವಾಹ ಸಮಾಜದ ಒಂದು ಅನಿಷ್ಟ ಪದ್ಧತಿಯಾಗಿದ್ದು, ಈ ಪದ್ಧತಿ ನಿರ್ಮೂಲನೆ ಮಾಡಲು ಅಧಿಕಾರಿಗಳು, ಸ್ವಯಂ ಸೇವಾ ಸಂಸ್ಥೆಯ ಮುಖ್ಯಸ್ಥರು ಮತ್ತು ಸಮಾಜದ ಪ್ರಜ್ಞಾವಂತರಿಂದ ಸಂಘಟಿತ ಪ್ರಯತ್ನ ಅಗತ್ಯವಿದೆ. ಈ ನಿಟ್ಟಿನಲ್ಲಿ ಬಾಲ್ಯವಿವಾಹವನ್ನು ತಡೆಗಟ್ಟಿ ಹೆಣ್ಣು ಮಕ್ಕಳ ಮೇಲೆ ಆಗುವ ಶೋಷಣೆ ಮತ್ತು ದೌರ್ಜನ್ಯಗಳನ್ನು ನಿರ್ಮೂಲನೆ ಮಾಡಬೇಕಾಗಿದೆ ಎಂದರು.

ತಾಪಂ ಇಓ ಗಿರೀಶ್ ಮಾತನಾಡಿ, ತಾಲೂಕಿನ ಎಲ್ಲಾ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳಿಗೆ ಇಂದೇ ನಿರ್ದೇಶನ ನೀಡಿ, ಗ್ರಾಮೀಣ ಪ್ರದೇಶಗಳಲ್ಲಿ ಬಾಲ್ಯವಿವಾಹ, ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳನ್ನೂ ಗಂಭೀರವಾಗಿ ಪರಿಗಣಿಸುವಂತೆ ಹಾಗೂ ಜನರಿಗೆ ಜಾಗೃತಿ ಮೂಡಿಸಲು ಸಭೆಗಳನ್ನು ನಡೆಸುವಂತೆ ಸೂಚಿಸಲಾಗುವುದು ಎಂದರು. ಈ ವೇಳೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ ರಶ್ಮಿ, ಆರೋಗ್ಯ ಇಲಾಖೆಯ ರಾಜೇಶ್ವರಿ, ಮಕ್ಕಳ ಮಾರ್ಗಸೂಚಿ ಅಧಿಕಾರಿಗಳಾದ ಧರ್ಮರಾಜ್, ಡೀಡ್ ಸಂಸ್ಥೆಯ ಪ್ರಕಾಶ್, ಡಾನ್ ಬೋಸ್ಕೋ ಮಕ್ಕಳಾಲಯದ ಮಹಿಳಾ ಅಧಿಕಾರಿಗಳು, ಮತ್ತು ವಿವಿಧ ಇಲಾಖೆ ಅಧಿಕಾರಿಗಳಿದ್ದರು.

ಎಸ್‌ಆರ್‌ಹೆಚ್ ವಿರುದ್ಧ ಕೆಕೆಆರ್‌ಗೆ ಭರ್ಜರಿ ಗೆಲುವು

ಪುಣೆ, ಮೇ 14– ಆ್ಯಂಡ್ರೆ ರಸೆಲ್ ಆಲ್‌ರೌಂಡ್ ಆಟದ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಕೋಲ್ಕತ್ತ ನೈಟ್ ರೈಡರ್ಸ್ 54ರನ್‌ಗಳ ಭರ್ಜರಿ ಗೆಲುವು ದಾಖಲಿಸಿತು.



ಇದರೊಂದಿಗೆ ಕೆಕೆಆರ್, 13 ಪಂದ್ಯಗಳಲ್ಲಿ 6ನೇ ಗೆಲುವು ದಾಖಲಿಸಿದ್ದು, ಒಟ್ಟು 12 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ 6ನೇ ಸ್ಥಾನಕ್ಕೆ ಲಗ್ಗೆಯಿಟ್ಟಿದೆ. ಅಲ್ಲದೆ ಪ್ಲೇ–ಆಫ್ ಕನಸನ್ನು ಜೀವಂತವಾಗಿರಿಸಿದೆ.

ಇಲ್ಲಿನ ಮಹಾರಾಷ್ಟ್ರ ಕ್ರಿಕೆಟ್ ಅಸೋಸಿಯನ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್ ಆರಂಭದಲ್ಲಿ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಈ ವೇಳೆ ಆ್ಯಂಡ್ರೆ ರಸೆಲ್ ಅಜೇಯ 49ರನ್ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 177 ರನ್‌ಗಳ ಸ್ಪರ್ಧಾತ್ಮಕ ಮೊತ್ತ ದಾಖಲಿಸಿತು. ತಂಡದ ಪರವಾಗಿ ವೆಂಕಟೇಶ್ ಅಯ್ಯರ್ 7, ರಹಾನೆ 28, ನಿತಿಶ್‌ರಾಣಾ 26, ಶ್ರೇಯಸ್ ಅಯ್ಯರ್ 15, ಸ್ಯಾಮ್‌ಬಿಲ್ಲಿಂಗ್ಸ್ 34 ರನ್ ಗಳಿಸಿದರು. ಬೌಲಿಂಗ್‌ನಲ್ಲಿ ಉಮ್ರಾನ್ ಮಲಿಕ್ 3, ಭುವನೇಶ್ವರ್ ಕುಮಾರ್, ಟಿ.ನಟರಾಜನ್, ಮಾರ್ಕೊ ಜಾನ್ಸೆನ್ ತಲಾ ಒಂದೊಂದು ವಿಕೆಟ್ ಪಡೆದರು.

ಬಳಿಕ 178 ರನ್‌ಗಳ ಗುರಿ ಬೆನ್ನತ್ತಿದ್ದ ಎಸ್‌ಆರ್‌ಹೆಚ್‌ಗೆ ಅಭಿಷೇಕ್ ಶರ್ಮಾ ಉತ್ತಮ ಆರಂಭವೊದಗಿಸಿದರು. ಈ ನಡುವೆ ನಾಯಕ ಕೇನ್ ವಿಲಿಯಮ್ಸ್ 9 ಹಾಗೂ ತ್ರಿಪಾಠಿ 9 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಅತ್ತ ಬಿರುಸಿನ ಬ್ಯಾಟಿಂಗ್ ಮಾಡಿದ ಅಭಿಷೇಕ್ 43 ರನ್ ಗಳಿಸಿ ಔಟಾದರು. ಈ ಮಧ್ಯೆ ಏಡನ್ ಮಾರ್ಕರಮ್ ಸಹ 32 ರನ್‌ಗಳ ಕಾಣಿಕೆ ನೀಡಿದರು ಕೂಡ ತಂಡವನ್ನು ಗೆಲುವಿನ ದಡ ಸೇರಿಸುವಲ್ಲಿ ವಿಫಲರಾದರು. ಅಂತಿಮವಾಗಿ ಹೈದರಾಬಾದ್ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 123 ರನ್ ಗಳಿಸಿ 54 ರನ್‌ಗಳಿಂದ ಸೋಲನ್ನೊಪ್ಪಿಕೊಂಡಿತ್ತು.

ತಂಡದ ಪರವಾಗಿ ಪೂರನ್ 2, ವಾಸಿಂಗ್ಟನ್ ಸುಂದರ್ 4, ಶಂಶಾಕ್‌ಸಿಂಗ್ 11 ರನ್ ಗಳಿಸಿದರು. ಬೌಲಿಂಗ್‌ನಲ್ಲಿ ಕೆಕೆಆರ್ ಪರವಾಗಿ ರಸೆಲ್ 3, ಸೌಥಿ 2, ವರುಣ್ ಚಕ್ರವರ್ತಿ, ಉಮೇಶ್ ಯಾದವ್, ನರೈನ್ ತಲಾ ಒಂದೊಂದು ವಿಕೆಟ್ ಪಡೆದರು. ಉತ್ತಮ ಬ್ಯಾಟಿಂಗ್, ಬೌಲಿಂಗ್ ಮಾಡಿದ ರಸೆಲ್ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.


ಶ್ರೀ ಮಹಾಲಿಂಗೇಶ್ವರ ಕೃಪಾ ಪೋಷಿತ ನಾಟಕ ಮಂಡಳಿ
ಆಲನಹಳ್ಳಿ ಗ್ರಾಮ, ಕಸಬಾ ಹೋಬಳಿ, ಮೈಸೂರು ತಾಲ್ಲೂಕು
ಬಸವಜಯಂತಿ ಪ್ರಯುಕ್ತ ದಿನಾಂಕ 15-05-2022ನೇ ಭಾನುವಾರ
ರಾತ್ರಿ 9-00 ಗಂಟೆಗೆ ಆಲನಹಳ್ಳಿ ಗ್ರಾಮ ಪಂಚಾಯ್ತಿ ಮುಂಭಾಗದಲ್ಲಿ
ಶ್ರೀಯಾಂಕ್ ಪಾತ್ರ : ಸೂತ್ರಧಾರಿ
ಮಹದೇವಪ್ರಸಾದ್ ಎಂ. ಪಾತ್ರ : ನಂದೀಶ್ವರ
ಮಹದೇವು ಬುಗತಗಳ್ಳಿ ಪಾತ್ರ : ಈಶ್ವರ
ಮಹದೇವು, ಬುಗತಗಳ್ಳಿ ಪಾತ್ರ : ಬೃಗುಮುನಿ
ದಕ್ಷ ಯಜ್ಞ
ಅಥವಾ
ಬ್ರುಗುಮುನಿಯ ಗರ್ವಭಂಗ
ನಾಟಕಕ್ಕೆ ಸರ್ವರಿಗೂ ಸುಸ್ವಾಗತ
ಎಂ. ಮಹದೇವು, ಡ್ರಾಮಾ ಮಾಸ್ಟರ್ ಜನತಾನಗರ, ಮೈಸೂರು
ವಿ. ಸಿದ್ದಪ್ಪ ವಾಜಮಂಗಲ ಪಾತ್ರ : ನಾರದ
ನಾಗೇಂದ್ರ ಪಾತ್ರ : ಚಂದ್ರಮ
ಪುಟ್ಟಲಿಂಗಪ್ಪ ಪಾತ್ರ : ವಸುಂದರ
ನಲ್ಲಿ ಸಿದ್ದಪ್ಪ ಕಲಾ ಪ್ರೋತ್ಸಾಹಕರು
ನಾಡಗೌಡರ ಶ್ರೀಕಾಂತ್ ಕಲಾ ಪ್ರೋತ್ಸಾಹಕರು
ಜಗದೀಶ್ ಕಲಾ ಪ್ರೋತ್ಸಾಹಕರು
ಬಸವರಾಜು ಎ.ಎಂ. ಕಲಾ ಪ್ರೋತ್ಸಾಹಕರು
ಪಿ.ಮಹೇಶ್ ಸ್ಟೇಜ್ ಮ್ಯಾನೇಜರ್
ಮಂಜು ಎಂ. ಸ್ಟೇಜ್ ಮ್ಯಾನೇಜರ್
ಶಿವಸ್ವಾಮಿ ಸ್ಟೇಜ್ ಮ್ಯಾನೇಜರ್
ಮಹದೇವಪ್ರಸಾದ್ (ಮಧು) ಮಾಲೀಕರು, ಸಿದ್ದು ಅಕ್ಕ ಬೀವರೇಜಸ್ ಸ್ಟೇಜ್ ಮ್ಯಾನೇಜರ್
ತಾರಾ ಪ್ರಿಂಟ್ಸ್, ಮೈಸೂರು 94480 74435


ಕೆಪಿಸಿಸಿ ಅಧ್ಯಕ್ಷರಾದ
ಶ್ರೀ ಡಿ.ಕೆ. ಶಿವಕುಮಾರ್ ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಪಿ. ಪ್ರಶಾಂತ್‌ಗೌಡ
ಮಾಜಿ ಸದಸ್ಯರು, ಮೈಸೂರು ಮಹಾನಗರ ಪಾಲಿಕೆ
ಎಂ. ಶ್ರೀನಿವಾಸ್ ಕುಮಾರ್
ಪ್ರ.ಕಾರ್ಯದರ್ಶಿ, ಡಿಸಿಸಿ ಮೈಸೂರು
Print
+91 9620066411


ಕೆ.ಪಿ.ಸಿ.ಸಿ. ಅಧ್ಯಕ್ಷರಾದ
ಸನ್ಮಾನ್ಯ ಶ್ರೀ ಡಿ.ಕೆ.ಶಿವಕುಮಾರ್ ರವರಿಗೆ
ಜನುಮದಿನದ ಶುಭಾಶಯಗಳು
ಶುಭಕೋರುವವರು : ಮೈಸೂರು ನಗರ - ಚಾಮರಾಜ ವಿಧಾನಸಭಾ ಕ್ಷೇತ್ರ, ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು
ಗ್ರಾಫಿಕ್ ವರ್ಲ್ಡ್
GRAPHIC WORLD
9535370787